


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 27 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 102 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಮುಡಾದಿಂದ 50:50 ಅನುಪಾತದಡಿ ಪತ್ನಿಗೆ ನಿವೇಶನ ಹಂಚಿಕೆ ವಿಚಾರ

ಬಿಜೆಪಿ, ಜೆಡಿಎಸ್ ಆರೋಪಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

ದಾಖಲೆಗಳ ಮೂಲಕ ಪ್ರತ್ಯುತ್ತರ

- ವಿಪಕ್ಷಗಳ ಆರೋಪದಲ್ಲಿ ಹುರುಳಿಲ್ಲ; ಬಿಜೆಪಿಯವರು ಮನೆ ಮುರುಕರು
- ನಮ್ಮ ಭಾವಮೈದುನ ಖರೀದಿಸಿದ ಜಮೀನು ಪಿಟಿಸಿಎಲ್ ಕಾಯ್ದೆಯಡಿ ಬರಲ್ಲ; ಈ ಜಮೀನು ಸ್ವಯಾರ್ಜಿತ ಆಸ್ತಿ

ಬೆಂಗಳೂರು, ಜು.26(ಕೆಎಂಶಿ)– ಕುಟುಂಬದಲ್ಲಿ ಅನ್ಯೋನ್ಯರಾಗಿದ್ದವರನ್ನು ಪರಸ್ಪರ ಎತ್ತಿಕಟ್ಟಿ ಮನೆ ಮುರುಕ ರಾಜಕಾರಣ ಮಾಡುತ್ತಿದ್ದಾರೆಂದು ಬಿಜೆಪಿ ಮತ್ತು ಜೆಡಿಎಸ್ ಶಾಸಕರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಹಂಚಿಕೆಯಲ್ಲಿ ನನ್ನದಾಗಲಿ, ನಮ್ಮ ಪತ್ನಿಯದ್ದಾಗಲೀ, ನನ್ನ ಭಾವಮೈದುನನ ಪಾತ್ರ ಇಲ್ಲವೇ ಇಲ್ಲ. ಕೇವಲ ಪತ್ರಿಕಾ ತುಣುಕುಗಳನ್ನು ಇಟ್ಟುಕೊಂಡು ನನ್ನ ಮುಖಕ್ಕೆ ಮಸಿ ಬಳಿಯಲು ಹೊರಟಿದ್ದಾರೆಂದು ದೂರಿದರು.

ವಿಧಾನಮಂಡಲದ ಅಧಿವೇಶನ ಮುಗಿಯುತ್ತಿದ್ದಂತೆ ಇಂದು ತುರ್ತು ಪತ್ರಿಕಾಗೋಷ್ಠಿ ಕರೆದ ಮುಖ್ಯಮಂತ್ರಿ ಅವರು, ತಮ್ಮ ಕುಟುಂಬದ ಮೇಲಿನ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ ಎಂದು ದಾಖಲೆಗಳನ್ನು ಮುಂದಿಟ್ಟರು.

ಈ ಜಮೀನು ಪಿಟಿಸಿಎಲ್ ಕಾಯ್ದೆಯಡಿ ಬರಲ್ಲ: ಕುಟುಂಬದವರನ್ನೇ ಎತ್ತಿಕಟ್ಟಿ ಕೊಳಕು, ಮನೆ ಮುರುಕ ರಾಜಕಾರಣಕ್ಕೆ ಬಿಜೆಪಿ, ಜೆಡಿಎಸ್‌ನವರು ಇಳಿದಿದ್ದಾರೆ. ನಮ್ಮ ಭಾವಮೈದುನ, ನಿಂಗ ಅವರಿಂದ ಖರೀದಿ ಮಾಡಿರುವ ಜಮೀನು ಪಿಟಿಸಿಎಲ್ ಕಾಯ್ದೆಯಡಿ ಬರುವುದೇ ಇಲ್ಲ ಎಂದು 1935ನೇ ಇಸವಿಯ ದಾಖಲೆಗಳನ್ನು ಪ್ರದರ್ಶಿಸಿದರು.

ನನ್ನ ರಾಜಕೀಯ ಜೀವನ ತೆರೆದ ಪುಸ್ತಕ, ಪ್ರತಿ ಪುಟಗಳು ಪಾರದರ್ಶಕ ಮತ್ತು ಪ್ರಾಮಾಣಿಕ. ಸಣ್ಣದೊಂದು ಕಪ್ಪು ಚುಕ್ಕೆ ಇಲ್ಲದಂತೆ ರಾಜಕೀಯದ ■ 6ನೇ ಪುಟಕ್ಕೆ


ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 30ಕ್ಕೆ ಹೈಕಮಾಂಡ್ ಭೇಟಿ?

ರಾಜ್ಯದಲ್ಲಿ ಮುಡಾ ಹಗರಣ, ಮಹರ್ಷಿ ವಾಲ್ಮೀಕಿ ನಿಗಮ ಹಗರಣಗಳ ಸಂಬಂಧ ವಿರೋಧ ಪಕ್ಷಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ, ಹೋರಾಟ ನಡೆಸುತ್ತಿರುವುದರ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ, ವರಿಷ್ಠರ ಭೇಟಿಗೆ ನಿರ್ಧರಿಸಿದ್ದಾರೆ ಎನ್ನಲಾಗುತ್ತಿದೆ. ಮುಂದಿನ ಮಂಗಳವಾರ, (ಜು.30) ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ತೆರಳಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆಸಿ ವೇಣುಗೋಪಾಲ್ ಮತ್ತು ಇತರ ಹಿರಿಯ ನಾಯಕರನ್ನು ಭೇಟಿ ಮಾಡಿ ರಾಜ್ಯದಲ್ಲಿ ಕೇಳಿಬರುತ್ತಿರುವ ಹಗರಣಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದು ತಿಳಿದುಬಂದಿದೆ. ಈ ಎರಡು ಹಗರಣಗಳ ಆರೋಪಗಳು ಒಂಬತ್ತು ದಿನಗಳ ಸಂಪೂರ್ಣ ಮುಂಗಾರು ಅಧಿವೇಶನವನ್ನು ನುಂಗಿಹಾಕಿವೆ. ■ 6ನೇ ಪುಟಕ್ಕೆ



ಕೆಆರ್‌ಎಸ್ ಬೃಂದಾವನ ಉದ್ಯಾನವನ ಮೇಲ್ದರ್ಜೆಗೇರಿಸಲು ಸಂಪುಟ ಒಪ್ಪಿಗೆ


ಹೆಚ್.ಕೆ.ಪಾಟೀಲ್

ಬೆಂಗಳೂರು, ಜು.26– ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ಕೆಆರ್‌ಎಸ್ ಬೃಂದಾವನ ಉದ್ಯಾನವನವನ್ನು ಮೇಲ್ದರ್ಜೆಗೇರಿಸಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಬರೋಬ್ಬರಿ 2,633 ಕೋಟಿ ರೂ. ವೆಚ್ಚದಲ್ಲಿ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಗೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಿದ್ದು, ವಾಟರ್ ಸ್ಪೋರ್ಟ್ಸ್, ಹೆಲಿಪ್ಯಾಡ್, ಫೈವ್‌ಸ್ಟಾರ್ ಹೋಟೇಲ್, ಫ್ಲಾಜಾ, ಗ್ರ್ಯಾಂಡ್ ವೆಲ್ ಕಮ್ ಆರ್ಚ್, ಮಕ್ಕಳಿಗಾಗಿ ಸ್ಪೆಷಲ್ ಚಿಲ್ಡ್ರನ್ ಪಾರ್ಕ್ ಸೇರಿ ಹಲವು ವೈಶಿಷ್ಟ್ಯ ಹೊಂದಿರುವಂತೆ ಕೆಆರ್‌ಎಸ್ ಬೃಂದಾವನ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಕೃಷ್ಣರಾಜ ಸಾಗರ ಜಲಾಶಯದ ಕೆಳ ಭಾಗದಲ್ಲಿನ 198 ಎಕರೆ ಜಾಗದಲ್ಲಿ ಉದ್ಯಾನವನ ಸೌಂದರ್ಯೀಕರಣ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲು ಈಗಾಗಲೇ ನೀಡಿರುವ ಅನುಮೋದನೆಯಂತೆ ಟೆಂಡರ್ ಕರೆಯುವ ಪ್ರಸ್ತಾವನೆಗೆ ಸಚಿವ ಸಂಪುಟ ಅನುಮೋದಿಸಿದೆ ಎಂದರು.

ಕೃಷ್ಣರಾಜಸಾಗರ ಆಣೆಕಟ್ಟೆಯ ಬೃಂದಾವನ ಉದ್ಯಾನವನವನ್ನು ವಿಶ್ವ ದರ್ಜೆಗೆ ಉನ್ನತೀಕರಣಗೊಳಿಸುವ ಕಾಮಗಾರಿಗಳ ವಿಸ್ತೃತ ಯೋಜನಾ ವರದಿಯನ್ನು ಆರ್ಥಿಕ ಇಲಾಖೆ, ಯೋಜನಾ ಇಲಾಖೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ■ 6ನೇ ಪುಟಕ್ಕೆ

ರಾಮನಗರ ಜಿಲ್ಲೆ ಇನ್ನು ಬೆಂಗಳೂರು ದಕ್ಷಿಣ ಜಿಲ್ಲೆ



ಮರು ನಾಮಕರಣಕ್ಕೆ ಸಂಪುಟ ಒಪ್ಪಿಗೆ

ಬೆಂಗಳೂರು, ಜು.26– ರಾಮನಗರ ಜಿಲ್ಲೆ ಹೆಸರನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಬದಲಾವಣೆ ಮಾಡಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ದೊರೆತಿದೆ. ಈ ಬಗ್ಗೆ ಮುಂದೆ ಅಧಿಕೃತ ಪ್ರಕಟಣೆ ಹೊರಡಿಸಲಾಗುತ್ತದೆ ಎಂದು ಸಚಿವ ಎಚ್‌ಕೆ ಪಾಟೀಲ್ ತಿಳಿಸಿದರು.

ಜನರು ಹಾಗೂ ಜನಪ್ರತಿನಿಧಿಗಳ ಮನವಿಯ ಮೇರೆಗೆ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಬದಲಿಸಲು ಸಚಿವ ಸಂಪುಟವು ಒಪ್ಪಿಗೆ ಕೊಟ್ಟಿದೆ. ಈ ಮೂಲಕ ರಾಮನಗರ ಪ್ರದೇಶವು ಬ್ರ್ಯಾಂಡ್ ಬೆಂಗಳೂರಿನ ಭಾಗವಾಗಲಿದೆ ಎಂದರು.

ಈಗಿರುವ ರಾಮನಗರವೇ ಹೆಡ್ ಕ್ವಾಟ್ರಸ್ ಆಗಿರಲಿದೆ. ಮಾಗಡಿ, ಕನಕಪುರ, ಚನ್ನಪಟ್ಟಣ, ಹಾರೋಹಳ್ಳಿ ಬೆಂಗಳೂರು ದಕ್ಷಿಣ ವ್ಯಾಪ್ತಿಗೆ ಸೇರಲಿವೆ ಎಂದು ತಿಳಿಸಿದರು. ಬೆಂಗಳೂರು ಜಿಲ್ಲಾ ವ್ಯಾಪ್ತಿಗೆ ಒಳಪಡುವ ಎಲ್ಲಾ ಸಚಿವರು, ಶಾಸಕರು ಸೇರಿ ಕಳೆದ ಜು.9ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ■ 9ನೇ ಪುಟಕ್ಕೆ




ದೆಹಲಿಯಲ್ಲೂ ಮುಡಾ, ವಾಲ್ಮೀಕಿ ನಿಗಮ ಹಗರಣ ಸದ್ದು

ಬಿಜೆಪಿ, ಜೆಡಿಎಸ್ ಸಂಸದರಿಂದ ಪ್ರತಿಭಟನೆ; ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹ

ನವದೆಹಲಿ, ಜು.26(ಕೆಎಂಶಿ)– ಕರ್ನಾಟಕ ಕಾಂಗ್ರೆಸ್ ಸರ್ಕಾರದ ವಾಲ್ಮೀಕಿ ಹಾಗೂ ಮುಡಾ ಹಗರಣಗಳಲ್ಲಿನ ಭ್ರಷ್ಟಾಚಾರ ಖಂಡಿಸಿ ದೆಹಲಿಯ ಸಂಸತ್ ಭವನದ ಆವರಣದಲ್ಲಿಂದು ಬಿಜೆಪಿ ಹಾಗೂ ಜೆಡಿಎಸ್ ಸಂಸದರು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ವಾಲ್ಮೀಕಿ ನಿಗಮದ ಹಣ ದುರುಪಯೋಗ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಖಾಲಿ ನಿವೇಶನಗಳನ್ನು ಕಾನೂನಾತ್ಮಕವಾಗಿ ಹರಾಜು ಮಾಡದೆ ಭ್ರಷ್ಟಾಚಾರ ನಡೆಸಲಾಗಿದೆ ಎಂದು ಆರೋಪಿಸಿ, ಕರ್ನಾಟಕ ಬಿಜೆಪಿ ಹಾಗೂ ಜೆಡಿಎಸ್‌ನ ಎರಡೂ ಸದನಗಳ ಸಂಸದರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಕರ್ನಾಟಕದಲ್ಲಿ ದಲಿತರ ಹಣವನ್ನು ಕಾಂಗ್ರೆಸ್ ಪಕ್ಷ ಲೂಟಿ ಮಾಡುತ್ತಿದೆ. ರಾಹುಲ್ ಗಾಂಧಿ ಎಲ್ಲಿದ್ದಾರೆ ಎಲ್ಲಿದ್ದಾರೆ 'ಹಠಾವೋ, ಹಠಾವೋ ಭ್ರಷ್ಟ ಮುಖ್ಯಮಂತ್ರಿ ಕೋ ಹಠಾವೋ' ಘೋಷಣೆಗಳನ್ನು ಹಿಂದಿ ಹಾಗೂ ಇಂಗ್ಲೀಷ್‌ನಲ್ಲಿ ಕೂಗಿದರು. 'ರಿಟರ್ನ್ ದಿ ಲೂಟೆಡ್ ಮನಿ ಬಿಲಾಂಗಿಂಗ್ ■ 6ನೇ ಪುಟಕ್ಕೆ


ದೆಹಲಿಯ ಸಂಸತ್ ಭವನದ ಆವರಣದಲ್ಲಿಂದು ಬಿಜೆಪಿ ಹಾಗೂ ಜೆಡಿಎಸ್ ಸಂಸದರು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.



ಮುಡಾ ನಿವೇಶನ ಹಗರಣ: ಮುಖ್ಯಮಂತ್ರಿ ವಿಚಾರಣೆಗೆ ಅನುಮತಿಸಲು ರಾಜ್ಯಪಾಲರಿಗೆ ಟಿ.ಜೆ.ಅಬ್ರಹಾಂ ಮನವಿ

ಬೆಂಗಳೂರು, ಜು.26(ಕೆಎಂಶಿ)– ಮುಡಾದ ನಿವೇಶನಗಳ ಹಂಚಿಕೆಯಲ್ಲಿ ನಡೆದಿರುವ ಅಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದವರು ಪಾಲುದಾರರಾಗಿದ್ದು ಇವರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ರಾಜ್ಯಪಾಲರ ಅನುಮತಿ ಕೋರಿ ಭ್ರಷ್ಟಾಚಾರ ವಿರೋಧಿ, ಪರಿಸರ ವೇದಿಕೆ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಮನವಿ ಸಲ್ಲಿಸಿದ್ದಾರೆ.


ಟಿ.ಜೆ.ಅಬ್ರಹಾಂ

ಸಂಸ್ಥೆಯ ಇತರ ಸದಸ್ಯರ ಜೊತೆ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರನ್ನು ರಾಜಭವನದಲ್ಲಿ ಇಂದು ಭೇಟಿ ಮಾಡಿ, ಮುಖ್ಯಮಂತ್ರಿ ಅವರ ಕುಟುಂಬ 14 ಬಿಡಿ ನಿವೇಶನಗಳನ್ನು ಪಡೆಯುವ ಮೂಲಕ ಸರ್ಕಾರದ ಬೊಕ್ಕಸಕ್ಕೆ 44.64 ಕೋಟಿ ರೂ. ನಷ್ಟ ಉಂಟು ಮಾಡಿದೆ. ಮುಖ್ಯಮಂತ್ರಿ ಅವರ ಪತ್ನಿ ಬಿ.ಎಂ.ಪಾರ್ವತಿ ಹೆಸರಿನಲ್ಲಿ ಈ ನಿವೇಶನಗಳನ್ನು ಪಡೆಯಲಾಗಿದೆ.

ಹಗರಣದಲ್ಲಿ ಮುಖ್ಯಮಂತ್ರಿ ಅವರಲ್ಲದೆ, ಅವರ ಪುತ್ರ ಡಾ.ಎಸ್.ಯತೀಂದ್ರ, ಪ್ರಾಧಿಕಾರದ ಆಯುಕ್ತರಾಗಿದ್ದ ಡಿ.ಬಿ.ನಟೇಶ್, ಅಧ್ಯಕ್ಷ ಎಚ್.ವಿ.ರಾಜೀವ್, ■ 6ನೇ ಪುಟಕ್ಕೆ

ಬಿಜೆಪಿ, ಜೆಡಿಎಸ್‌ನ ಹಲವರು ಮುಡಾ ಭೂಮಿ ಪಡೆದಿದ್ದಾರೆ


ಭೈರತಿ ಸುರೇಶ್

ಬೆಂಗಳೂರು, ಜು.26(ಕೆಎಂಶಿ)– ಕೇಂದ್ರದ ಉಕ್ಕು ಮತ್ತು ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕರು ಹಾಗೂ ಮುಖಂಡರೂ ಆದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಸಿ.ಎನ್.ಮಂಜೇಗೌಡ, ಹೆಚ್.ವಿಶ್ವನಾಥ್ ಸೇರಿದಂತೆ ಅನೇಕ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಬಿಡಿ ನಿವೇಶನಗಳನ್ನು ಪಡೆದಿದ್ದಾರೆಂದು ರಾಜ್ಯ ಸರ್ಕಾರ ಇಂದಿಲ್ಲಿ ಆರೋಪಿಸಿದೆ. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲೇ ■ 9ನೇ ಪುಟಕ್ಕೆ

34000 ಕಟ್ಟಿ 40 ವರ್ಷ ಕಳೆದರೂ ಇನ್ನೂ ನನಗೆ ಮುಡಾ ನಿವೇಶನವನ್ನೇ ಕೊಟ್ಟಿಲ್ಲ


ಕುಮಾರಸ್ವಾಮಿ

ನವದೆಹಲಿ, ಜು.26–ಮುಡಾದಲ್ಲಿ ತಮಗೂ ನಿವೇಶನವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ನೀಡಿರುವ ಹೇಳಿಕೆಗೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ ಅವರಂತೆ ನಾನು ಅಧಿಕಾರ ದುರುಪಯೋಗ ಮಾಡಿಕೊಂಡಿಲ್ಲ ಎಂದಿದ್ದಾರೆ. ನವದೆಹಲಿಯಲ್ಲಿ ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರಿನಲ್ಲಿ ನನಗೆ ನಿವೇಶನ ಕೊಡಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಮತ್ತು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೇಳಿದ್ದಾರೆ. ಆದರೆ, ಈವರೆಗೆ ಆ ನಿವೇಶನವನ್ನೇ ■ 9ನೇ ಪುಟಕ್ಕೆ



ಮುಡಾ ಹಂಚಿಕೆ ಮಾಡಿರುವುದು 35 ವರ್ಷದಲ್ಲಿ ಕೇವಲ 44,011 ನಿವೇಶನ!

ಅರ್ಜಿ ಸಲ್ಲಿಸಿ 30 ವರ್ಷದಿಂದ ಕಾಯುತ್ತಿದ್ದಾರೆ 85,000 ಮಂದಿ ನಿವೇಶನಾಕಾಂಕ್ಷಿಗಳು



ಮೈಸೂರು, ಜು.26(ಆರ್‌ಕೆ)– ಮುಡಾದಿಂದ ಒಂದು ನಿವೇಶನ ಪಡೆದು ಸ್ವಂತ ಮನೆ ನಿರ್ಮಿಸಿಕೊಂಡು ಸ್ವಾಭಿಮಾನದಿಂದ ಬದುಕಬೇಕೆಂಬ ಆಸೆ ಇಟ್ಟುಕೊಂಡ ಬಹುತೇಕ ಮಂದಿಗೆ ನಿರಾಸೆಯಾಗಿದೆ.

ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ, ಜೇಷ್ಠತೆ ಮೀರಿಯೂ ಕಳೆದ 30 ವರ್ಷಗಳಿಂದ ಕಾಯುತ್ತಿದ್ದವರ ಪೈಕಿ ಹಲವರು ಈಗ ಬದುಕಿಲ್ಲ. ಬದುಕಿರುವಾಗಲೇ ಮೈಸೂರಲ್ಲಿ ಮನೆ ಮಾಡಬೇಕೆಂಬ ಬಯಕೆ ಅವರೊಂದಿಗೆ ನಂದಿಹೋಗಿದೆ. ಮೈಸೂರು ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (City Improvement Trust Borad)ಯು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (Mysore Urban Development Authority)ವಾಗಿ ಪರಿವರ್ತನೆಯಾದ ನಂತರ 1989ರಿಂದೀಚೆಗೆ 35 ವರ್ಷಗಳಲ್ಲಿ ಸಂಸ್ಥೆಯು 40 ಬಡಾವಣೆಗಳನ್ನು ಅಭಿವೃದ್ಧಿಪಡಿಸಿದೆಯಾದರೂ, ಆಕಾಂಕ್ಷಿಗಳಿಗೆ ಹಂಚಿಕೆ ಮಾಡಿರುವುದು ಕೇವಲ 44,011 ನಿವೇಶನಗಳು ಮಾತ್ರ. 1989ರಲ್ಲಿ ವಿಜಯನಗರ 1 ಮತ್ತು 2ನೇ ಹಂತ, ಕ್ಯಾತಮಾರನಹಳ್ಳಿ, ಸಾತಗಳ್ಳಿ, ದೇವನೂರು, ದಟ್ಟಗಳ್ಳಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ, ಇಲ್ಲಿ ವಿವಿಧ ಅಳತೆಯ 1,600 ನಿವೇಶನಗಳು, 1991ರಲ್ಲಿ ಅಭಿವೃದ್ಧಿಪಡಿಸಲಾದ ನಾಚನಹಳ್ಳಿ 1ನೇ ಹಂತ, ದೇವನೂರು 2ನೇ ಹಂತ, ಶ್ರೀರಾಂಪುರ, ವಿಜಯನಗರ 3ನೇ ಹಂತ, ಹೆಬ್ಬಾಳು ಮತ್ತು ಕೆಸರೆ ವಸತಿ ಬಡಾವಣೆಗಳಲ್ಲಿ 2,740 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

1994ರಲ್ಲಿ ದಟ್ಟಗಳ್ಳಿ 3ನೇ ಹಂತ, ವಿಜಯನಗರ 4ನೇ ಹಂತ, 1, 2 ಮತ್ತು 3ನೇ ಫೇಸ್, ರಾಜೀವ್‌ನಗರ 2ನೇ ಹಂತ, ಶ್ರೀರಾಂಪುರ ಮತ್ತು ನಾಚನಹಳ್ಳಿ 2ನೇ ಹಂತ ಬಡಾವಣೆಗಳಲ್ಲಿ 12,044 ನಿವೇಶನಗಳು, 1998ರಲ್ಲಿ ವಿಜಯನಗರ 4ನೇ ಹಂತ ಮತ್ತು ಸಾತಗಳ್ಳಿ 2ನೇ ಹಂತದಲ್ಲಿ 5,787 ನಿವೇಶನಗಳನ್ನು ಪ್ರಾಧಿಕಾರದಿಂದ ಅರ್ಜಿ ಕರೆದು ■ 6ನೇ ಪುಟಕ್ಕೆ

1967ರಿಂದ 1986ರವರೆಗೆ ಸಿಐಟಿಬಿಯಿಂದ 54 ಬಡಾವಣೆ ಅಭಿವೃದ್ಧಿ

ಮೈಸೂರು, ಜು.26(ಆರ್‌ಕೆ)–ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (ಸಿಐಟಿಬಿ)ಯಿಂದ 1967ರಿಂದ 1986ರವರೆಗೆ ಒಟ್ಟು 6,434 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಮೈಸೂರು ನಗರದಲ್ಲಿ 54 ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ, ಅತೀ ದೊಡ್ಡ ವಿಸ್ತೀರ್ಣದ ನಿವೇಶನಗಳೊಂದಿಗೆ ಮೂಲ ಸೌಲಭ್ಯದೊಂದಿಗೆ ಅಭಿವೃದ್ಧಿಪಡಿಸಿ ವಸತಿ ರಹಿತರನ್ನು ಗುರ್ತಿಸಿ ಕಡಿಮೆ ಬೆಲೆಗೆ ನಿವೇಶನ ಹಂಚಿಕೆ ಮಾಡಲಾಗಿತ್ತು.

ಜಲಪುರಿ, ಇಟ್ಟಿಗೆಗೂಡು, ನಜರ್‌ಬಾದ್, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಂಕರ ಮಠ, ವಿದ್ಯಾರಣ್ಯಪುರಂ, ಜಯಲಕ್ಷ್ಮೀಪುರಂ, ಯಾದವಗಿರಿ, ಒಂಟಿಕೊಪ್ಪಲು, ವಿವಿ ಮೊಹಲ್ಲಾ, ಮೇಟಗಳ್ಳಿ, ಬೃಂದಾವನ, ಗೋಕುಲಂ (4 ಹಂತಗಳು), ಸರಸ್ವತಿಪುರಂ, ಕೆಸರೆ, ಗಾಯತ್ರಿಪುರಂ, ಮಹದೇವಪುರ, ಎನ್.ಆರ್. ಮೊಹಲ್ಲಾ, ಬನ್ನಿಮಂಟಪ, ಜೆ.ಪಿ.ನಗರ, ಹೆಬ್ಬಾಳು, ಕ್ಯಾತಮಾರನಹಳ್ಳಿ, ಗಂಗೋತ್ರಿ ಬಡಾವಣೆ, ಆಲನಹಳ್ಳಿ, ಚಿಕ್ಕಹರದನಹಳ್ಳಿ, ಬೆಲವತ್ತ, ಬಡೇಮಖಾನ್‌ಗಳು ಸಿಐಟಿಬಿಯಿಂದ ಸಾಕಾರಗೊಂಡ ವಸತಿ ಬಡಾವಣೆಗಳು. 1898ರಲ್ಲಿ ಹಠಾತ್ ಕಾಣಿಸಿಕೊಂಡ ಮಾರಣಾಂತಿಕ ಪ್ಲೇಗ್ ರೋಗ ಶಮನಗೊಳಿಸಲು 1902ರಲ್ಲಿ ರಚನೆಗೊಂಡ ಅಭಿವೃದ್ಧಿ ಸಮಿತಿಯು ಸಮಗ್ರ ಅಭಿವೃದ್ಧಿ ಯೋಜನಾ ವರದಿ ಸಲ್ಲಿಸಿತ್ತು. ಅಂದಿನ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಗರದ ನೈರ್ಮಲ್ಯ ■ 6ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 27 ಜುಲೈ 2024

ಸರ್ಕಾರಿ ಭೂಮಿಯಲ್ಲಿ ನಿರ್ಮಿಸಿದ್ದ ಕಟ್ಟಡ ನೆಲಸಮ

ತಹಸೀಲ್ದಾರ್ ಮಹೇಶ್‌ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ



ಗದ್ದಿಗೆ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ನಿರ್ಮಿಸುತ್ತಿದ್ದ ಕಟ್ಟಡದ ನೆಲಸಮ.

ಮೈಸೂರು, ಜು.26(ಆರ್‌ಕೆ)– ಸರ್ಕಾರಿ ಭೂಮಿ ಒತ್ತುವರಿ ಮಾಡಿ ಅನಧಿಕೃತವಾಗಿ ನಿರ್ಮಿಸುತ್ತಿದ್ದ ಕಟ್ಟಡವನ್ನು ಮೈಸೂರು ತಾಲೂಕು ತಹಸೀಲ್ದಾರ್ ಮಹೇಶ್‌ಕುಮಾರ್ ನೇತೃತ್ವದಲ್ಲಿ ಗುರುವಾರ ಅಧಿಕಾರಿಗಳು ನೆಲಸಮಗೊಳಿಸಿದ್ದಾರೆ.

ಮೈಸೂರು ತಾಲೂಕು ಇಲವಾಲ ಹೋಬಳಿ ಹೂಟಗಳ್ಳಿ ಗ್ರಾಮದ ಬಳಿ ಗದ್ದಿಗೆ ಮುಖ್ಯ ರಸ್ತೆಯಲ್ಲಿ, ಸರ್ವೆ ನಂ. 54ರಿಂದ 57ರ ವರೆಗಿನ ಜಾಗ ಸರ್ಕಾರಿ ರಸ್ತೆಯಾಗಿದ್ದು, ಅದನ್ನು ಒತ್ತುವರಿ ಮಾಡಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುತ್ತಿದ್ದರಿಂದ ತಮ್ಮ ಗಮನಕ್ಕೆ ಬಂದ ತಕ್ಷಣ ಕಚೇರಿ ಮೂಲ ನಕ್ಷೆ ದಾಖಲಾತಿಗಳನ್ನು ಪರಿಶೀಲಿಸಿ ಸರ್ವೆ ರಿಪೋರ್ಟ್ ಪಡೆದು ಸರ್ಕಾರಿ ಜಾಗ ಒತ್ತುವರಿಯಾಗಿರುವುದನ್ನು ತಹಶೀಲ್ದಾರ್ ಖಚಿತಪಡಿಸಿಕೊಂಡಿದ್ದರು. ಸರ್ಕಾರಿ ಜಾಗ ಕಬಳಿಸಿ ಅಕ್ರಮವಾಗಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದವರಿಗೆ ಇಂದು ಬೆಳ್ಳಂಬೆಳಿಗ್ಗೆ ಶಾಕ್ ನೀಡಿದ ತಾಲೂಕು ದಂಡಾಧಿಕಾರಿಯೂ ಆದ ಮಹೇಶ್‌ಕುಮಾರ್ ಜೆಸಿಬಿಯೊಂದಿಗೆ ಕಾರ್ಯಾಚರಣೆ ನಡೆಸಿ ಕಟ್ಟಡಗಳನ್ನು ನೆಲಸಮಗೊಳಿಸಿದರು.

ಮಧ್ಯಾಹ್ನ 1 ಗಂಟೆವರೆಗೆ ನಡೆದ ತೆರವು ಕಾರ್ಯಾಚರಣೆಯಲ್ಲಿ 10 ವಾಣಿಜ್ಯ ಮಳಿಗೆಗಳನ್ನು ತೆರವುಗೊಳಿಸಿ ಸುಮಾರು 3 ಕೋಟಿ ರೂ ಬೆಲೆಬಾಳುವ ಆಸ್ತಿಯನ್ನು ಅಧಿಕಾರಿಗಳು ಸರ್ಕಾರದ ವಶಕ್ಕೆ ಪಡೆದಿದ್ದಾರೆ. ಈ ವೇಳೆ ಮಳಿಗೆ ನಿರ್ಮಿಸಿದ್ದ ವ್ಯಕ್ತಿ ಪರವಾಗಿ ಕೆಲವರು ಮಧ್ಯೆ ಪ್ರವೇಶಿಸಿ ವಾದ ಮಾಡಿದರು. ಈ ವೇಳೆ ಅವರಿಗೆ ದಾಖಲಾತಿಗಳನ್ನು ತೋರಿಸಿದ ಅಧಿಕಾರಿಗಳು, ತೆರವು ಕಾರ್ಯಾಚರಣೆ ಮುಂದುವರೆಸಿ ಮಳಿಗೆಗಳನ್ನು ನೆಲಸಮಗೊಳಿಸುವಲ್ಲಿ ಯಶಸ್ವಿಯಾದರು. ಇಲವಾಲ ಹೋಬಳಿ ಉಪ ತಹಸೀಲ್ದಾರ್ ಕುಬೇರ್, ರೆವೆನ್ಯೂ ಇನ್ಸ್‌ಪೆಕ್ಟರ್ ಶಿವಕುಮಾರ್, ಗ್ರಾಮ ಆಡಳಿತಾಧಿಕಾರಿ ಭಾರತೀಶ್, ಬೋಗಾದಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಬಸವರಾಜ್, ರೆವೆನ್ಯೂ ಇನ್ಸ್‌ಪೆಕ್ಟರ್ ವಿಜಯಕುಮಾರ್, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಅರಮನೆಯ ಆಜುಬಾಜಲ್ಲಿ ಫುಟ್‌ಪಾತ್ ವ್ಯಾಪಾರಿಗಳ ಕಾರುಬಾರು!

- ಪಾರಂಪರಿಕ ಕಬ್ಬಿಣದ ಗ್ರಿಲ್‌ಗಳು ಮರೆ
- ಗ್ರಿಲ್‌ಗೆ ಮಾರಾಟ ವಸ್ತು ನೇತಾಕಿ ಅವ್ಯವಸ್ಥೆ
- ನಾಯಿ ಕೊಡಗಳಂತೆ ತಲೆ ಎತ್ತಿರುವ ಗೂಡಂಗಡಿಗಳು
- ಪಾದಚಾರಿ ಮಾರ್ಗವಿಲ್ಲದೆ ಪ್ರವಾಸಿಗರಿಗೆ ಕಿರಿಕಿರಿ

ಬಾಪುಲಿಂಗರಾಜ್ ಅರಸ್

ಮೈಸೂರು, ಜು.26(ಬಿಎಲ್‌ಯು)– ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್ ಅತಿಕ್ರಮಿಸಿ ವ್ಯಾಪಾರ–ವಹಿವಾಟು ನಡೆಯುತ್ತಿರುವುದರಿಂದ ಪಾದಚಾರಿಗಳು ನಿತ್ಯವೂ ಪರದಾಡುವ ಪರಿಸ್ಥಿತಿ ಇದೆ. ಇನ್ನು ಮೈಸೂರು ಅರಮನೆಯ ಆಜುಬಾಜಲ್ಲಿಯೂ ಫುಟ್‌ಪಾತ್ ವ್ಯಾಪಾರದಿಂದ ಪ್ರವಾಸಿಗರು ತೀವ್ರ ಕಿರಿಕಿರಿ ಅನುಭವಿಸುವಂತಾಗಿದೆ. ಇದರ ಬಗ್ಗೆ ಮೈಸೂರು ನಗರ ಪಾಲಿಕೆಗಾಗಲೀ, ಪೊಲೀಸರಿಗಾಗಲೀ ಕಿಂಚಿತ್ತೂ ಗಮನವಿಲ್ಲ.

ಮೈಸೂರಿಗೆ ದೇಶ ವಿದೇಶದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಾರೆ. ಮೈಸೂರು ಒಂದು ಸುತ್ತು ಹಾಕಿ ಬರೋಣ ಎಂದು ಹೊರಟರೆ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಗಾಂಧಿ ವೃತ್ತ, ದೊಡ್ಡ ಗಡಿಯಾರ ವೃತ್ತಕ್ಕೆ ಹೋಗಲು ಜಾಗವೇ ಇಲ್ಲದಂತೆ ವ್ಯಾಪಾರಿಗಳು ಫುಟ್‌ಪಾತ್ ಅತಿಕ್ರಮಿಸಿಕೊಂಡಿದ್ದಾರೆ. ಫುಟ್‌ಪಾತ್ ವ್ಯಾಪಾರದ ಮುಂದಿನ ಸರದಿ ಮೈಸೂರು ಅರಮನೆ ಸುತ್ತಮುತ್ತ. ಮೈಸೂರು ಅರಮನೆಯ ವರಹಾ ದ್ವಾರದ ಅಂಬವಿಲಾಸ ವಾಹನ ನಿಲ್ದಾಣ ಮುಂದಿನ ಫುಟ್‌ಪಾತ್ ಜಾಗವನ್ನು ಅತಿಕ್ರಮಿಸಿಕೊಂಡಿದ್ದಾರೆ.

ಕಾಡಾ ಕಚೇರಿ ಎದುರಿನ ಅರಮನೆಗೆ ಹೊಂದಿಕೊಂಡಂತೆ ಫುಟ್‌ಪಾತ್‌ನಲ್ಲಿ ಈಗ ಗೂಡಂಗಡಿಗಳು ತಲೆ ಎತ್ತಿವೆ. ನಾನಾ ವಸ್ತುಗಳನ್ನಿಟ್ಟು ಮಾರಾಟ ಮಾಡಲಾಗುತ್ತಿದೆ. ಇದರಿಂದ ಪ್ರವಾಸಿಗರಿಗೆ ಪಾದಚಾರಿ ಮಾರ್ಗವಿಲ್ಲದೆ ರಸ್ತೆಗಿಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಬಸ್ಸು, ಕಾರು ಸೇರಿದಂತೆ ಇತರೆ ವಾಹನಗಳು ವೇಗವಾಗಿ ಬರುವುದನ್ನು ಕಂಡು ಪ್ರವಾಸಿಗರು ಫುಟ್‌ಪಾತ್‌ಗೆ ಹೋಗೋಣವೆಂದರೆ ಅಲ್ಲಿ ಜಾಗವೇ ಇಲ್ಲದ ಪರಿಸ್ಥಿತಿ ಇದೆ.

ಪೊಲೀಸ್ ಆಯುಕ್ತರಿಗೆ ಈ ತನಕ 7 ಪತ್ರ ಬರೆಯಲಾಗಿದೆ

"ಫುಟ್‌ಪಾತ್ ಅತಿಕ್ರಮಿಸಿ ವ್ಯಾಪಾರ ಮಾಡುತ್ತಿರುವ ಮಾರಾಟಗಾರರನ್ನು ತೆರವು ಮಾಡುವಂತೆ ಈ ತನಕ ಮೈಸೂರು ಅರಮನೆ ಮಂಡಳಿ ವತಿಯಿಂದ ನಗರ ಪೊಲೀಸ್ ಆಯುಕ್ತರಿಗೆ 7 ಪತ್ರ ಬರೆಯಲಾಗಿದೆ.

ಮೈಸೂರು ಅರಮನೆ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಯೂ ಆದ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಭೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ, ಫುಟ್‌ಪಾತ್ ವ್ಯಾಪಾರ ತೆರವು ಮಾಡುವಂತೆ ಪೊಲೀಸ್ ಆಯುಕ್ತರಿಗೆ ಪತ್ರ ಬರೆಯಲು ನಿರ್ಣಯ ಮಾಡಲಾಗಿತ್ತು. ಅದರಂತೆ ಪತ್ರ ಬರೆದು ಫುಟ್‌ಪಾತ್ ವ್ಯಾಪಾರಿಗಳ ತೆರವು ಮಾಡವಂತೆ ಮನವಿ ಮಾಡಲಾಗಿದೆ. ಪೊಲೀಸ್ ಆಯುಕ್ತರು ಮಾತ್ರವಲ್ಲದೆ ಮೈಸೂರು ಅರಮನೆಯ ಎಸಿಪಿ, ದೇವರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗೂ ಪತ್ರ ಬರೆಯಲಾಗಿದೆ. ಫುಟ್‌ಪಾತ್ ವ್ಯಾಪಾರದಿಂದ ಏನೆಲ್ಲಾ ತೊಂದರೆಯಾಗುತ್ತಿದೆ ಎಂದು ಮೌಖಿಕವಾಗಿ ವಿವರಿಸಲಾಗಿದೆ. ಆದರೆ ಈ ತನಕ ಅವರನ್ನು ತೆರವು ಮಾಡಿಲ್ಲ.

– ಸುಬ್ರಹ್ಮಣ್ಯ, ಉಪ ನಿರ್ದೇಶಕ, ಮೈಸೂರು ಅರಮನೆ ಮಂಡಳಿ



ಫುಟ್‌ಪಾತ್ ವ್ಯಾಪಾರಿಗಳ ಮೇಲೆ ಪೊಲೀಸರಿಗೇಕೆ ಇಷ್ಟು ಪ್ರೀತಿ...

ಮೈಸೂರು ನಗರದ ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಗಾಂಧಿ ವೃತ್ತ, ದೊಡ್ಡ ಗಡಿಯಾರ ವೃತ್ತ, ಗ್ರಾಮಾಂತರ ಬಸ್ ನಿಲ್ದಾಣದ ರಸ್ತೆ ಸೇರಿದಂತೆ ಬಹಳಷ್ಟು ಕಡೆ ಫುಟ್‌ಪಾತ್ ವ್ಯಾಪಾರಿಗಳ ಕಾರುಬಾರು ನಡೆಯುತ್ತಿದೆ. ಬನ್ನಿಮಂಟಪ, ಗೋಕುಲಂ, ಎನ್.ಆರ್.ಮೊಹಲ್ಲಾ, ಅಗ್ರಹಾರ ಇಂತಹ ಕಡೆ ಆಟೋ ಕನ್ಸಲ್ಟೆಂಟ್‌ಗಳು ಕಾರು, ಬೈಕ್, ಸ್ಕೂಟರ್‌ಗಳ ಸಾಲು ಸಾಲು ನಿಲ್ಲಿಸಿ ಪಾದಚಾರಿಗಳು ಇನ್ನಿತರೆ ವಾಹನ ಚಾಲಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಪಾದಚಾರಿಗಳು ಓಡಾಡಲು ಜಾಗ ಬಿಡದೆ ಇಡೀ ಫುಟ್‌ಪಾತ್‌ನ್ನು ಅತಿಕ್ರಮಿಸಿಕೊಂಡು ಮಾರಾಟ ಮಾಡುತ್ತಿದ್ದಾರೆ. ಇದು ನಗರದ ಅಶಿಸ್ತನ್ನು ಬಿಂಬಿಸುತ್ತದೆ. ಫುಟ್‌ಪಾತ್‌ನಲ್ಲಿ ಜಾಗವಿಲ್ಲದ ಕಾರಣ ಪಾದಚಾರಿಗಳು ರಸ್ತೆಗಿಳಿದಾಗ ಬಹಳಷ್ಟು ಅಪಘಾತಗಳಾಗಿವೆ. ಇಷ್ಟೆಲ್ಲಾ ಅವ್ಯವಸ್ಥೆ ಇದ್ದರೂ ಪೊಲೀಸರು ಹಾಗೂ ನಗರ ಪಾಲಿಕೆಯವರಿಗೆ ಫುಟ್‌ಪಾತ್ ಮಾರಾಟಗಾರರ ಮೇಲೆ ಎಲ್ಲಿಲ್ಲದ ಪ್ರೀತಿ! ಜನರಿಗೆ ಅನಾನುಕೂಲವಾಗುತ್ತಿರುವ ಫುಟ್‌ಪಾತ್ ಮಾರಾಟವನ್ನು ತೆರವು ಮಾಡಲು ಇದುವರೆಗೂ ಕ್ರಮ ಕೈಗೊಂಡಿಲ್ಲ. ಸ್ಥಳಕ್ಕೆ ಬಾಡಿಗೆ ನೀಡದೆ, ಯಾವುದೇ ತೆರಿಗೆ ಪಾವತಿಸದ ಫುಟ್‌ಪಾತ್ ವ್ಯಾಪಾರಿಗಳು, ಸಾರ್ವಜನಿಕರಿಗೆ ತೊಂದರೆ ಕೊಡುವುದನ್ನು ನೋಡಿಯೂ ನೋಡದಂತಿದ್ದಾರೆ. ಇದರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಮೈಸೂರು ಅರಮನೆ, ಮೈಸೂರು ದಸರಾ ಜಂಬೂ ಸವಾರಿ ಆನೆ ಕಲಾಕೃತಿ, ಮೇಕಪ್ ಕನ್ನಡಿ, ವಾಚು, ಪರ್ಸ್, ಬೆಲ್ಟ್, ಆಟಿಕೆ, ಗಡಿಯಾರ ಸೇರಿದಂತೆ ಪ್ರವಾಸಿಗರನ್ನು ಆಕರ್ಷಿಸುವ ಹಲವು ವಸ್ತುಗಳನ್ನು ಫುಟ್‌ಪಾತ್‌ನಲ್ಲಿಟ್ಟು ಮಾರಾಟ ಮಾಡಲಾಗುತ್ತಿದೆ.

ಅರಮನೆಯ ಪಾರಂಪರಿಕ ಕಬ್ಬಿಣದ ಗ್ರಿಲ್‌ಗಳಿಗೆ ಅವರ ಮಾರಾಟ ವಸ್ತುಗಳನ್ನು ನೇತು ಹಾಕಲಾಗಿದ್ದು, ಅರಮನೆಯ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ. ಅಲ್ಲದೆ ಪಾರಂಪರಿಕ ಗ್ರಿಲ್ ಕೆಳಗೆ ಸೀಮೆಂಟ್ ಇಟ್ಟಿಗೆಗಳನ್ನು ಇಟ್ಟು ನಾನಾ ವಸ್ತುಗಳನ್ನು ಜೋಡಿಸಲಾಗಿದೆ. ಇದು ಅರಮನೆಯ ಪ್ರವೇಶ ದ್ವಾರದ ಅಂದವನ್ನೆ ಹಾಳು ಮಾಡಿದಂತಿದೆ. ಇದಿಷ್ಟೆ ಅಲ್ಲದೆ ಫುಟ್‌ಪಾತ್ ಉದ್ದಕ್ಕೂ ಹಣ್ಣು, ಚುರುಮುರಿ ಗಾಡಿಗಳನ್ನು ನಿಲ್ಲಿಸಲಾಗಿದೆ. ವರಹಾ ದ್ವಾರದಿಂದ ನಗರ ಪಾಲಿಕೆ ತನಕ ಅರ್ಧ ಫುಟ್‌ಪಾತ್ ಅನ್ನು ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಇಡೀ ಫುಟ್‌ಪಾತ್ ಮಾರಾಟಗಾರರ ಸ್ವತ್ತಾಗುತ್ತದೆ. ಮೈಸೂರು ಅರಮನೆಯ ಸೌಂದರ್ಯದ ಸುಂದರ ಕಲ್ಪನೆಯಲ್ಲಿರುವ ದೇಶ–ವಿದೇಶದ ಪ್ರವಾಸಿಗರಿಗೆ ಮೊದಲು ಫುಟ್ ಪಾತ್ ಮಾರಾಟ ಅವ್ಯವಸ್ಥೆಯ ದರ್ಶನವಾಗುತ್ತಿದೆ. ಅರಮನೆಯ ವಾತಾವರಣವೇ ಹೀಗಿರಬೇಕಾದರೆ ಇನ್ನು ಮೈಸೂರಿನ ಉಳಿದ ಸ್ಥಳಗಳ ಪರಿಸ್ಥಿತಿ ಹೇಗಿರಬಹುದು ಎಂದು ಪ್ರವಾಸಿಗರು ಯೋಚಿಸುವಂತಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ವೈದ್ಯರ ಬಗ್ಗೆ ಅವಹೇಳನ ಶಿಕ್ಷಾರ್ಹ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಕೆ

ಬೆಂಗಳೂರು, ಜು.26(ಬಿಎಲ್‌ಯು)–



ಸಾಮಾಜಿಕ ಜಾಲತಾಣಗಳ ಮೂಲಕ ವೈದ್ಯರ ಬಗ್ಗೆ ಅವಹೇಳನ ಮಾಡುವುದು ಶಿಕ್ಷಾರ್ಹ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಸಿದ್ದಾರೆ. ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಿರುವ ಅವರು, ಇದರಿಂದ ವೃತ್ತಿ ನಿರತ ವೈದ್ಯರು ಗೌರವಯುತವಾಗಿ ತಮ್ಮ ಕರ್ತವ್ಯ ನಿರ್ವಹಿಸಲು ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ವೈದ್ಯರು ಹಾಗೂ ವೈದ್ಯ ಸಿಬ್ಬಂದಿ ಮೇಲೆ ನಡೆಯುವ ಹಲ್ಲೆ, ಅಪಮಾನವನ್ನು ನಿಯಂತ್ರಿಸಲು ವಿಧಾನಸಭಾ ಅಧಿವೇಶನದಲ್ಲಿ ಮಸೂದೆ ಅಂಗೀಕರಿಸಲಾಗಿದೆ ಎಂದು ತಿಳಿಸಿದ್ದಾರೆ. ಈಗಿರುವ ಕಾಯ್ದೆಗೆ ತಿದ್ದುಪಡಿ ತಂದು ಈ ರೀತಿಯ ಪ್ರಕರಣಗಳ ಶಿಕ್ಷೆಯ ಪ್ರಮಾಣ ಹೆಚ್ಚಿಸಲಾಗಿದೆ. ಈ ಮೂಲಕ ವೈದ್ಯರು, ವೈದ್ಯಕೀಯ ಸಿಬ್ಬಂದಿಯ ಶ್ರೇಯೋಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ. ಈ ಮಸೂದೆ ಪ್ರಕಾರ ವೈದ್ಯರ ಮೇಲಿನ ಹಿಂಸೆ, ಅಪಮಾನ, ಆಸ್ತಿ–ಪಾಸ್ತಿ ಹಾನಿಗೆ ಶಿಕ್ಷೆಯ ಪ್ರಮಾಣ ಹೆಚ್ಚಳವಾಗಿದ್ದು, 3 ರಿಂದ 7 ವರ್ಷದ ತನಕ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಜೊತೆಗೆ 25 ಸಾವಿರದಿಂದ ರಿಂದ 2 ಲಕ್ಷದ ತನಕ ದಂಡ ವಿಧಿಸಬಹುದಾಗಿದೆ ಎಂದು ಹೇಳಿದ್ದಾರೆ.

ಈ ಮಸೂದೆಯಂತೆ ವೃತ್ತಿಪರ ವೈದ್ಯರಿಗೆ ನೋಂದಣಿ ಕಡ್ಡಾಯವಾಗಿದೆ. ಆದರೆ ನಕಲಿ ವೈದ್ಯ ವೃತ್ತಿಯಲ್ಲಿ ತೊಡಗುವವರಿಗೆ 10 ಸಾವಿರದಿಂದ 1 ಲಕ್ಷದ ತನಕ ದಂಡ ವಿಧಿಸಬಹುದಾಗಿದೆ ಎಂದು ತಿಳಿಸಿದ್ದಾರೆ. ವೈದ್ಯರ ಮತ್ತು ವೈದ್ಯ ಸಿಬ್ಬಂದಿಗಳ ಮೇಲಾಗುವ ಹಿಂಸಾಚಾರ, ಹಲ್ಲೆ, ಅಪಮಾನ, ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ ನಿಂದನೆಯನ್ನು ನಿಯಂತ್ರಿಸಲು ಈ ಮಸೂದೆ ಅಂಗಿಕರಿಸಲಾಗಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ದಿನೇಶ್ ಗುಂಡೂರಾವ್ ಎಕ್ಸ್‌ನಲ್ಲಿ ನೀಡಿರುವ ಈ ಮಾಹಿತಿ ಬಗ್ಗೆ ಸಾರ್ವಜನಿಕರು ಕೆಲವು ಸಲಹೆ ನೀಡಿದ್ದಾರೆ. ಬಡ ರೋಗಿಗಳಿಂದ ಚಿಕಿತ್ಸಾ ವೆಚ್ಚದ ಹೆಸರಿನಲ್ಲಿ ಹಗಲು ದರೋಡೆ ಮಾಡುವ ಹಾಗೂ ರೋಗಿಗಳ ಪ್ರಾಣದ ಜೊತೆ ಚೆಲ್ಲಾಟವಾಡುವ ಖಾಸಗಿ ಆಸ್ಪತ್ರೆಗಳ ವೈದ್ಯರು ಮತ್ತು ಸಿಬ್ಬಂದಿ ವಿರುದ್ಧ ಕೂಡ ಸೂಕ್ತ ಕ್ರಮಕ್ಕಾಗಿ ಮಸೂದೆ ರೂಪಿಸಿ ಎಂದು ಸಲಹೆ ನೀಡಿದ್ದಾರೆ.

ಮುಡಾ ನಿವೇಶನ ಅಕ್ರಮ ಹಂಚಿಕೆ ಹಗರಣ

ಸಾರ್ವಜನಿಕ ಚರ್ಚೆಗೆ ಆಹ್ವಾನಿಸಿ ವಿಜಯೇಂದ್ರಗೆ ಪತ್ರ ಚಳವಳಿ




ಮುಡಾ ಹಗರಣದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಸಾರ್ವಜನಿಕ ಚರ್ಚೆಗೆ ಆಹ್ವಾನಿಸಿ ಮೈಸೂರು ನಗರ ಪಾಲಿಕೆಗೆ ಮುಂದೆ ಶುಕ್ರವಾರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯವರು ಪತ್ರ ಚಳವಳಿ ನಡೆಸಿದರು.

ಮೈಸೂರು, ಜು.26(ಬಿಎಲ್‌ಯು)– ಮುಡಾ ಹಗರಣದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಸಾರ್ವಜನಿಕ ಚರ್ಚೆಗೆ ಆಹ್ವಾನಿಸಿ ಮೈಸೂರಿನಲ್ಲಿ ಇಂದು ಪತ್ರ ಚಳವಳಿ ನಡೆಸಲಾಯಿತು. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯವರು ಮೈಸೂರು ನಗರ ಪಾಲಿಕೆ ಮುಂದೆ ನಡೆಸಿದ ಈ ಚಳವಳಿಯಲ್ಲಿ ಹಲವರು ಭಾಗವಹಿಸಿದ್ದರು.

ಮುಡಾದಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ವಿಜಯೇಂದ್ರರ ಸಾರ್ವಜನಿಕ ಚರ್ಚೆಗೆ ಆಹ್ವಾನಿಸಿ ಅಂಚೆ ಪೆಟ್ಟಿಗೆಗೆ ಪತ್ರಗಳನ್ನು ಹಾಕಲಾಯಿತು. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವ ಹುನ್ನಾರ ಮಾಡಿರುವ ಬಿಜೆಪಿ ಹಾಗೂ ಜೆಡಿಎಸ್ ರಾಜ್ಯದ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ದೂರಿದರು.

ಸಿದ್ದರಾಮಯ್ಯ ಅವರು ತಮ್ಮ ಪ್ರಭಾವ ಬಳಸಿ ನಿವೇಶನ ಪಡೆದಿದ್ದರೆ ಇವರದೇ ಸರ್ಕಾರದ ಅವಧಿಯಲ್ಲಿ ಈ ಬಗ್ಗೆ ಚಕಾರ ಎತ್ತದೆ ಮೌನ ವಹಿಸಿದ್ದೇಕೆ ಎಂದು ಬಿಜೆಪಿ ನಾಯಕರನ್ನು ಪ್ರಶ್ನಿಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಹಳಷ್ಟು ಹಗರಣಗಳು ನಡೆದಿದ್ದು, ವಿಜಯೇಂದ್ರ ಸಾರ್ವಜನಿಕ ಚರ್ಚೆಗೆ ಬಂದರೆ ದಾಖಲಾತಿ ಸಮೇತ ಸಾಬೀತು ಮಾಡುತ್ತೇವೆ ಎಂದು ಸವಾಲು ಹಾಕಿದರು. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಕಾಂಗ್ರೆಸ್ ಮುಖಂಡರಾದ ಬಸಪ್ಪ, ವೆಂಕಟೇಶ್ ಹಾಗೂ ಇತರರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಲಾರಿ–ಕಾರು ಮುಖಾಮುಖಿ ಡಿಕ್ಕಿ: ಪತ್ರಕರ್ತ ಮೋಹನ್‌ಕುಮಾರ್ ಸಾವು

ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಲಾರಿ ಮತ್ತು ಕಾರು.

ನಾಗಮಂಗಲ, ಜು.26– ಲಾರಿ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾಗಿ ಪತ್ರಕರ್ತರೊಬ್ಬರು ಸಾವಿಗೀಡಾದ ಘಟನೆ ನಾಗಮಂಗಲ–ಬೆಳ್ಳೂರು ರಸ್ತೆಯಲ್ಲಿ ಸಂಭವಿಸಿದೆ.



ನಾಗಮಂಗಲ ತಾಲೂಕು ಬ್ಯಾಡರಹಳ್ಳಿ ನಿವಾಸಿಯಾಗಿರುವ ಪತ್ರಕರ್ತ ಬಿ.ಸಿ.ಮೋಹನ್ ಕುಮಾರ್ (49) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಮೈಸೂರಿನಿಂದ ಬೆಳ್ಳೂರು ಕಡೆಗೆ ಕಾರಿನಲ್ಲಿ ಹೋಗುತ್ತಿದ್ದಾಗ ಕಾರು–ಲಾರಿಗೆ ಮುಖಾಮುಖಿ ಡಿಕ್ಕಿಯಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಬೆಳ್ಳೂರಿನ ಆದಿ ಚುಂಚನಗಿರಿ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಬಿ.ಸಿ.ಮೋಹನ್ ಕುಮಾರ್ ಅವರು ಪತ್ರಕರ್ತರಾಗಿ, ತಾಲೂಕು ಕಸಾಪ ಅಧ್ಯಕ್ಷರಾಗಿ, ತಾಲೂಕಿನ ಹೇಮಾವತಿ ನೀರು ಬಳಕೆ ದಾರರ ಸಂಘದ ತಾಲೂಕು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಮೃತರು ತಾಯಿ, ಪತ್ನಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 11.30ಕ್ಕೆ ಬ್ಯಾಡರಹಳ್ಳಿಯ ಅವರ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು

ನಿಧನ




ವಿದ್ವಾನ್ ಕೃಷ್ಣಮಂಜ ಭಟ್ಟ

ಮೈಸೂರು, ಜು. 26– ಮೈಸೂರು ಸಂಸ್ಕೃತ ಪಾಠಶಾಲೆಯ ನಿವೃತ್ತ ಪ್ರಾಧ್ಯಾಪಕರಾದ ವಿದ್ವಾನ್ ಕೃಷ್ಣಮಂಜ ಭಟ್ಟ (82) ಶುಕ್ರವಾರ ಟಿ.ಕೆ.ಲೇಔಟ್‌ನ ತಮ್ಮ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಮೂವರು ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ವಿದ್ವಾನ್ ಕೃಷ್ಣಮಂಜ ಭಟ್ಟರು ಹವ್ಯಕ ಸಮಾಜದ ಹಿರಿಯ ಮುಖಂಡರು, ಶ್ರೀ ರಾಮಚಂದ್ರಾಪುರ ಮಠದ ನಿಷ್ಠಾವಂತ ಕಾರ್ಯಕರ್ತರು, ನಾಟಿ ವೈದ್ಯರಾಗಿ 1 ಲಕ್ಷಕ್ಕೂ ಅಧಿಕ ಜನರಿಗೆ ಸರ್ಪ ಸುತ್ತಿಗೆ ಚಿಕಿತ್ಸೆ ನೀಡಿ ಪ್ರಸಿದ್ಧರಾಗಿದ್ದರು. ಶ್ರೀರಾಮಚಂದ್ರಪುರ ಮಠದ ಶ್ರೀ ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳು ವ್ಯಾಸಂಗಕ್ಕಾಗಿ ಮೈಸೂರಿನಲ್ಲಿ ಇದ್ದಾಗ ಮೂರು ವರ್ಷಗಳ ಕಾಲ ತಮ್ಮ ಮನೆಯನ್ನೇ ಗುರುಗಳಿಗೆ ಬಿಟ್ಟುಕೊಟ್ಟಿದ್ದರು. ಜಾತಕ ವಿಮರ್ಶೆ, ಹೋಮ–ಹವನಗಳಲ್ಲಿ ನಿತ್ಯವೂ ತೊಡಗಿಸಿಕೊಂಡು ಸಮಾಜ ಸೇವೆ ಸಲ್ಲಿಸುತ್ತಿದ್ದರು. ಮೈಸೂರು ಹವ್ಯಕ ಪರಿಷತ್, ಹವೀಕ ಸಂಘ, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ ಸೇರಿದಂತೆ ಅನೇಕ ಸಂಘ ಸಂಸ್ಥೆಗಳನ್ನು ಮುನ್ನಡೆಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

27.07.2024 ಶನಿವಾರ, ಮಳೆ ನಕ್ಷತ್ರ: ಪುಷ್ಯ, 20.07.2024 ರಿಂದ 02.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆ ಮತ್ತು ಚರ್ಮ ರೋಗಿಗಳಿಗೆ ಆಯುರ್ವೇದ ಪಂಚಕರ್ಮ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.
- **ಶ್ರೀ ಮಾಯಕಾರ ಗುರುಕುಲ :** ಜ್ಯೋತಿಷ್ಯ ಶಾಸ್ತ್ರ, ವಾಸ್ತು ಶಾಸ್ತ್ರ, ಆಗಮ ಶಾಸ್ತ್ರ ಸಂಬಂಧ ಕಾರ್ಯಾಗಾರ, ಉಪಸ್ಥಿತರು : ವಿದ್ವಾನ್ ಮೂಗೂರು ಮಧು ದೀಕ್ಷಿತ್, ವಿದ್ವಾನ್ ಸೌಮಿತ್ರಿ, ವಿದ್ವಾನ್ ಜೆ.ಇ. ಶಿವಕುಮಾರ್, ವಿಜಯ್ ರಾಜ್, ವಿದ್ವಾನ್ ಸಾಗರ್ ಶರ್ಮ, ವಿದ್ವಾನ್ ಶರತ್ ಆಚಾರ್ಯ, ಪ್ರದೀಪ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಸೈನೊಸೈಟಿಸ್, ತಲೆನೋವಿಗೆ ಉಚಿತ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ ಸಂಜೆ 4ರವರೆಗೆ.
- **ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ :** ವಿಶ್ವ ಹೆಪಟೈಟಿಸ್ ದಿನದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗ್ಯಾಸ್ಟ್ರೋ ಓಪಿಡಿ ಕೊಠಡಿ ಸಂಖ್ಯೆ 10, ಬೆಳಗ್ಗೆ 10 ರಿಂದ.
- **ಸಿರಿಕ್ಯಾರಿ ಐವಿಎಫ್ ಸೆಂಟರ್ :** ವಿಶ್ವ ಐವಿಎಫ್ ದಿನದ ಪ್ರಯುಕ್ತ ಉಚಿತ ಐವಿಎಫ್ ಶಿಬಿರ, ಸ್ಥಳ: ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶತಚಂಡೀ ಯಾಗ ಪ್ರಾರಂಭ, ಆಷಾಢ ಮಾಸದ ಪ್ರಯುಕ್ತ ಶ್ರೀ ವಿಶಾಲಾಕ್ಷೀ ಅಮ್ಮನವರಿಗೆ ಮತ್ತು ಶ್ರೀ ರಾಜರಾಜೇಶ್ವರಿ ದೇವಿಗೆ ಅರ್ಚನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.
- **ಆರ್ಯ ಆಸ್ಪತ್ರೆ :** ಉಚಿತ ಬಿಎಂಡಿ ಪರೀಕ್ಷಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬಲ್ಲಾಳ್ ವೃತ್ತದ ಹತ್ತಿರ, ಬೆಳಗ್ಗೆ 10 ರಿಂದ.
- **ಮಹಾಜನ ವಿದ್ಯಾಸಂಸ್ಥೆ :** ಪೋಷಕರ ಸಮಾವೇಶ, ಉದ್ಘಾಟನೆ : ಸಾಹಿತಿ ಡಾ. ಟಿ.ಸಿ. ಪೂರ್ಣಿಮಾ, ಅಧ್ಯಕ್ಷತೆ : ಪೋಷಕರ ಸಂಘದ ಅಧ್ಯಕ್ಷ ಸಿ.ಕೆ. ರಂಗರಾಮು, ಉಪಸ್ಥಿತರು : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ ಭಾಗವತ್, ಪೋಷಕರ ಸಂಘದ ಕಾರ್ಯದರ್ಶಿ ಆರ್.ಕೆ. ಸತ್ಯಪ್ರಕಾಶ್, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ದೀಪಾ ಸಂಯುಕ್ತ ಪದವಿಪೂರ್ವ ಕಾಲೇಜು :** ಫ್ರೆಶರ್ಸ್ ಡೇ ಕಾರ್ಯಕ್ರಮ, ಮುಖ್ಯ ಅತಿಥಿಗಳು : ತೋಟಗಾರಿಕೆ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಡಾ. ಬಿ. ಕೃಷ್ಣ, ಅಧ್ಯಕ್ಷತೆ : ದೀಪಾ ಎಜುಕೇಷನ್ ಅಂಡ್ ಸರ್ವೀಸ್ ಟ್ರಸ್ಟ್ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಜಿಲ್ಲಾ ಬ್ರಾಹ್ಮಣ ಮಹಾಸಭಾ, ಸಂಧ್ಯಾ ಸುರಕ್ಷಾ ಟ್ರಸ್ಟ್, ಶಾಕಾಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರ, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ :** ನಾಡ ಅಧಿದೇವತೆ ಭಗವತಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಪ್ರಯುಕ್ತ ಪೂಜಾ ಕೈಂಕರ್ಯ, ಪ್ರಸಾದ ವಿತರಣೆ, ಸ್ಥಳ: ಸಂಧ್ಯಾ ಸುರಕ್ಷಾ ಟ್ರಸ್ಟ್, ಬೆಳಗ್ಗೆ 11ಕ್ಕೆ
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಶ್ರೀಮತಿ ಸೌಮ್ಯಶ್ರೀ ಎಂ.ಎನ್., ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕರಳಪುರ, ನಂಜನಗೂಡು ತಾಲೂಕು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಮೈಸೂರು, ಸಂಜೆ 4.30ಕ್ಕೆ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಜಿಲ್ಲಾ, ನಗರ ಘಟಕ, ಕದಳಿ ಮಹಿಳಾ ವೇದಿಕೆ :** ಕಮಲಮ್ಮ ಮತ್ತು ಜಿ.ಎ. ಶಿವಲಿಂಗಯ್ಯ ಶರಣ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ, ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು : ಕೆ.ಸಿ. ಶಿವಪ್ಪ, ಡಾ. ಎಸ್.ಎಸ್. ಅಂಗಡಿ, ಡಾ. ನಾನಾ ಸಾಬೇಬ ಹಚ್ಚಡದ, ಡಾ. ಎಂ.ಎಸ್. ಅನಿತಾ, ಅಭಿನಂದನಾ ನುಡಿ; ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಯೋಜನಾ ನಿರ್ದೇಶಕ ಡಾ. ಎನ್.ಎಂ. ತಳವಾರ್, ದತ್ತಿ ದಾಸೋಹಿಗಳು : ನಿವೃತ್ತ ಅಧ್ಯಾಪಕ ಪ್ರೊ. ಜಿ.ಎ. ಶಿವಲಿಂಗಯ್ಯ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 11ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಗುರು ಪೂರ್ಣಿಮೆ. ಸಾಧನಾ ಸಪ್ತಾಹ ಹಾಗೂ ಆರಾಧನಾ ಕಾರ್ಯಕ್ರಮ. ಚಿನ್ಮಯ ಮಿಷನ್‌ನ ಗುರುಸರ್ವಸ್ವ ಪೂಜ್ಯ ಸ್ವಾಮಿನಿ ಕಾಶಿಕಾನಂದ ಅವರಿಂದ ಪ್ರವಚನ. ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ. ಸಂಜೆ: 6.30ರಿಂದ 7.30ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI 'ಶೋಧ ಅನುಶೋಧ'– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಡಿ. ಪುರುಷೋತ್ತಮ್, ವ್ಯಾಖ್ಯಾನ : ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಜಿ. ಶ್ರೀಧರ್ ಮತ್ತು ಸಂಗಡಿಗರಿಂದ ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ನಂಜನಗೂಡು ತಾಲೂಕು ಸೂರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ 'ಪುರೂರವ', ಮೂಲ ರಂಗನಾಟಕ–ಕೆ. ದಾಸಪ್ಪ, ಬಾನುಲಿ ರೂಪಾಂತರ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ರಂಗ ಕಲಾವಿದ ಹಾಗೂ ಚಿತ್ರ ಕಲಾವಿದ ಸದಾಶಿವ ಬ್ರಹ್ಮಾವರ್ ಅವರೊಂದಿಗೆ ಎನ್. ವಿ. ರಮೇಶ್ ಅವರು ನಡೆಸಿರುವ ಸಂವಾದ, 6.50 ಕೃಷಿರಂಗ : ಕಿಸಾನ್‌ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ನಂಜನಗೂಡು ತಾಲೂಕು ಹುಲ್ಲಹಳ್ಳಿ ಹೋಬಳಿ ದುಗ್ಗಹಳ್ಳಿಯ ಕೃಷಿಕ ದಂಪತಿ ಡಿ.ವಿ.ಮಹದೇವಪ್ಪ ಮತ್ತು ಅಕ್ಕಮ್ಮಣ್ಣಿ, ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ನಬ್ನಿತಾ ಚೌದರಿ – ಗಾಯನ

ಎ.ಎಸ್.ನಟರಾಜ್ ವಕೀಲಿ ವೃತ್ತಿ ಬದುಕಿನ ಸುವರ್ಣ ಸಂಭ್ರಮ; ಗುರುವಂದನೆ

ಕಾನೂನು ಜ್ಞಾನದ ಜೊತೆಗೆ ಸಾಮಾಜಿಕ ಕಾಳಜಿ ಇದ್ದರೆ ಮಾತ್ರ ಒಳ್ಳೆ ವಕೀಲರಾಗಬಹುದು


● ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ ● ವೃತ್ತಿ ಬಾಂಧವ್ಯದ ದಿನಗಳ ಮೆಲುಕು ಹಾಕಿದ ಸಿಎಂ

ಮೈಸೂರು, ಜು.26(ಎಸ್‌ಬಿಡಿ)– ಕಾನೂನಿನ ಜ್ಞಾನದ ಜೊತೆಗೆ ಸಾಮಾಜಿಕ ಕಾಳಜಿ ಹಾಗೂ ಸಾಮಾನ್ಯ ಜ್ಞಾನವಿದ್ದರೆ ಮಾತ್ರ ವಕೀಲ ವೃತ್ತಿಯಲ್ಲಿ ಯಶಸ್ವಿಯಾಗಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಿಸಿದರು.

ಹಿರಿಯ ವಕೀಲ ಎ.ಎಸ್.ನಟರಾಜ್ (ಎಎಸ್‌ಎನ್) ಅವರು 50 ವರ್ಷ ವೃತ್ತಿ ಬದುಕು ಪೂರೈಸಿರುವ ಹಿನ್ನೆಲೆಯಲ್ಲಿ ಅವರ ಶಿಷ್ಯ ವೃಂದ ಮೈಸೂರಿನ ಸಾರಾ ಕನ್ವೆಷನ್ ಹಾಲ್‌ನಲ್ಲಿ ಶುಕ್ರವಾರ ಏರ್ಪಡಿಸಿದ್ದ ಎ.ಎಸ್.ನಟರಾಜ್ ವಕೀಲಿ ವೃತ್ತಿ ಬದುಕಿನ ಸುವರ್ಣ ಸಂಭ್ರಮ ಮತ್ತು ಗುರುವಂದನಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ವೃತ್ತಿಯನ್ನು ಆಸಕ್ತಿ ಹಾಗೂ ಗೌರವದಿಂದ ನಿರ್ವಹಿಸಬೇಕು. ಅದರಲ್ಲೂ ವಕೀಲಿ ವೃತ್ತಿಯಲ್ಲಿ ಯಶಸ್ವಿಯಾಗಬೇಕಾದರೆ ಕಾನೂನು ಅರಿವಿನ ಜೊತೆಗೆ ಸಾಮಾಜಿಕ ಕಾಳಜಿ ಹಾಗೂ ಸಾಮಾನ್ಯ ಜ್ಞಾನ ಅತ್ಯಗತ್ಯ. ವಕೀಲರು ನಿತ್ಯ ಬೆಳಗ್ಗೆ ಮತ್ತು ಸಂಜೆ ತಮ್ಮ ಕಚೇರಿಯಲ್ಲಿದ್ದು ಕಕ್ಷಿದಾರರನ್ನು ಭೇಟಿಯಾಗಬೇಕು. ಇಲ್ಲವಾದರೆ ಕಕ್ಷಿದಾರರಿಗೆ ವಕೀಲರ ಬಗ್ಗೆ ವಿಶ್ವಾಸ ಬೆಳೆಯುವುದಿಲ್ಲ. ವಕೀಲರು ತಮ್ಮ ಕಕ್ಷಿದಾರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಎ.ಎಸ್.ನಟರಾಜ್ ಅವರ ಶಿಷ್ಯ ವೃಂದ ಹಮ್ಮಿಕೊಂಡಿರುವ ಗುರುವಂದನಾ ಕಾರ್ಯಕ್ರಮದಲ್ಲಿ ನನಗೆ ಅಧ್ಯಕ್ಷತೆ ಕಲ್ಪಿಸಿದ್ದಕ್ಕೆ ಧನ್ಯವಾದ ತಿಳಿಸುತ್ತೇನೆ. 1972ರ ಆಗಸ್ಟ್‌ನಲ್ಲಿ ನಾನು ವಕೀಲನಾಗಿ ನೋಂದಣಿಯಾದೆ.



ಮುಖ್ಯಮಂತ್ರಿ ಸಿದ್ದಾರಾಮಯ್ಯ ಸಮ್ಮುಖದಲ್ಲಿ ಮೈಸೂರಿನ ಸಾರಾ ಕನ್ವೆಷನ್ ಹಾಲ್‌ನಲ್ಲಿ ಶುಕ್ರವಾರ ನಡೆದ ಹಿರಿಯ ವಕೀಲ ಎ.ಎಸ್.ನಟರಾಜ್ ವೃತ್ತಿ ಬದುಕಿನ ಸುವರ್ಣ ಸಂಭ್ರಮ ಮತ್ತು ಗುರುವಂದನಾ ಕಾರ್ಯಕ್ರಮದಲ್ಲಿ ನಟರಾಜ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಹಾಗಾಗಿ ನಟರಾಜ್‌ಗಿಂತ ನಾನು ಎರಡು ವರ್ಷ ಸೀನಿಯರ್. ಆದರೆ ನಾನು ರಾಜಕೀಯ ಪಕ್ಷ ಸೇರಿದ್ದರಿಂದ ವಕೀಲಿ ವೃತ್ತಿಯಲ್ಲಿ ಯಶಸ್ವಿಯಾಗಲು ಸಾಧ್ಯವಾಗಲಿಲ್ಲ ಆದರೆ ನಟರಾಜ್ ವಕೀಲ ವೃತ್ತಿಯನ್ನು ಬಹಳ ಗಂಭೀರವಾಗಿ ಪರಿಗಣಿಸಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ನಾನು 1983ರವರೆಗೆ ವಕೀಲನಾಗಿದ್ದೆ. ಅಲ್ಲಿಯವರೆಗೂ ನಾನು ಮತ್ತು ನಟರಾಜ್ ನಿತ್ಯ ಸಿಗುತ್ತಿದ್ದೆವು. ಇವರು ಸ್ನೇಹಮಯಿಯಾಗಿದ್ದು ಎಲ್ಲಾ ಸೀನಿಯರ್ ಹಾಗೂ ಜೂನಿಯರ್‌ಗಳನ್ನೂ ಅತ್ಯಂತ ಪ್ರೀತಿ, ಅಭಿಮಾನದಿಂದ ಕಾಣುತ್ತಿದ್ದರು. ನಾನು 83ರಲ್ಲಿ ಶಾಸಕನಾದ ಮೇಲೆ ನ್ಯಾಯಾಲಯಕ್ಕೆ ಹೋಗುವುದು ಕಡಿಮೆ ಆಯ್ತು. ನಂತರ ನಟರಾಜ್ ಆಗಾಗ ಸಿಗುತ್ತಿದ್ದರು. ಭೇಟಿಯಾದಾಗ ಹೆಚ್ಚು ಇವರು ಮಾತನಾಡದಿದ್ದರೂ ವಕೀಲರ ಸಂಘದ ಬೇಡಿಕೆಗಳನ್ನು ನನ್ನ ಬಳಿ ತಿಳಿಸುತ್ತಿದ್ದರು ಎಂದು ಹೇಳಿದರು.

ನಾವಿಬ್ಬರೂ ಆತ್ಮೀಯ ಸ್ನೇಹಿತರು. ವಕೀಲಿ ವೃತ್ತಿ ಬಿಟ್ಟ ನಂತರವೂ ಆತ್ಮೀಯತೆ ಹಾಗೆಯೇ ಇದೆ. ಒಮ್ಮೊಮ್ಮೆ ಅವರೂ ಕೂಡ ಏಕ ವಚನದಲ್ಲೇ ಮಾತನಾಡಿಸುತ್ತಾರೆ. ನಟರಾಜ್ ನನ್ನ ಒಳ್ಳೆಯ ಸ್ನೇಹಿತ. ನಾನು ಪ್ರಾಕ್ಟೀಸ್ ಮಾಡುವಾಗ ಸೀನಿಯರ್‌ಗಳಾದ ಶ್ರೀನಿವಾಸ, ಸಣ್ಣಯ್ಯ ಅವರೊಂದಿಗೆ ಉತ್ತಮ ಒಡನಾಟವಿತ್ತು. ಆಗ ನಾವು ಹೊಟ್ಟೆ ಶ್ರೀನಿವಾಸ್ ಎನ್ನುತ್ತಿದ್ದೆವು. ಆದರೆ ಈಗ ಅವರಿಗೆ ಹೊಟ್ಟೆಯೇ ಇಲ್ಲ ಎಂದು ನಗೆ ಚಟಾಕಿ ಹಾರಿಸಿದ ಸಿಎಂ, ನನಗೆ ಏನಾದರೂ ಸಮಸ್ಯೆಯಾದಾಗ ಮೊದಲು ಶ್ರೀನಿವಾಸ್ ನಂತರ ನಟರಾಜ್‌ನನ್ನು ಸಂಪರ್ಕಿಸುತ್ತಿದ್ದೆ. ಹಾಗಾಗಿ ಇವರಿಬ್ಬರೂ ನನ್ನ ಸ್ನೇಹಿತರು ಜೊತೆಗೆ ವಕೀಲರೂ ಹೌದು ಎಂದು ತಿಳಿಸಿದರು.

ನಾನು ಚಿಕ್ಕಬೋರಯ್ಯನವರ ಜೂನಿಯರ್ ಆಗಿದ್ದೆ. ನೀನು ರಾಜಕೀಯ ಮಾಡು ಇಲ್ಲವೇ ವಕೀಲಿ ವೃತ್ತಿ ಮಾಡು ಎಂದು ನನಗೆ ಅವರು ತಿಳಿ ಹೇಳುತ್ತಿದ್ದರು. ಆದರೆ ನಾನು ಎರಡನ್ನೂ ಮಾಡುತ್ತೇನೆ ಎನ್ನುತ್ತಿದ್ದೆ. ಆದರೆ ಲೋಕಸಭೆ ಚುನಾವಣೆಯಲ್ಲಿ ಸೋತಾಗ ಅವರು ನನ್ನನ್ನು ಕರೆದು ಚುನಾವಣೆಯಲ್ಲಿ ಕೆಟ್ಟದಾಗಿ ಸೋತಿದ್ದೀಯಾ, ನಿನಗೆ ರಾಜಕೀಯ ಬೇಡ. ವಿದ್ಯಾವರ್ಧಕ ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಕ ಹುದ್ದೆಗೆ ಸೇರಿಕೊ ಎಂದರು. ಅವರೇಳಿದಂತೆ ನಾನು ಉಪನ್ಯಾಸಕನಾಗಿಯೂ ಕೆಲಸ ಮಾಡಿದೆ. ನಾನು ಶಾಸಕನಾದ ನಂತರ ವಕೀಲಿ ಹಾಗೂ ಉಪನ್ಯಾಸಕ ವೃತ್ತಿಯನ್ನು ಬಿಡಬೇಕಾಯ್ತು. ಆದರೆ ನಾನು ಈವರೆಗೂ ಸ್ನೇಹಿತರ ಬಳಗವನ್ನು ಕಳೆದುಕೊಂಡಿಲ್ಲ ಎಂದು ಸ್ಮರಿಸಿಕೊಂಡರು.

ನಟರಾಜ್ ಅವರೊಂದಿಗೆ 35 ಜೂನಿಯರ್ ವಕೀಲರ ದೊಡ್ಡ ಬಳಗವೇ ಇದೆ. ಅವರಲ್ಲಿ ಕೆಲವರು ನ್ಯಾಯಾಧೀಶರಾಗಿದ್ದಾರೆ. ಮತ್ತಷ್ಟು ಮಂದಿ ಸ್ವಂತ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಇದು ನಟರಾಜ್ ಅವರ ಪ್ರಖ್ಯಾತಿಗೆ ಸಾಕ್ಷಿಯಾಗಿದೆ. ಇವರು ಕಕ್ಷಿದಾರರಿಗೆ ನ್ಯಾಯ ಒದಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದರಿಂದಲೇ ಇಷ್ಟೊಂದು ಜನ ಬಂದಿದ್ದಾರೆ. ನಟರಾಜ್ ಅವರಿಗೆ ಗ್ರಾಮೀಣ ಕಕ್ಷಿದಾರರು ಹೆಚ್ಚಿದ್ದಾರೆ ಎಂದು ತಿಳಿಯಿತು. ಹಿಂದೆ ಹಳ್ಳಿಗರು ಬೆಣ್ಣೆ ತರಕಾರಿ ತಂದುಕೊಟ್ಟರೆ ಸಾಕು ವಕೀಲರು ವಕಾಲತ್ತು ಹಾಕಿ ಕೇಸ್ ನಡೆಸುತ್ತಿದ್ದರು. ಆದರೆ ಈಗ ಬಹಳ ಕಷ್ಟ ಆಗಿದೆ. ಕಕ್ಷಿದಾರರೂ ಬಹಳ ಬುದ್ಧಿವಂತರಿರುತ್ತಾರೆ. ಇವರು ಶತಾಯುಷಿಯಾಗಿ ಆರೋಗ್ಯದಿಂದಿರಲಿ. ಇನ್ನೂ 25 ವರ್ಷ ವಕೀಲಿ ವೃತ್ತಿ ಮುಂದುವರೆಸಲಿ ಎಂದು ಸಿದ್ದರಾಮಯ್ಯ ಹಾರೈಸಿದರು.

ಜಿಪಂ ಕಟ್ಟಡಕ್ಕೆ ಬೇಡಿಕೆ: ಇದೇ ವೇಳೆ ಎ.ಎಸ್.ನಟರಾಜ್ ಅವರಿಗೆ ಶಿಷ್ಯ ವೃಂದದಿಂದ ಗುರುವಂದನೆ ಸಲ್ಲಿಸಲಾಯಿತು. ಅವರ ಆತ್ಮೀಯರು, ಸ್ನೇಹಿತರು ಸೇರಿದಂತೆ ನೂರಾರು ಮಂದಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಹಲವರು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೂ ಸನ್ಮಾನಿಸಿದರು. ಹಿರಿಯ ವಕೀಲರುಗಳಾದ ವೆಂಕಟರಾಜೇ ಅರಸ್ ಹಾಗೂ ಸಿ.ಎಂ.ಜಗದೀಶ್ ಅವರು ನಟರಾಜ್ ಅವರೊಂದಿಗಿನ ಒಡನಾಟ ಹಂಚಿಕೊಂಡರು. ಕಾರ್ಯಕ್ರಮದ ಬಗ್ಗೆ ಮನದುಂಬಿ ಮಾತನಾಡಿದ ಎ.ಎಸ್. ನಟರಾಜ್, ಮೈಸೂರು ಜಿಲ್ಲಾ ಪಂಚಾಯ್ತಿಯನ್ನು ಸ್ಥಳಾಂತರಿಸಿ, ಆ ಕಟ್ಟಡವನ್ನು ನ್ಯಾಯಾಲಯಕ್ಕೆ ಬಿಟ್ಟುಕೊಡುವಂತೆ ವಕೀಲರ ಸಂಘದ ಪರವಾಗಿ ಸಿಎಂಗೆ ಮನವಿ ಮಾಡಿದರು. ಎ.ಎಸ್.ನಟರಾಜ್ ಅವರ ಪತ್ನಿ ಶ್ರೀಮತಿ ಸುನಿತಾ, ಹಿರಿಯ ವಕೀಲ ಅಪ್ಪಾಜಿ ಗೌಡರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ನಾಲ್ಕೈದು ಬಾರಿ ಮೊಬೈಲ್ ಕರೆ; ಬದಲಾದ ಸಿಎಂ ಮುಖಭಾವ



ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಮುಖ್ಯಮಂತ್ರಿಗಳೂ ಅತ್ಯಂತ ಖುಷಿಯಾಗಿಯೇ ವೇದಿಕೆಯಲ್ಲಿ ಆಸೀನರಾಗಿದ್ದರು. ಉದ್ಘಾಟನೆ ನಂತರ ನಟರಾಜ್ ಅವರ ಒಡನಾಡಿ ಜಗದೀಶ್ ಮಾತನಾಡುತ್ತಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಅವರ ಸಹಾಯಕರು ಕರೆ ಬಂದ ಮೊಬೈಲ್ ತಂದು ಕೊಟ್ಟರು. ಆಗ ಜಗದೀಶ್ ಮಾತು ನಿಲ್ಲಿಸಿ, ಮುಖ್ಯಮಂತ್ರಿಗಳು ಮಾತನಾಡಲು ಅವಕಾಶ ಕಲ್ಪಿಸಿದರು. ಕೆಲ ನಿಮಿಷಗಳ ಅಂತರದಲ್ಲಿ ನಾಲ್ಕೈದು ಬಾರಿ ಮುಖ್ಯಮಂತ್ರಿಗಳಿಗೆ ಕರೆ ಬಂದಿತು. ಮಾತನಾಡುವ ವೇಳೆ ಅವರ ಮುಖಭಾವ ಬದಲಾಯಿತು. ಅವರು ಯಾವುದೋ ಯೋಚನೆಯಲ್ಲಿದ್ದಂತೆ ಕಂಡುಬಂದಿತು. ಆಗ ನಿರೂಪಕರು ಸಿಎಂ ಅವರು ತುರ್ತಾಗಿ ಹೊರಡಬೇಕಿರುವುದರಿಂದ ಮುಖ್ಯಘಟ್ಟ ಗುರುವಂದನಾ ಕಾರ್ಯಕ್ರಮ ನೆರವೇರಲಿದೆ ಎಂದರು. ಗುರುವಂದನೆ ಸಂದರ್ಭದಲ್ಲಿ ಮತ್ತೆ ಸಿಎಂ ಮುಖದಲ್ಲಿ ನಗು ಕಾಣಿಸಿತು. ಈ ವೇಳೆ ಗುಂಪುಗುಂಪಾಗಿ ವೇದಿಕೆಗೆ ಬಂದು ಅಭಿನಂದಿಸಿದ್ದರಿಂದ ನೂಕುನುಗ್ಗಲು ಉಂಟಾಗಿತ್ತು. ಸಹಜವಾಗಿ ಇಂತಹ ಸನ್ನಿವೇಶದಲ್ಲಿ ಏಯ್ ಎಂದು ಗದರುತ್ತಿದ್ದ ಸಿಎಂ, ಇಂದು ಮೌನವಾಗಿದ್ದರು. ನಮಸ್ಕರಿಸಿದವರಿಗೆ ಕಿರುನಗೆ ಬೀರಿದರಾದರೂ ಅವರು ಯೋಚನೆಗೆ ಬಿದ್ದವರಂತೆ ಕಾಣುತ್ತಿತ್ತು. ಆದರೆ ನಂತರ ಭಾಷಣ ಮಾಡುವಾಗ ಎಂದಿನಂತೆ ಹಳೆಯ ನೆನಪುಗಳನ್ನು ಮೆಲುಕು ಹಾಕಿ, ಹಾಸ್ಯ ಚಟಾಕಿಯೊಂದಿಗೆ ಖುಷಿಯಿಂದಲೇ ಮಾತನಾಡಿದರು.

ಶಾಲಿನಿ ರಜನೀಶ್ ರಾಜ್ಯದ ಮುಂದಿನ ಮುಖ್ಯ ಕಾರ್ಯದರ್ಶಿ

ಪತಿಯ ಸ್ಥಾನ ಅಲಂಕರಿಸುವ ಪತ್ನಿ!

ಬೆಂಗಳೂರು, ಜು, 26– ಕರ್ನಾಟಕ ಮುಖ್ಯ ಕಾರ್ಯದರ್ಶಿ ರಜನೀಶ್



ಗೋಯೆಲ್ ಅವರ ಅಧಿಕಾರಾವಧಿ ಜುಲೈ 31ಕ್ಕೆ ಮುಕ್ತಾಯವಾಗಲಿದ್ದು, ಈ ಹಿನ್ನೆಲೆಯಲ್ಲಿ ಮುಂದಿನ ಮುಖ್ಯ ಕಾರ್ಯದರ್ಶಿಯಾಗಿ ಶಾಲಿನಿ ರಜನೀಶ್ ಅವರನ್ನ ನೇಮಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಚಿವ ಸಂಪುಟ ಸಭೆ ಬಳಿಕ ಈ ಕುರಿತು ಅಧಿಕೃತ ಮಾಹಿತಿ ನೀಡಿದ ಕಾನೂನು ಸಚಿವ ಹೆಚ್.ಕೆ ಪಾಟೀಲ್, ಹಾಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಮುಂದಿನ ಐದು ದಿನದಲ್ಲಿ ನಿವೃತ್ತಿ ಆಗಲಿದ್ದಾರೆ. ಹೀಗಾಗಿ ನೂತನ ಸಿಎಸ್ ಆಗಿ ಶಾಲಿನಿ ರಜನೀಶ್‌ರನ್ನು ನೇಮಿಸಲು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಲಾಗಿದೆ ಎಂದು ತಿಳಿಸಿದರು.

ಈ ಮೂಲಕ ಪತಿ ನಿವೃತ್ತಿ ಬೆನ್ನಲ್ಲೇ ಪತಿಯ ಸ್ಥಾನವನ್ನು ಪತ್ನಿ ಅಲಂಕರಿಸಲಿದ್ದಾರೆ. 1989ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಶಾಲಿನಿ ರಜನೀಶ್ ಅವರು 2027ರ ಜೂನ್ ಅಂತ್ಯಕ್ಕೆ ನಿವೃತ್ತರಾಗಲಿದ್ದಾರೆ.

ರೇಣುಕಾಸ್ವಾಮಿ ಮನೆಗೆ ವಿನೋದ್ ರಾಜ್ ಭೇಟಿ; ಲಕ್ಷ ರೂ. ಚೆಕ್ ವಿತರಣೆ



ನಟ ವಿನೋದ್ ರಾಜ್ ರೇಣುಕಾಸ್ವಾಮಿ ಕುಟುಂಬಸ್ಥರಿಗೆ 1 ಲಕ್ಷ ರೂಪಾಯಿಯ ಚೆಕ್ ನೀಡಿದರು

ಚಿತ್ರದುರ್ಗ: ಕೊಲೆಯಾದ ರೇಣುಕಾಸ್ವಾಮಿ ಮನೆಗೆ ನಟ ವಿನೋದ್ ರಾಜ್ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ. ರೇಣುಕಾಸ್ವಾಮಿ ಪತ್ನಿ ಸಹನಾ ಅವರಿಗೆ 1 ಲಕ್ಷ ರೂಪಾಯಿಯ ಚೆಕ್ ನೀಡಿ ಮಾನವೀಯತೆ ಮೆರೆದಿದ್ದಾರೆ.

ಬಳಿಕ ಮಾತನಾಡಿದ ವಿನೋದ್ ರಾಜ್, ಮನೆ ಆಧಾರಸ್ತಂಭವಾಗಿದ್ದ ಮಗನನ್ನು ಕಳೆದುಕೊಂಡಿದೆ. ಕುಟುಂಬ ಪರಿತಪಿಸುತ್ತಿರುವ ಸ್ಥಿತಿ ಕಂಡು ಕರುಳು ಕಿತ್ತು ಬರುತ್ತಿದೆ. ನಾವು ಮನುಷ್ಯರಾಗಿದ್ದೀವಾ ಅಂತಾ ಮುಟ್ಟಿ ನೋಡಿಕೊಳ್ಳುವ ಕಾಲ ಬಂದಿದೆ. ಪ್ರತೀ ಜೀವಿಗೂ ಜೀವ ಇದೆ, ಜೀವಿಸುವ ಹಕ್ಕೂ ಇದೆ. ಮಕ್ಕಳು ಬಾಳಬೇಕು, ಬೆಳೆದು ಬೆಳಗಬೇಕೆಂಬುದು ಪೋಷಕರ ಆಶಯ. ಕೆಟ್ಟ ವಿಚಾರಗಳು ಜಾಸ್ತಿಯಾದಾಗ ಇಂತಹ ಕೃತ್ಯ ನಡೆಯುತ್ತವೆ. ಇಂಥ ಘಟನೆಗಳು ಹೆಚ್ಚಾಗದಂತೆ ಎಚ್ಚೆತ್ತುಕೊಳ್ಳಬೇಕು ಎಂದು ತಿಳಿಸಿದರು.

ಕಲಾವಿದರನ್ನು ನೋಡಿ ಜನರು ಅನುಕರಣೆ ಮಾಡುತ್ತಾರೆ. ಇದು ಆಘಾತಕಾರಿ ವಿಷಯ. ಹೆಸರು, ಕೀರ್ತಿಯಲ್ಲಿರುವ ನಾವು ಎಚ್ಚರವಾಗಿರಬೇಕು. ಉನ್ನತ ಸ್ಥಾನದಲ್ಲಿರುವವರು ವಿವೇಕ ಮರೆಯಬಾರದು. ಅಚಾತುರ್ಯಗಳು ನಡೆಯುತ್ತವೆ. ಆದರೆ ಮುಂದಿನ ತಲೆಮಾರುಗಳು ಹೀಗೆ ಆಗದಂತೆ ಎಚ್ಚರ ವಹಿಸಬೇಕು. ಮಾಧ್ಯಮ ತಿದ್ದಿಬುದ್ಧಿ ಹೇಳಿದಂತೆ ಅನುಸರಿಸಿಕೊಂಡು ಸಾಗಬೇಕು ಎಂದು ಹೇಳಿದರು.

ದರ್ಶನ್ ಭೇಟಿ ವೇಳೆ ರೇಣುಕಾಸ್ವಾಮಿ ಕುಟುಂಬದ ಬಗ್ಗೆ ಯಾವುದೇ ಮಾತನಾಡಲಿಲ್ಲ. ಸಿಕ್ಕ ಸಮಯಾವಕಾಶದಲ್ಲಿ ಹೆಚ್ಚು ಮಾತನಾಡಲು ಆಗಲಿಲ್ಲ. ನನ್ನನ್ನು ನೋಡಿದಾಕ್ಷಣ ದರ್ಶನ್ ಭಾವುಕರಾದರು. ನನ್ನನ್ನು ತಬ್ಬಿಕೊಂಡರು ಎಂದು ತಿಳಿಸಿದರು.

ಇಂತಹ ಘಟನೆ ನಡೆಯಬಾರದು. ಕ್ರೋಧ ದ್ವೇಷ, ಅಸೂಯೆ ಎಲ್ಲವನ್ನೂ ಬಿಡಬೇಕು, ಕಡಿವಾಣ ಹಾಕಬೇಕು. ನಮ್ಮ ತಾಯಿಯ ಸಿನಿಮಾ ನೋಡಿದ್ದೇವೆಂದು ರೇಣುಕಾಸ್ವಾಮಿಯವರ ತಂದೆ ಹೇಳಿದ್ದಾರೆಂದು ತಿಳಿಸುತ್ತಾ ವಿನೋದ್ ಭಾವುಕರಾದರು.

ಕುರುಕ್ಷೇತ್ರ ಪೌರಾಣಿಕ ನಾಟಕ



ಮೈಸೂರು ಪುರಭವನದಲ್ಲಿ ನಡೆದ ಕುರುಕ್ಷೇತ್ರ ಪೌರಾಣಿಕ ನಾಟಕವನ್ನು ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಹಾಗೂ ಇಳೈ ಆಳ್ವಾರ್ ಸ್ವಾಮೀಜಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹೆಚ್.ಪಿ.ನಾಗೇಂದ್ರ ಪ್ರಸಾದ್, ಬೋರೇಗೌಡ, ಮೂರ್ತಿ, ಸ್ವಪ್ನ ನಾಗರಾಜ್, ಮಹದೇವಸ್ವಾಮಿ, ಸುನೀಲ್, ಕೆಂಚೇಗೌಡ ಮುಂತಾದವರು ಉಪಸ್ಥಿತರಿದ್ದರು.

ಡಾ. ಮಂಜುನಾಥ್ ಮಹತ್ವದ ಬೇಡಿಕೆಗೆ ಕೇಂದ್ರ ಅಸ್ತು

ಅಪಘಾತ ಗಾಯಾಳು ಚಿಕಿತ್ಸೆಗೆ ಹೆದ್ದಾರಿಗಳಲ್ಲಿ ಪಾಲಿ ಟ್ರಾಮಾ ಕೇರ್ ಸೆಂಟರ್ ಸ್ಥಾಪನೆ

ನವದೆಹಲಿ, ಜು.26– ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿರುವ ಸುಧಾಮೂರ್ತಿ ತಮ್ಮ ಚೊಚ್ಚಲ ಭಾಷಣದಲ್ಲೇ ಮಹಿಳೆಯರ ಆರೋಗ್ಯದ ಬಗ್ಗೆ ಮಾತನಾಡಿ ಗಮನ ಸೆಳೆದಿದ್ದಾರೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಕೂಡ ಶ್ಲಾಘಿಸಿದ್ದರು. ಇದೀಗ ಮೊದಲ ಬಾರಿಗೆ ಸಂಸತ್ ಪ್ರವೇಶ ಮಾಡಿರುವ ಡಾ. ಸಿಎನ್ ಮಂಜುನಾಥ್ ಅವರು ತಮ್ಮ ಮೊದಲ ಅಧಿವೇಶನದಲ್ಲೇ ರಸ್ತೆ ಅಪಘಾತದ ಬಗ್ಗೆ ಪ್ರಸ್ತಾಪಿಸಿ ಮಹತ್ವದ ಬೇಡಿಕೆ ಇಟ್ಟಿದ್ದಾರೆ. ಆ ಮೂಲಕ ತಮ್ಮ ಮೊದಲ ಭಾಷಣದಲ್ಲಿ ಜನರ ಹಿತಾಸಕ್ತಿ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ.



ಈ ಬಗ್ಗೆ ಟ್ವೀಟ್ ಮಾಡಿರುವ ಬೆಂಗಳೂರು ಗ್ರಾಮಾಂತರ ಸಂಸದ ಸಿಎನ್ ಮಂಜುನಾಥ್, ಕಳೆದ 10 ವರ್ಷಗಳಲ್ಲಿ ಎಂಬಿಬಿಎಸ್, ಪಿಜಿ ಸೀಟುಗಳು ಮತ್ತು ವೈದ್ಯಕೀಯ ಕಾಲೇಜುಗಳನ್ನು ಹೆಚ್ಚಿಸಲಾಗಿದೆ ಹೀಗಾಗಿ ಮೊದಲು ನಾನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮತ್ತು ಗೌರವಾನ್ವಿತ ಆರೋಗ್ಯ ಮಂತ್ರಿಗಳಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

ರಸ್ತೆ ಅಪಘಾತದಲ್ಲಿ ಸಾವನ್ನಪ್ಪುತ್ತಿರುವವರ ಸಂಖ್ಯೆ 13% ಏರಿಕೆಯಾಗುತ್ತಿರುವ ಬಗ್ಗೆ ನನಗೆ ಕಳವಳವಿದ್ದು, ಇದು ಕ್ಯಾನ್ಸರ್‌ನಿಂದ ಸಾವನ್ನಪ್ಪುವವರ ಸಂಖ್ಯೆಗಿಂತ ಜಾಸ್ತಿ ಇದೆ ಎಂದು ಹೇಳಿದ್ದಾರೆ.

ಪ್ರಾಣಾಪಾಯವನ್ನು ತಪ್ಪಿಸುವ ನಿಟ್ಟಿನಲ್ಲಿ ಬೆಂಗಳೂರಿನ ನಿಮ್ಹಾನ್ಸ್ ಉತ್ತರ ಕ್ಯಾಂಪಸ್ ಮತ್ತು ಹೆದ್ದಾರಿಗಳಲ್ಲಿ ಪ್ರತಿ 120 ಕಿಮೀಗೆ 300 ಬೆಡ್‌ಗಳಿರುವ ಪಾಲಿ ಟ್ರಾಮಾ ಕೇರ್ ಸೆಂಟರ್ ಸ್ಥಾಪಿಸಲು ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ 1.65 ಲಕ್ಷ ಸಿಜಿಎಚ್‌ಎಸ್ ಫಲಾನುಭವಿಗಳಿದ್ದು, ಕೇವಲ 10 ಔಷಧಂಗಡಿಗಳಿವೆ. ಹೀಗಾಗಿ ಉತ್ತಮ ಆರೋಗ್ಯ ಸೌಲಭ್ಯಕ್ಕಾಗಿ ಇದನ್ನು ಪರಿಹರಿಸಬೇಕಾಗಿದೆ ಎಂದು ಲೋಕಸಭೆಯಲ್ಲಿ ಸಿ.ಎನ್ ಮಂಜುನಾಥ್ ಪ್ರಶ್ನೆ ಮಾಡಿದ್ದಾರೆ.

ಆರೋಗ್ಯ ಸಚಿವ ಜೆ.ಪಿ ನಡ್ಡಾ ಉತ್ತರಿಸಿದ್ದು, ಸಿ.ಎನ್. ಮಂಜುನಾಥ್ ಅವರ ಸಲಹೆಯನ್ನು ಸ್ವೀಕರಿಸುತ್ತೇವೆ. ಮುಂದಿನ ದಿನಗಳಲ್ಲಿ ಪಾಲಿ ಟ್ರಾಮಾ ಕೇರ್ ಸೆಂಟರ್ ಸ್ಥಾಪಿಸುವ ಬಗ್ಗೆ ಚಿಂತಿಸಲಾಗುತ್ತದೆ ಎಂದು ಹೇಳಿದ್ದಾರೆ.

ಇನ್ನು ನಿನ್ನೆ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಗುಡ್ಡ ಕುಸಿತ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಪ್ರಸ್ತಾಪಿಸಿದ್ದರು. ಇಂದು ಅವರ ಅಳಿಯ ಬೆಂಗಳೂರು ಗ್ರಾಮಾಂತರ ಸಂಸದ ಸಿ.ಎನ್. ಮಂಜುನಾಥ್ ಅವರು ಇಂದಿನ ಸಂಸತ್ ಮಾತನಾಡಿದ್ದು ಎಲ್ಲರ ಗಮನ ಸೆಳೆದಿದ್ದಾರೆ.

ಅರಣ್ಯವಾಸಿಗಳಿಗೆ ಸವಲತ್ತು ಕಲ್ಪಿಸುವ ಉದ್ದೇಶದಿಂದ 'ಅರಣ್ಯ ಹಕ್ಕು ಕಾಯ್ದೆ' ತಿದ್ದುಪಡಿಗೆ ನಿರ್ಣಯ

ಬೆಂಗಳೂರು: ಅನುಸೂಚಿತ ಬುಡಕಟ್ಟು ಜನರಿಗೆ ಸಿಗುವ ಸವಲತ್ತುಗಳನ್ನು ಇತರೆ ಅರಣ್ಯವಾಸಿಗಳಿಗೂ ಕಲ್ಪಿಸುವ ಉದ್ದೇಶದಿಂದ ಅರಣ್ಯ ಹಕ್ಕು ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಕೇಂದ್ರ ಸರ್ಕಾರವನ್ನು ಕೋರುವ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ.



ಅರಣ್ಯ ಸಚಿವ ಈಶ್ವರ ಖಂಡ್ರೆ ಮಂಡಿಸಿದ ನಿರ್ಣಯವನ್ನು ವಿಧಾನ ಮಂಡಲದ ಉಭಯ ಸದನಗಳಲ್ಲೂ ಗುರುವಾರ ಅಂಗೀಕಾರ ನೀಡಲಾಗಿದೆ.

ಕೇಂದ್ರ ಸರ್ಕಾರ ಜಾರಿಗೆ ತಂದ ಅರಣ್ಯ ಹಕ್ಕು ಕಾಯ್ದೆಯಿಂದಾಗಿ ಕೆಲವು ಪ್ರಕರಣಗಳು ಹಲವು ದಶಕಗಳಿಂದ ಇತ್ಯರ್ಥವಾಗದೇ ಹಾಗೇ ಉಳಿದಿವೆ. ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿ ಒಳಗೊಂಡ ಲಿಂಗನಮಕ್ಕಿ ಜಲಾಶಯ ನಿರ್ಮಾಣದ ವೇಳೆ ಭೂಮಿ ಕಳೆದುಕೊಂಡ ಶರಾವತಿ ಮುಳುಗಡೆ ಸಂತ್ರಸ್ತರಿಗೆ ಅನ್ಯಾಯವಾಗಿದೆ ಎಂದರು.

ಲಿಂಗನಮಕ್ಕಿ ಅಣೆಕಟ್ಟು ನಿರ್ಮಿಸಲು ರೈತರು ಸೇರಿದಂತೆ ಹಲವು ನಿವಾಸಿಗಳಿಗೆ ಸೇರಿದ 9,136.27 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಆದರೆ ಇದುವರೆಗೂ ಜಮೀನು ಅಧಿಸೂಚನೆಯನ್ನು ನೀಡಿಲ್ಲ. ಕಳೆದ 50–60 ವರ್ಷಗಳಿಂದ ಖಾಲಿ ಜಾಗವಿದೆ ಎಂದಿದ್ದಾರೆ. ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ 2006ಕ್ಕೆ ತಿದ್ದುಪಡಿ ತರುವ ಮೂಲಕ ಸವಲತ್ತುಗಳನ್ನು ಇತರೆ ಅರಣ್ಯವಾಸಿಗಳಿಗೂ ದೊರಕಿಸಲು ಸಹಕರಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲು ನಿರ್ಣಯ ಕೈಗೊಳ್ಳಲಾಗುತ್ತಿದೆ ಎಂದು ಖಂಡ್ರೆ ಹೇಳಿದರು.

2006ರಲ್ಲಿ ಜಾರಿಗೆ ತಂದ, 2008ರಲ್ಲಿ ರೂಪಿಸಿದ ನಿಯಮಗಳ ಫಲವಾಗಿ 2005 ಡಿಸೆಂಬರ್ 13ಕ್ಕೂ ಮೊದಲು ಜೀವನೋಪಾಯಕ್ಕಾಗಿ ಅರಣ್ಯದಲ್ಲಿ ವಾಸಿಸುತ್ತಿದ್ದ ಅನುಸೂಚಿತ ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಲಭಿಸುತ್ತದೆ. ಆದರೆ, ಅರಣ್ಯದ ಉತ್ಪನ್ನಗಳನ್ನೇ ನಂಬಿಕೊಂಡು ಹಲವು ತಲೆಮಾರುಗಳಿಂದ ಅರಣ್ಯಗಳಲ್ಲಿ ಬದುಕು ಸಾಗಿಸುತ್ತಿರುವ ಅನುಸೂಚಿತ ಬುಡಕಟ್ಟು ಹೊರತಾದ ಸಮುದಾಯದ ಜನರಿಗೆ ಅರಣ್ಯ ಹಕ್ಕು ಕಾಯ್ದೆಯ ಫಲ ದೊರೆತಿಲ್ಲ. ಅದಕ್ಕೆ ಕಾಯ್ದೆಯಲ್ಲಿನ ಕೆಲ ನಿಯಮಗಳು ಅಡ್ಡಿಯಾಗಿವೆ. ಅರಣ್ಯವಾಸಿಗಳೆಂದು ಸಾಬೀತು ಮಾಡಲು ಮೂರು ತಲೆಮಾರು ಅಕಾಲ ಅವರ ಪೂರ್ವಜರು ಅರಣ್ಯದಲ್ಲೇ ಇದ್ದರು ಎಂಬುದನ್ನು ಸಾಬೀತುಪಡಿಸಲು ಸಾಕ್ಷ್ಯಗಳನ್ನು ಸಲ್ಲಿಸಬೇಕಾಗುತ್ತದೆ. ಇದು ಕಾರ್ಯಸಾಧುವಲ್ಲದ ನಿಯಮ ಎಂದು ವಿವರಿಸಿದರು.

ರಾಮನಗರ ಹೆಸರು ತೆಗೆದವರು ಸರ್ವನಾಶ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿಡಿ

● ಹೆಸರು ಬದಲಿಸಿದರೆ ಭೂಮಿ ಬೆಲೆ ಹೆಚ್ಚಾಗುವುದಿಲ್ಲ ● 2028ಕ್ಕೆ ಜಿಲ್ಲೆಗೆ ರಾಮನಗರ ಹೆಸರೇ ವಾಪಸ್ ಬರುತ್ತದೆ; ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಸೂಚ್ಯವಾಗಿ ಹೇಳಿದ ಸಚಿವರು

ನವದೆಹಲಿ: ರಾಮನಗರ ಭೂಮಿ ಇರುವ ತನಕ ರಾಮನಗರ ಹೆಸರನ್ನು ತೆಗೆಯಲು ಸಾಧ್ಯವಿಲ್ಲ. ಒಂದು ವೇಳೆ ತಮ್ಮ ಸ್ವಾರ್ಥಕ್ಕಾಗಿ ಹೆಸರು ಬದಲಾವಣೆ ಮಾಡಿದರೆ, ಆ ಕೃತ್ಯ ಎಸಗಿದವರು ಸರ್ವನಾಶ ಆಗುತ್ತಾರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನವದೆಹಲಿಯಲ್ಲಿ ಶುಕ್ರವಾರ ಸಂಜೆ ಮಾಧ್ಯಮಗಳ ಜತೆ ಮಾತನಾಡಿದ ಅವರು, ರಾಮನಗರ ಜಿಲ್ಲೆಯ ಹೆಸರನ್ನು ತೆಗೆದು ಬೆಂಗಳೂರು ದಕ್ಷಿಣ ಎಂದು ಮಾಡುವ ಬಗ್ಗೆ ಸಂಪುಟ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಧಾರದ ಬಗ್ಗೆ ಕಟುವಾಗಿ ಟೀಕಿಸಿದರು.

ಯಾವುದೇ ಕಾರಣಕ್ಕೂ ರಾಮನಗರದಿಂದ ರಾಮನ ಹೆಸರನ್ನು ಬೇರ್ಪಡಿಸಲು ಆಗಲ್ಲ. ಈ ಭೂಮಿ ಇರುವ ತನಕ ರಾಮನಗರ ಹೆಸರು ತೆಗೆಯಲು ಸಾಧ್ಯವಿಲ್ಲ. ಜಿಲ್ಲೆ ರಚನೆ ಮಾಡಿ ರಾಮನಗರ ಎಂದು ಹೆಸರಿಡುವಾಗ, ವಿಧಾನಸಭೆ ಕ್ಷೇತ್ರಕ್ಕೆ ರಾಮನಗರ ಎಂದು ಹೆಸರು ಇಡುವಾಗ ಯಾವುದೇ ಮಾತು ಆಡಲೇ ಇಲ್ಲ. ತಕರಾರು ಮಾಡಲಿಲ್ಲ. ಈಗ ಸ್ವಾರ್ಥಕ್ಕಾಗಿ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವರು ಆರೋಪಿಸಿದರು.

ಈ ಸರಕಾರ ಮೊದಲು ಕಾನೂನು ವ್ಯವಸ್ಥೆ ಸರಿ ಮಾಡಲಿ. ಹೆಸರು ಬದಲಾವಣೆ ಮಾಡಲು ಹೊರಟವರ ಪಕ್ಷದ ಎಮ್‌ಎಲ್‌ಸಿ ಇರುವ ಕಡೆ ದಲಿತನ ಕೈ ಕತ್ತರಿಸಿದ್ದಾರೆ. ರಾಮನಗರ ಎಷ್ಟು ಅಭಿವೃದ್ಧಿ ಆಗಿದೆ ಅನ್ನುವುದನ್ನು ನೋಡಲಿ. ಹೆಸರು ಬದಲಾವಣೆಯಿಂದ ಭೂಮಿಗೆ ಬೆಲೆ ಬರಲ್ಲ. ಹೆಸರು ಬದಲಾಯಿಸಿದರೆ ಅವರ ಪತನ ಶುರುವಾಯಿತು ಎಂದೇ ಲೆಕ್ಕ ಎಂದು ಕುಮಾರಸ್ವಾಮಿ ಹೇಳಿದರು.

2028 ಅಥವಾ ಅದರೊಳಗೆಯೇ ಆ ಜಿಲ್ಲೆಗೆ ರಾಮನಗರ ಹೆಸರು ಮತ್ತೆ ಬರುತ್ತದೆ. ಅದನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ ಎಂದು ರಾಜ್ಯದ ಮುಂದಿನ ರಾಜಕೀಯ ಭವಿಷ್ಯವನ್ನು ಸೂಚ್ಯವಾಗಿ ಕುಮಾರಸ್ವಾಮಿ ನುಡಿದರು. ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್ ಹಾಗೂ ಸಂಸದ ಮಲ್ಲೇಶ್ ಬಾಬು ಈ ವೇಳೆ ಅವರ ಜತೆಯಲ್ಲಿ ಇದ್ದರು.

ಇಥಿಯೋಪಿಯಾದಲ್ಲಿ ಭಾರಿ ಮಳೆ:257ಕ್ಕೇರಿದ ಮೃತರ ಸಂಖ್ಯೆ!

ಆಡಿಸ್ ಅಬಾಬ: ದಕ್ಷಿಣ ಆಫ್ರಿಕಾದ ಉತ್ತರದ ಇಥಿಯೋಪಿಯಾದಲ್ಲಿ ಭಾರಿ ಮಳೆಯಿಂದಾಗಿ ಭೂಕುಸಿತ ಸಂಭವಿಸಿದ್ದು, ದುರಂತದಲ್ಲಿ ಸತ್ತವರ ಸಂಖ್ಯೆ 257 ಕ್ಕೆ ತಲುಪಿದೆ ಎಂದು ವಿಶ್ವಸಂಸ್ಥೆಯ ಮಾನವೀಯ ವ್ಯವಹಾರಗಳ ಇಲಾಖೆ ಬಹಿರಂಗಪಡಿಸಿದೆ. ದೇಶದ ಹಲವು ಭಾಗಗಳಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿದ್ದು, ಕಿನ್ ಚೋ ಶಾಚಾ ಗೋಜ್ಡ್ ಪ್ರದೇಶದಲ್ಲಿ ಮೊದಲು ಭೂಕುಸಿತ ಸಂಭವಿಸಿದೆ. ಜನರನ್ನು ರಕ್ಷಿಸಲು ತೆರಳಿದ್ದ ಪರಿಹಾರ ತಂಡಗಳ ಜತೆಗೆ ಅಲ್ಲಿ ನೆರೆದಿದ್ದ ಜನರೂ ಅವಶೇಷಗಳಡಿ ಸಿಲುಕಿದ್ದು ರಕ್ಷಣಾ ಸಿಬ್ಬಂದಿ ಇಲ್ಲಿ ತನಕ 257 ಶವಗಳನ್ನು ಹೊರತೆಗೆದಿದೆ. ಭೂಕುಸಿತದಲ್ಲಿ ಸಿಲುಕಿ ಪ್ರಾಣ ಕಳೆದುಕೊಂಡವರ ಮೃತದೇಹಗಳನ್ನು ಪತ್ತೆ ಹಚ್ಚಲು ರಕ್ಷಣಾ ತಂಡಗಳು ಶ್ರಮಿಸುತ್ತಿವೆ. ಮೃತರಲ್ಲಿ ಮಕ್ಕಳು ಮತ್ತು ಗರ್ಭಿಣಿಯರು ಸಹ ಇದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಾವಿನ ಸಂಖ್ಯೆ 500 ಕ್ಕೆ ಏರಬಹುದು ಎಂದು ಯುಎನ್ ಮಾನವೀಯ ವ್ಯವಹಾರಗಳ ಇಲಾಖೆ ಸ್ಥಳೀಯ ಅಧಿಕಾರಿಗಳನ್ನು ಉಲ್ಲೇಖಿಸಿ ತಿಳಿಸಿದೆ. ಆ ಪ್ರದೇಶದಿಂದ 15 ಸಾವಿರಕ್ಕೂ ಹೆಚ್ಚು ಸಂತ್ರಸ್ತರನ್ನು ಸ್ಥಳಾಂತರಿಸಬೇಕಾಗಿದೆ.

ಶ್ರೀರಂಗಪಟ್ಟಣ ಬಳಿ ಬೃಹತ್ ಲೀಥಿಯಂ ನಿಕ್ಷೇಪ ಪತ್ತೆ !

ರಾಜ್ಯಸಭೆಯಲ್ಲಿ ಕೇಂದ್ರ ಸಚಿವ ಜಿತೇಂದ್ರಸಿಂಗ್ ಮಾಹಿತಿ

ಹೊಸದಿಲ್ಲಿ,ಜು.26– ಕರ್ನಾಟಕದ ಮಂಡ್ಯ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಲೀಥಿಯಂ ನಿಕ್ಷೇಪ ಪತ್ತೆಯಾಗಿದೆ. ಮಂಡ್ಯದ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಮರಳಗಾಲ ಗ್ರಾಮದ ವ್ಯಾಪ್ತಿಯಲ್ಲಿ 1,600 ಟನ್ ನಿಕ್ಷೇಪ ಇರುವುದು ಪ್ರಾಥಮಿಕ ಸಮೀಕ್ಷೆಯಲ್ಲಿ ಕಂಡು ಬಂದಿದೆ ಎಂದು ಕೇಂದ್ರ ಸರಕಾರ ತಿಳಿಸಿದೆ.

ಭಾರತೀಯ ಭೂ ವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ತಂಡವು ಶ್ರೀರಂಗಪಟ್ಟಣದ ಈ ಗ್ರಾಮದ ವ್ಯಾಪ್ತಿಯಲ್ಲಿ ಲೀಥಿಯಂ ಖನಿಜ ಸಂಪತ್ತು ಇರುವುದನ್ನು ಈ ಹಿಂದೆಯೇ ದೃಢಪಡಿಸಿದೆ. ಶುಕ್ರವಾರ ರಾಜ್ಯಸಭೆಯಲ್ಲಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್, ಪರಮಾಣು ಇಂಧನ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ ಮಂಡ್ಯ ಜಿಲ್ಲೆಯ ಮರಳಗಾಲದಲ್ಲಿ ಬೃಹತ್ ಲೀಥಿಯಂ ನಿಕ್ಷೇಪ ಕಂಡು ಬಂದಿದೆ ಎಂದು ಸದನಕ್ಕೆ ಲಿಖಿತ ಉತ್ತರದಲ್ಲಿ ತಿಳಿಸಿದ್ದು, ಇಂಧನ ಸ್ವಾವಲಂಬನೆಯಲ್ಲಿ ಭಾರತಕ್ಕೆ ಇದು ದೊಡ್ಡ ಕೊಡುಗೆಯಾಗಲಿದೆ ಎಂದಿದ್ದಾರೆ.



ಜಿತೇಂದ್ರ ಸಿಂಗ್

ಕೇಂದ್ರದ ಪರಮಾಣು ಖನಿಜಗಳ ಪರಿಶೋಧನೆ ಹಾಗೂ ಸಂಶೋಧನಾ ನಿರ್ದೇಶನಾಲಯ ಕರ್ನಾಟಕದ ಹಲವು ಕಡೆ ಲೀಥಿಯಂ ನಿಕ್ಷೇಪ ಪತ್ತೆಗೆ ನಡೆಸಿದ ಸಮೀಕ್ಷೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಅಪರೂಪದ ಖನಿಜ ಸಂಪತ್ತು ಪತ್ತೆಯಾಗಿದೆ. ಭವಿಷ್ಯದಲ್ಲಿ ಭಾರತದ ನವೀಕರಿಸಬಹುದಾದ



ಇಂಧನ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಸಚಿವ ಜಿತೇಂದ್ರ ಸಿಂಗ್ ಮಾಹಿತಿ ನೀಡಿದರು.

ರಾಜ್ಯದ ಯಾದಗಿರಿಯಲ್ಲೂ ಲೀಥಿಯಂ ನಿಕ್ಷೇಪ ಪತ್ತೆ ಮಾಡಲು ಸಮೀಕ್ಷೆ ನಡೆಸಲಾಗಿದೆ. ಛತ್ತೀಸ್‌ಗಢದ ಕೊಬ್ರಾ, ರಾಜಸ್ಥಾನ, ಬಿಹಾರ, ಆಂಧ್ರ ಪ್ರದೇಶಗಳ ಹಲವು ಪ್ರದೇಶಗಳಲ್ಲೂ ಶೋಧನೆ ನಡೆಸಲಾಗಿದೆ. ಹಿಮಾಚಲ ಪ್ರದೇಶದ ಹಮೀರ್‌ಪುರ್ ಜಿಲ್ಲೆಯ ಮಸಾನ್‌ಬಾಲ್ ಪ್ರದೇಶದಲ್ಲಿ ಯುರೇನಿಯಂ ನಿಕ್ಷೇಪ ಪತ್ತೆ ಮಾಡಲಾಗಿದೆ. ಆದರೆ ಸದ್ಯಕ್ಕೆ ಹಿಮಾಚಲದಲ್ಲಿ ಯಾವುದೇ ಪರಮಾಣು ಇಂಧನ ಘಟಕ ಆರಂಭಿಸುವ ಉದ್ದೇಶ ಸರಕಾರದ ಮುಂದಿಲ್ಲ ಎಂದು ಸಚಿವರು ಹೇಳಿದರು.

ಅಮೆರಿಕದ ನಂತರ ಭಾರತವು ಲೀಥಿಯಂ ಐಯಾನ್ ಬ್ಯಾಟರಿಗಳ 2ನೇ ಅತಿದೊಡ್ಡ ಆಮದು ರಾಷ್ಟ್ರವಾಗಿ ಗುರುತಿಸಿ ಕೊಂಡಿದೆ. 2022ರಲ್ಲಿ ಭಾರತವು ಚೀನಾ ಮತ್ತು ಜಪಾನ್‌ನಿಂದ 1.54 ಲಕ್ಷ ಬ್ಯಾಟರಿಗಳನ್ನು ಆಮದು ಮಾಡಿಕೊಂಡಿದೆ. ಮೊಬೈಲ್, ಎಲೆಕ್ಟ್ರಿಕ್ ಕಾರು ಸೇರಿದಂತೆ ಅನೇಕ ಎಲೆಕ್ಟ್ರಾನಿಕ್ ಉಪಕರಣಗಳ ಜೀವಧಾತು ಎನಿಸಿರುವ ಲೀಥಿಯಂ ಖನಿಜವು ಭಾರತದ ಪಾಲಿಗೆ ಬಹುಮುಖ್ಯವಾಗಿದೆ. ಹೀಗಾಗಿ ಹಿಂದೆಯೇ ಜಮ್ಮು-ಕಾಶ್ಮೀರ ಮತ್ತು ಮಂಡ್ಯ ಜಿಲ್ಲೆಯಲ್ಲಿ ಪತ್ತೆಯಾಗಿರುವ ಲೀಥಿಯಂ ನಿಕ್ಷೇಪವು ಮುಂಬರುವ ದಿನಗಳಲ್ಲಿ ಭಾರತದ ಪಾಲಿಗೆ ದೊಡ್ಡ ವರದಾನವಾಗಲಿದೆ.

ಭವಿಷ್ಯದ ಸಾರಿಗೆ ವ್ಯವಸ್ಥೆಯಲ್ಲಿ ಎಲೆಕ್ಟ್ರಿಕ್ ಕಾರು, ಬೈಕುಗಳದ್ದೇ ಹವಾ ಇರಲಿದೆ. ಪೆಟ್ರೋಲ್/ಡೀಸೆಲ್ ಆಮದು ವೆಚ್ಚ ತಗ್ಗಿಸಲು ಕೇಂದ್ರ ಸರಕಾರವು ಎಲೆಕ್ಟ್ರಿಕ್ ವಾಹನಗಳ ತಯಾರಿಕೆಗೆ ಸಬ್ಸಿಡಿ ರೂಪದಲ್ಲಿ ಉತ್ತೇಜನ ನೀಡುತ್ತಿದೆ. ಲೀಥಿಯಂ–ಐಯಾನ್ ಬ್ಯಾಟರಿಗಳೇ ಎಲೆಕ್ಟ್ರಿಕ್ ವಾಹನಗಳ ಜೀವಾಳ. ಹೀಗಾಗಿ ಭಾರತವು ತನ್ನದೇ ನೆಲದಲ್ಲಿ ಲೀಥಿಯಂ ಉತ್ಪಾದಿಸಲು ಯಶಸ್ವಿಯಾದರಷ್ಟೇ ದೇಶೀಯ ಮಾರುಕಟ್ಟೆಯಲ್ಲಿ ಬ್ಯಾಟರಿಗಳ ಬೆಲೆ ತಗ್ಗಿ ಎಲೆಕ್ಟ್ರಿಕ್ ವಾಹನಗಳ ಬೆಲೆ ಇಳಿಕೆಯಾಗಲಿದೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಗುಂಡ ನಿನಗೆ ಯಾವ ಪ್ರಾಣಿ ಇಷ್ಟ?
ಗುಂಡ : ಬೆಕ್ಕು ಟೀಚರ್!
ಟೀಚರ್ : ಯಾಕೆ?
ಗುಂಡ : ಬೆಕ್ಕು ಅಡ್ಡ ಬಂದ್ರೆ ನಮ್ಮ ಅಜ್ಜಿ ಸ್ಕೂಲಿಗೆ ಹೋಗ್ಬೇಡ ಅಂತಾರೆ ಅದಕ್ಕೆ...!

ಮೈಸೂರು ಮಿತ್ರ

ಶನಿವಾರ, 27 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮುಗಿದರೇನು, ಮುಗಿಯದಿದ್ದರೇನು, ದೇವರು ಹಾಜರಾತಿ ಕೂಗಿದ ತಕ್ಷಣ ಎಲ್ಲಾ ಬಿಟ್ಟು ಕರೆಗೆ ಓಡುವುದೇ ಜಗದ ನಿಯಮ... ನೀನೂ ಹೊರತಲ್ಲ, ನಾನು ಹೊರತಲ್ಲ, ಮುನಿಸೇಕೆ ಈ ನಾಲ್ಕು ದಿನದ ಬದುಕಿನಲ್ಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಲುಗೆ ಕೊಟ್ಟರೆ ಸಾಕು ಹೆಗ್ಗಣವೂ ಏರುವುದು ಹೆಗಲಿಗೆ.

ನಿಮ್ಮ ಪತ್ರಗಳು

ವಾಲ್ಮೀಕಿ ರಾಮಾಯಣದಿಂದ ಪಾಠ ಕಲಿಯಬೇಕಿತ್ತು!

ಮಾನ್ಯರೆ,

ಎರಡು ದಶಕಗಳ ಹಿಂದಿನ ಘಟನೆ. ಅಂದು ನ್ಯಾಯಮೂರ್ತಿ ರಾಜೇಂದ್ರಬಾಬು ಅವರು ಮೈಸೂರಿನ ನ್ಯಾಯಾಲಯಗಳ ಆವರಣದಲ್ಲಿರುವ ವಕೀಲರ ಸಂಘಕ್ಕೆ ಭೇಟಿ ನೀಡಿದ್ದರು. ನ್ಯಾಯಮೂರ್ತಿಗಳೊಂದಿಗೆ ವಕೀಲರ ಸಂವಾದ ನಡೆಯುತ್ತಿತ್ತು. ಆಗ ನ್ಯಾ.ರಾಜೇಂದ್ರಬಾಬು ಅವರ ಬಳಿ ಯುವ ವಕೀಲರೊಬ್ಬರು ಪ್ರಶ್ನೆಯೊಂದನ್ನು ಕೇಳಿದರು.

"ನ್ಯಾಯಾಂಗದಲ್ಲೂ ಭ್ರಷ್ಟಾಚಾರ ಇದೆ ಎಂಬ ಮಾತು ಕೇಳಿಬರುತ್ತಿದೆಯಲ್ಲಾ? ಇದರ ಬಗ್ಗೆ ತಮ್ಮ ಅಭಿಪ್ರಾಯವೇನು?"

ತಕ್ಷಣ ನ್ಯಾ.ರಾಜೇಂದ್ರಬಾಬುರವರು ಉತ್ತರಿಸಿದ್ದು ಹೀಗೆ:

"ನಿಮಗೆ ರಾಮಾಯಣ ಗೊತ್ತು. ರಾವಣ ನೇರವಾಗಿ ಬಂದು ಸೀತೆಯನ್ನು ಅಪಹರಿಸಿಕೊಂಡು ಹೋಗಲಿಲ್ಲ. ಆತ ಮಾಡಿದ್ದಾದರೂ ಏನು? ಸಂನ್ಯಾಸಿಯ ವೇಷದಲ್ಲಿ ಬಂದು ಸೀತೆಯನ್ನು ಅಪಹರಿಸಿಕೊಂಡು ಹೋದ. ರಾವಣ ಸಂನ್ಯಾಸಿಯ ವೇಷ ಧರಿಸಿಕೊಂಡು ಬಂದು ಸಂನ್ಯಾಸಿಯು ಮಾಡಬಾರದ ಕೆಲಸವನ್ನು ಮಾಡಿದ. ಇದರಿಂದಾಗಿ ಜನಗಳಿಗೆ ಸಂನ್ಯಾಸಿಗಳ ಮೇಲಿನ ನಂಬಿಕೆಗೆ ಧಕ್ಕೆಯಾಯಿತು. ಜನ ಸಂನ್ಯಾಸಿಗಳನ್ನು ಅನುಮಾನದಿಂದ ನೋಡುವ ಹಾಗಾಯಿತು. (ಅಲ್ಲಿಯೇ ಎದುರಿನಲ್ಲಿ ಕುಳಿತಿದ್ದ ನ್ಯಾಯಾಧೀಶರತ್ತ ಕೈ ತೋರಿಸುತ್ತಾ) ಇವರೂ ಅಷ್ಟೇ.... ನ್ಯಾಯಾಧೀಶರ ವೇಷ ಧರಿಸಿ ಇವರು.. ನ್ಯಾಯಾಧೀಶರು ಮಾಡಬಾರದ ಕೆಲಸ ಮಾಡಿದರೆ ಇವರಿಗೇನಾಗುತ್ತದೆ ಗೊತ್ತೇ? ಸಂನ್ಯಾಸಿಯ ವೇಷ ಧರಿಸಿ ಸಂನ್ಯಾಸಿಯು ಮಾಡಬಾರದ ಕೆಲಸ ಮಾಡಿದ ರಾವಣನಿಗೆ ಯಾವ ಗತಿ ಬಂತೋ ಅದೇ ಗತಿ ಈ ನ್ಯಾಯಾಧೀಶರಿಗೂ ಬರುತ್ತದೆ"

ಅಂದು ನ್ಯಾಯಮೂರ್ತಿ ರಾಜೇಂದ್ರಬಾಬು ಅವರಾಡಿದ ಮಾತು ಇಂದಿಗೂ ಪ್ರಸ್ತುತ ಅಲ್ಲವೇ?

ಹೌದು ನ್ಯಾಯಮೂರ್ತಿಗಳು ಅಂದು ಆಡಿದ್ದ ಮಾತು ಇಂದಿನ ವಾಲ್ಮೀಕಿ ನಿಗಮದ ಹಗರಣದ ರೂವಾರಿಗಳಿಗೂ ಅನ್ವಯಿಸುತ್ತದೆ.

ರಾವಣ ಒಬ್ಬ ರಾಜ. ಆತ ನೇರವಾಗಿ ಬಂದು ಸೀತೆಯನ್ನು ಅಪಹರಿಸಿದ್ದರೆ ಆತನನ್ನು ಪರಾಕ್ರಮಿ (!) ಎನ್ನಬಹುದಾಗಿತ್ತು. ಆದರೆ ಆತ ಸಂನ್ಯಾಸಿಯ ವೇಷ ಧರಿಸಿ ಸೀತೆಯನ್ನು ಅಪಹರಿಸಿದ. ಇದರಿಂದಾಗಿ ಜನರು ಸಂನ್ಯಾಸಿಗಳನ್ನು ಅನುಮಾನದಿಂದ ನೋಡುವಂತಾಯಿತು. ಈ ಶಾಪ ರಾವಣನಿಗೂ ತಟ್ಟಿತು. ಆತ ನಾಶವಾದ. ಆತನ ಕುಟುಂಬವೂ ಅವಮಾನಿತವಾಯಿತು.

ಸಂನ್ಯಾಸಿಯ ವೇಷ ಧರಿಸಿ ಸಂನ್ಯಾಸಿಯು ಮಾಡಬಾರದ ಕೆಲಸವನ್ನು ಮಾಡಿದ ರಾವಣನಿಗೆ ಯಾವ ಗತಿ ಉಂಟಾಯಿತು ಎಂಬುದನ್ನು ವಾಲ್ಮೀಕಿ ಮಹರ್ಷಿಗಳು ರಾಮಾಯಣದ ಮೂಲಕ ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ.

ವಾಲ್ಮೀಕಿ ಮಹರ್ಷಿಗಳು ಕಟ್ಟಿಕೊಟ್ಟ ರಾಮಾಯಣದ ನೀತಿಯನ್ನು ನಮ್ಮ "ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ"ದ ಘಟಾನುಘಟಿಗಳು ಅರಿಯದೇ ಹೋದುದು ವಿಪರ್ಯಾಸ.

ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿ ಮಾಡುವವರಂತೆ ವೇಷ ತೊಟ್ಟು ಈ ಪರಿಶಿಷ್ಟ ಪಂಗಡಗಳವರ ಹಿತಾಸಕ್ತಿಗೆ ಕೊಳ್ಳಿ ಇಟ್ಟು ನಿಗಮದ ಆಸ್ತಿಯನ್ನು ನುಂಗಿ ನೀರು ಕುಡಿದ ಅಕ್ರಮಾದಿತ್ಯರಿಗೆ ಸಂನ್ಯಾಸಿಯ ವೇಷ ಧರಿಸಿ ಸೀತಾಪಹರಣ ಮಾಡಿದ ರಾವಣನಿಗಾದ ಗತಿಯೇ ಉಂಟಾಗುವುದಲ್ಲವೇ? ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗುತ್ತದೆ. ಉಪ್ಪು ತಿಂದವನು ನೀರು ಕುಡಿಯಲೇ ಬೇಕು. ಇಂತಹ ನಾಣ್ಣುಡಿಗಳನ್ನು ಅರ್ಥ ಮಾಡಿಕೊಳ್ಳದವರ ಕುಟುಂಬ ನಾಶವಾಗುವುದರಲ್ಲಿ ಸಂದೇಹವಿಲ್ಲ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಕುವೆಂಪುನಗರ ಕಾಂಪ್ಲೆಕ್ಸ್ ವೃತ್ತದಲ್ಲಿ ಬಸ್ ನಿಲ್ದಾಣವಿಲ್ಲದೆ ಸಾರ್ವಜನಿಕರ ಪರದಾಟ



ಮಾನ್ಯರೆ,

ಇದು, ಮೈಸೂರಿನ ಪ್ರತಿಷ್ಠಿತ ಬಡಾವಣೆ ಕುವೆಂಪುನಗರದ ಮುಖ್ಯ ಜಂಕ್ಷನ್ ಆದ, ಹೋಟೆಲ್ ಶಾಂತಿ ಸಾಗರ್ ಮತ್ತು ಕುವೆಂಪುನಗರ ಕಾಂಪ್ಲೆಕ್ಸ್ ವೃತ್ತ. ಇಲ್ಲಿಂದ, ಸಿಟಿ ಬಸ್ ನಿಲ್ದಾಣ, ರೈಲ್ವೇ ಸ್ಟೇಷನ್, ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಹೋಗಲು ನೂರಾರು ಪ್ರಯಾಣಿಕರು ಇಲ್ಲಿ ಬಸ್ ನಿಲ್ದಾಣ ಇಲ್ಲವಾದ್ದರಿಂದ ಮಳೆ – ಬಿಸಿಲು ಎನ್ನದೆ, ರಸ್ತೆಯಲ್ಲಿಯೇ ಬಸ್‌ಗಾಗಿ ಕಾಯುವಂತಾಗಿದೆ. ಇಲ್ಲಿಂದ ಸುಮಾರು ದೂರದಲ್ಲಿ ಅವೈಜ್ಞಾನಿಕವಾಗಿ ಬಸ್ ನಿಲ್ದಾಣ ನಿರ್ಮಿಸಿದ್ದಾರೆ. ಸಾರ್ವಜನಿಕರು ನಿಲ್ಲುವ ಕಡೆ ಬಸ್ ನಿಲ್ದಾಣ ನಿರ್ಮಾಣ ಮಾಡುವಂತಾಗಬೇಕು. ಶಾಸಕರು ಹೋಟೆಲ್ ಶಾಂತಿ ಸಾಗರ್ ಬಳಿ, ಬಸ್ ನಿಲ್ದಾಣ ನಿರ್ಮಾಣ ಮಾಡಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಬೆಂಕಿ ನವಾಬ್ ರಸ್ತೆಯಲ್ಲಿ ಕಸದ ರಾಶಿ



ಮಾನ್ಯರೆ,

ಮೈಸೂರಿನ ಮಂಡಿ ಮೊಹಲ್ಲಾದ ಬೆಂಕಿ ನವಾಬ್ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ. ಈ ಕಸದ ರಾಶಿಯಿಂದ ದುರ್ವಾಸನೆ ಬರುತ್ತಿದ್ದು, ಇಲ್ಲಿನ ನಿವಾಸಿಗಳು ವಾಸಿಸಲು ತುಂಬಾ ತೊಂದರೆಯಾಗುತ್ತಿದೆ. ಅಲ್ಲದೆ, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಪ್ರದೇಶವು ಸೊಳ್ಳೆ, ನೊಣ ಹಾಗೂ ವಿಷಜಂತುಗಳ ತಾಣವಾಗಿದ್ದು, ನಿವಾಸಿಗಳಿಗೆ ಡೆಂಗ್ಯೂ ಭೀತಿಯುಂಟಾಗಿದೆ. ಕಸ ವಿಲೇವಾರಿಯಲ್ಲಿ ನಗರಪಾಲಿಕೆ ವಿಫಲವಾಗಿದೆ ಎನ್ನಲಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕಸದ ರಾಶಿಯನ್ನು ತೆರವುಗೊಳಿಸಿ ಇಲ್ಲಿನ ನಿವಾಸಿಗಳು ನೆಮ್ಮದಿಯಿಂದ ವಾಸಿಸಲು ಅನುಕೂಲ ಮಾಡಿಕೊಡಬೇಕೆಂದು ಮನವಿ. –ಎ. ಸೌಮ್ಯ, ಮೈಸೂರು.

ದಿಕ್ಕುದೆಸೆ



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ಜಗತ್ತಿನ ಮುಂದಿದೆ ನಿರಾಶ್ರಿತರ ಗಾಢ ಸಮಸ್ಯೆ



> "ಅನೇಕ ದೇಶಗಳಲ್ಲಿ ಸುದೀರ್ಘ ಕಾಲದಿಂದಿರುವ ಕಳವಳಕಾರಿ ಪರಿಸ್ಥಿತಿ, ಪರಿಹಾರ ಮರೀಚಿಕೆಯಾಗಿರುವ ಪರಿಸ್ಥಿತಿಗಳಿಂದಾಗಿ ನಿರಾಶ್ರಿತರ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ. ಹೊಸ ಹಾಗೂ ತೀವ್ರ ಸ್ವರೂಪದ ಘರ್ಷಣೆಗಳು ಹಾಗೂ ಪರಿಹಾರವಾಗದೇ ಉಳಿದಿರುವ ಬಿಕ್ಕಟ್ಟುಗಳಿಂದಲೂ ನಿರಾಶ್ರಿತರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಸಿರಿಯ ಮಾತ್ರವಲ್ಲ, ದಕ್ಷಿಣ ಸುಡಾನ್, ಯೆಮೆನ್, ಬುರುಂಡಿಯಲ್ಲಿ ಹುಟು ಮತ್ತು ಟುಟ್ಸಿ ಜನಾಂಗಗಳ ಮಧ್ಯೆ ನಡೆಯುತ್ತಿರುವ ನರಮೇಧ, ಮಧ್ಯ ಆಫ್ರಿಕಾದ ಕೆಲವು ದೇಶಗಳನ್ನು ವಿಶ್ವಸಂಸ್ಥೆ ಹೆಸರಿಸಿದೆ.

ದ್ವಿತೀಯ ಮಹಾಯುದ್ಧದ ನಂತರ ಯೂರೋಪ್ ದೇಶಗಳು ಅತೀ ದೊಡ್ಡ ಪ್ರಮಾಣದಲ್ಲಿ ಹರಿದು ಬರುತ್ತಿರುವ ನಿರಾಶ್ರಿತರ ಸಮಸ್ಯೆಯಲ್ಲಿ ಸಿಲುಕಿವೆ. ಪ್ಯಾಲೆಸ್ತೀನ್, ಸಿರಿಯಾ, ಅಫ್ಘಾನಿಸ್ಥಾನ್‌ನ ನಂತರ ಮಧ್ಯಪ್ರಾಚ್ಯ, ಉತ್ತರ ಆಫ್ರಿಕಾ ದೇಶಗಳಿಂದ ಪ್ರವಾಹದೋಪಾದಿಯಲ್ಲಿ ನಿರಾಶ್ರಿತರು ಯೂರೋಪಿಯನ್ ದೇಶಗಳಿಗೆ ವಲಸೆ ಬಂದಿದ್ದಾರೆ. 2015ರಲ್ಲಿ ಜಾಗತಿಕವಾಗಿ ನಿರಾಶ್ರಿತರಾದವರ ಪ್ರಮಾಣ ದಿಢೀರನೇ 5.8 ಮಿಲಿಯನ್‌ನಷ್ಟು ಏರಿಕೆಯಾಗಿ ಅದು ವರ್ಷಾಂತ್ಯಕ್ಕೆ 65.3 ಮಿಲಿಯನ್‌ಗೆ ಏರಿ ದಾಖಲೆ ನಿರ್ಮಿಸಿತು. ವಿಶ್ವಸಂಸ್ಥೆಯ ನಿರಾಶ್ರಿತರ ಸಂಬಂಧಿ ಏಜೆನ್ಸಿಯು ನೀಡಿದ ಮಾಹಿತಿಯಂತೆ 2015ರಲ್ಲಿ ಜಗತ್ತಿನ ಒಟ್ಟು ಜನಸಂಖ್ಯೆ 74.2 ಬಿಲಿಯನ್‌ನಲ್ಲಿ ಪ್ರತಿ 113 ಜನರಲ್ಲಿ ಓರ್ವ ವ್ಯಕ್ತಿ ನಿರಾಶ್ರಿತ ಅಥವಾ ತನ್ನ ದೇಶದಲ್ಲೇ ನಿರ್ವಸಿತನಾಗಿದ್ದನು. 2011ರಲ್ಲಿ ಸಿರಿಯಾದಲ್ಲಿ ಸ್ಫೋಟಗೊಂಡ ಅಂತರ್ಯುದ್ಧ ನಿರಾಶ್ರಿತರ ಸಂಖ್ಯೆಯಲ್ಲಿ ಭಾರೀ ಏರಿಕೆಗೆ ಕಾರಣವಾಯಿತು. 2018ರಲ್ಲಿ ಬಲಾತ್ಕಾರದಿಂದ ತಮ್ಮ ಸ್ವಂತ ದೇಶಗಳಿಂದ ಹೊರದಬ್ಬಲ್ಪಟ್ಟವರ ಪ್ರಮಾಣ ದಾಖಲೆ 71 ಮಿಲಿಯನ್‌ಗೆ ಏರಿಕೆಯಾಗಿತ್ತು.

ವಿಶ್ವಸಂಸ್ಥೆಯು ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿಯಲ್ಲಿ ದೇಶವಿಲ್ಲದೆ ನಿರಾಶ್ರಿತರಾಗಿರುವವರ ಪ್ರಮಾಣದಲ್ಲಿ ಶೇ.12ರಷ್ಟು ಏರಿಕೆಯಾಗಿದೆ. ಯುದ್ಧಗಳು, ಮಾನವೀಯ ಬಿಕ್ಕಟ್ಟುಗಳು, ಜನಾಂಗೀಯ ಕಲಹಗಳು, ಅಸ್ಥಿರ ಸರಕಾರಗಳು, ಬಡತನ, ಭ್ರಷ್ಟಾಚಾರ, ನಿರುದ್ಯೋಗ, ಪ್ರಾಕೃತಿಕ ವಿಕೋಪಗಳು, ಹೆಚ್ಚುತ್ತಿರುವ ಧಾರ್ಮಿಕ ಉನ್ಮಾದ, ಮರೀಚಿಕೆಯಾಗುತ್ತಿರುವ ಪರಿಹಾರ, ನಿರಾಶ್ರಿತರಿಗೆ ಪುನರ್ವಸತಿ ಪ್ರದೇಶಗಳು ಕಡಿಮೆಯಾಗುತ್ತಿರುವುದು, ಇವೇ ಕೆಲವು ಕಾರಣಗಳಿಂದ ಜನರು ನಿರಾಶ್ರಿತರಾಗುತ್ತಿದ್ದಾರೆ.

ಅನೇಕ ದೇಶಗಳಲ್ಲಿ ಸುದೀರ್ಘ ಕಾಲದಿಂದಿರುವ ಕಳವಳಕಾರಿ ಪರಿಸ್ಥಿತಿ, ಪರಿಹಾರ ಮರೀಚಿಕೆಯಾಗಿರುವ ಪರಿಸ್ಥಿತಿಗಳಿಂದಾಗಿ ನಿರಾಶ್ರಿತರ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ. ಹೊಸ ಹಾಗೂ ತೀವ್ರ ಸ್ವರೂಪದ ಘರ್ಷಣೆಗಳು ಹಾಗೂ ಪರಿಹಾರವಾಗದೇ ಉಳಿದಿರುವ ಬಿಕ್ಕಟ್ಟುಗಳಿಂದಲೂ ನಿರಾಶ್ರಿತರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಸಿರಿಯ ಮಾತ್ರವಲ್ಲ, ದಕ್ಷಿಣ ಸುಡಾನ್, ಯೆಮೆನ್, ಬುರುಂಡಿಯಲ್ಲಿ ಹುಟು ಮತ್ತು ಟುಟ್ಸಿ ಜನಾಂಗಗಳ ಮಧ್ಯೆ ನಡೆಯುತ್ತಿರುವ ನರಮೇಧ, ಮಧ್ಯ ಆಫ್ರಿಕಾದ ಕೆಲವು ದೇಶಗಳನ್ನು ವಿಶ್ವಸಂಸ್ಥೆ ಹೆಸರಿಸಿದೆ.

ಮಧ್ಯಪ್ರಾಚ್ಯ ಮತ್ತು ಆಫ್ರಿಕಾ ದೇಶಗಳಲ್ಲಿನ ಬಿಕ್ಕಟ್ಟಿನ ನಂತರ ಇತ್ತೀಚಿನ ವರ್ಷಗಳಲ್ಲಿ ಮಧ್ಯ ಅಮೇರಿಕಾದ ಮೆಕ್ಸಿಕೊ, ಪನಾಮಾ, ಕೊಲಂಬಿಯಾ, ವೆನೆಜುವೆಲಾ ಮೊದಲಾದ ದೇಶಗಳಲ್ಲೂ ವಾತಾವರಣ ಹದಗೆಟ್ಟಿದೆ. 2015ರ ಅಂತ್ಯಕ್ಕೆ ಬಂಡುಕೋರರ ಗುಂಪುಗಳ ಮಧ್ಯೆ ಹೆಚ್ಚುತ್ತಿರುವ ಸಶಸ್ತ್ರ ಸಂಘರ್ಷಗಳಿಂದ ಪಲಾಯನ ಮಾಡುವವರ ಪ್ರಮಾಣದಲ್ಲಿ ಶೇ.17ರಷ್ಟು ಏರಿಕೆಯಾಗಿದೆ. ಇವರಲ್ಲಿ 1948ರಿಂದ ನಿರ್ವಸಿತರಾಗಿರುವ ಪ್ಯಾಲೆಸ್ತೀನಿಯನ್‌ರು, ಅದೇ ರೀತಿ 1980ರಿಂದ ಕಾಶ್ಮೀರದಿಂದ ನಿರ್ವಸಿತರಾಗಿರುವ ಹಿಂದೂಗಳ ಸಂಖ್ಯೆ ಸೇರಿಲ್ಲ.

2013ರಲ್ಲಿ ಜೋರ್ಡಾನ್‌ನ ನಾಲ್ಕನೇ ಅತೀ ದೊಡ್ಡ ನಗರವಾದ ಝುಟ್ಹಾರಿಯು ಕೆಲವು ತಿಂಗಳುಗಳ ಕಾಲ ಸಿರಿಯಾದಿಂದ ಪಲಾಯನ ಮಾಡಿ ಬಂದಿದ್ದ ಸುಮಾರು ಎರಡು ಲಕ್ಷ ನಿರಾಶ್ರಿತರಿಗೆ ಆಶ್ರಯ ನೀಡಿತ್ತು. ಕಳೆದ ಹನ್ನೊಂದು ವರ್ಷಗಳಲ್ಲಿ ಈ ಶಿಬಿರದಲ್ಲಿ ನಿರಂತರವಾಗಿ ನಿರಾಶ್ರಿತರ ಸಂಖ್ಯೆ ಇಳಿಮುಖಗೊಂಡಿದೆ. ಪ್ರಸ್ತುತ ಈ ಶಿಬಿರದಲ್ಲಿ ಎಂಭತ್ತು ಸಾವಿರದಷ್ಟು ನಿರಾಶ್ರಿತರಿದ್ದು, ಇವರಲ್ಲಿ ಶೇ.50ರಷ್ಟು ಮಕ್ಕಳಿದ್ದಾರೆ. ನಿರಾಶ್ರಿತರ ಶಿಬಿರಗಳಲ್ಲಿ ಶಿಶುಗಳ ಆರೈಕೆ, ಪಾಲನೆ ಅತ್ಯಂತ ಸವಾಲಿನ ಸಂಗತಿಯಾಗಿದೆ. ಸನಿಹದಲ್ಲಿ ಸಿರಿಯಾದಲ್ಲಿ ಅಂತರ್ಯುದ್ಧ ಮುಕ್ತಾಯದ ಸೂಚನೆ ಇಲ್ಲದಿರುವುದರಿಂದ ಝುಟ್ಹಾರಿಯು ಮಧ್ಯಪ್ರಾಚ್ಯದ ಕೆಲವೇ ಅತೀ ದೊಡ್ಡ ನಿರಾಶ್ರಿತರ ಶಿಬಿರಗಳಲ್ಲಿ ಒಂದಾಗಿದೆ.

ವಿಶ್ವಸಂಸ್ಥೆಯ ನಿರಾಶ್ರಿತರಿಗಾಗಿರುವ ಏಜೆನ್ಸಿಯು ಪ್ರಸಕ್ತ ವರ್ಷ ಬಿಡುಗಡೆ ಮಾಡಿರುವ ಮಾಹಿತಿಯಂತೆ ಜಗತ್ತಿನಲ್ಲಿ ನಿರ್ವಸಿತರಾದವರ ಅಂದಾಜು ಸಂಖ್ಯೆ 131 ಮಿಲಿಯನ್‌ನಷ್ಟಾಗಿದೆ. ಇವರಲ್ಲಿ 63 ಮಿಲಿಯನ್ ಆಂತರಿಕವಾಗಿ ನಿರ್ವಸಿತರಾಗಿದ್ದು, 57 ಮಿಲಿಯನ್ ಸ್ವಂತ ದೇಶದಿಂದ ಹೊರದೂಡಲ್ಪಟ್ಟ ನಿರಾಶ್ರಿತರಾಗಿದ್ದಾರೆ. ಜಗತ್ತಿನಲ್ಲಿ ಪ್ರತಿ ಎಂಟರಲ್ಲಿ ಓರ್ವ ನಿರಾಶ್ರಿತನಾಗಿದ್ದಾನೆ.

2022ರಲ್ಲಿ ಮುಕ್ಕಾಲು ಪಾಲು ನಿರಾಶ್ರಿತರಿಗೆ ಕೆಳ ಮತ್ತು ಮಧ್ಯಮ ಆದಾಯವುಳ್ಳ ಇಸ್ಲಾಮಿಕ್ ದೇಶಗಳು ಆಶ್ರಯ ನೀಡಿದವು. ಟರ್ಕಿ 3.6 ಮಿಲಿಯನ್, ಇರಾನ್ 3.4 ಮಿಲಿಯನ್ ನಿರಾಶ್ರಿತರಿಗೆ ಆಶ್ರಯ ನೀಡಿವೆ. ಲೆಬನಾನ್ ಮತ್ತು ಜೋರ್ಡಾನ್‌ನಲ್ಲೂ ಭಾರೀ ಪ್ರಮಾಣದಲ್ಲಿ ನಿರಾಶ್ರಿತರು ನೆಲೆಸಿದ್ದಾರೆ. 2011ರಲ್ಲಿ ಸಿರಿಯಾದಲ್ಲಿ ಅಂತರ್ಯುದ್ಧ ಆರಂಭಗೊಂಡ ನಂತರ ಪ್ರಾಣ ಭಯದಿಂದ ಪಲಾಯನ ಮಾಡಿ ಬಂದ 5.3 ಮಿಲಿಯನ್‌ಕ್ಕಿಂತ ಹೆಚ್ಚಿನ ಸಂಖ್ಯೆಯ ನಿರಾಶ್ರಿತರು ಕೆಳ ಮತ್ತು ಮಧ್ಯಮ ಆದಾಯವುಳ್ಳ ದೇಶಗಳಿಗೆ ಬಂದಿದ್ದಾರೆ. ಯೂರೋಪಿಯನ್ ದೇಶಗಳಲ್ಲಿ ಜರ್ಮನಿಯು ಅತೀ ಹೆಚ್ಚು ಸುಮಾರು 5.6 ಲಕ್ಷ ನಿರಾಶ್ರಿತರನ್ನು ಸ್ವೀಕರಿಸಿದೆ. ಸಿರಿಯಾದ 6.8 ಮಿಲಿಯನ್ ನಾಗರಿಕರು ದೇಶದೊಳಗೆ ನಿರ್ವಸಿತರಾಗಿ ಬದುಕುತ್ತಿದ್ದಾರೆ.

ವಿಶ್ವಸಂಸ್ಥೆಯ ಮೇಲುಸ್ತುವಾರಿಯಲ್ಲಿ ದೇಶಗಳೊಳಗೆ ವಿಸ್ಥಾಪಿತರಾಗಿರುವ ಲಕ್ಷಾಂತರ ನಿರ್ವಸಿತರು "ನಾವು ಇಲ್ಲಿಯೇ ಶಾಶ್ವತವಾಗಿರಲು ಬಯಸಿಲ್ಲ. ಇಲ್ಲಿ ಕೇವಲ ಜೀವಿಸುತ್ತಿದ್ದೇವೆ" ಎನ್ನುತ್ತಾರೆ. ಕಳೆದ ಎಪ್ಪತ್ತೈದು ವರ್ಷಗಳಿಂದ ಸ್ವಯಂಕೃತಾಪರಾಧದಿಂದ ನಿರಾಶ್ರಿತರಾಗಿರುವ ಪ್ಯಾಲೆಸ್ತೀನಿಯನ್‌ರ ಆರು ಮಿಲಿಯನ್ ನಾಗರಿಕರು ವಿಶ್ವಸಂಸ್ಥೆಯ ಪ್ರತ್ಯೇಕ ನಿರಾಶ್ರಿತರ ವರ್ಗದಲ್ಲಿ ಬರುತ್ತಾರೆ. ಸುಮಾರು ಹದಿನೈದು ಲಕ್ಷದಷ್ಟು ಪ್ಯಾಲೆಸ್ತೀನಿಯನ್‌ರು ಪಶ್ಚಿಮ ದಂಡೆ, ಗಾಜಾಪಟ್ಟಿ ಹಾಗೂ ಇನ್ನಿತರ ಮಧ್ಯಪ್ರಾಚ್ಯದ ದೇಶಗಳಲ್ಲಿ ನೆಲೆಸಿದ್ದಾರೆ.

ಪ್ಯಾಲೆಸ್ತೀನ್ ನಿರಾಶ್ರಿತರ ಶಿಬಿರಗಳ ಉಸ್ತುವಾರಿಯಾಗಿರುವ ವಿಶ್ವಸಂಸ್ಥೆಯ ಪರಿಹಾರ ಏಜೆನ್ಸಿಗಳ ಪ್ರಕಾರ ಈ ಶಿಬಿರಗಳಲ್ಲಿ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಶಿಬಿರಗಳಲ್ಲಿ ಆಗುತ್ತಿರುವ ಜನಸಂಖ್ಯಾ ಸ್ಫೋಟ, ವಿಪರೀತ ಜನಸಾಂದ್ರತೆ, ಮೂಲ ಸೌಕರ್ಯಗಳ ಕೊರತೆಯಿಂದ ಬದುಕು ನರಕಸದೃಶವಾಗಿದೆ. ಪ್ರತ್ಯೇಕ ಶಿಬಿರಗಳು ಸಾಂಕ್ರಾಮಿಕ ರೋಗ ಹರಡುವ ಕೇಂದ್ರಗಳಾಗಿವೆ. ಲೆಬನಾನ್‌ನಲ್ಲಿರುವ ಕೆಲವು ಶಿಬಿರಗಳಲ್ಲಿ ಮಳೆಗಾಲದಲ್ಲಿ ಒಳ ಚರಂಡಿಗಳ ವಿಷಯುಕ್ತ ನೀರು ಮನೆಗಳಿಗೆ ನುಗ್ಗುತ್ತಿರುವುದು ಸಹಜ ಸಮಸ್ಯೆಯಾಗಿದೆ. ಇವರಿಗೆ ವಿದ್ಯಾಭ್ಯಾಸವಾಗಲೀ, ಆರ್ಥಿಕ ಭದ್ರತೆಯಾಗಲೀ ಅಥವಾ ಯಾವುದೇ ಕನಿಷ್ಠ ಸೌಕರ್ಯಗಳಿಲ್ಲದ ವಾತಾವರಣದಲ್ಲಿ ಪ್ರಾಣಿಗಳಂತೆ ಬದುಕು ಸವೆಸುತ್ತಿದ್ದಾರೆ. ಶೇ.31ರಷ್ಟು ನಿರಾಶ್ರಿತರು ತೀವ್ರವಾದ ಬಹು ರೋಗಗಳಿಂದ ನರಳುತ್ತಿದ್ದಾರೆ. ಶೇ.55ರಷ್ಟು ಮಂದಿ ಪೂರ್ಣ ಅಥವಾ ಭಾಗಶಃ ಮಾನಸಿಕ ರೋಗಿಗಳಾಗಿದ್ದಾರೆ. ಈ ಶಿಬಿರಗಳಲ್ಲಿ ಸಮರ್ಪಕ ಭದ್ರತೆಗಳಿಲ್ಲದ್ದರಿಂದ ಲೈಂಗಿಕ ದೌರ್ಜನ್ಯಗಳು ಎಗ್ಗಿಲ್ಲದೆ ನಡೆಯುತ್ತಿವೆ. ಪ್ರತ್ಯೇಕ ವಿಚಾರಗಳಿಗೆ ಗುಂಪು ಘರ್ಷಣೆ, ಹೊಡೆದಾಟಗಳು, ಹತ್ಯೆಗಳು ಸಹಜವೆಂಬಂತೆ ನಡೆಯುತ್ತಿವೆ. ವಿಶ್ವಸಂಸ್ಥೆ, ಜಾಗತಿಕ ಸೇವಾ ಸಂಸ್ಥೆಗಳು ನೀಡುತ್ತಿರುವ ಜೀವನಾವಶ್ಯಕ ವಸ್ತುಗಳ ಮೇಲೆ ಇವರು ಅವಲಂಬಿತರಾಗಿರುವ ಕಾರಣ ಶೇ.80ರಷ್ಟು ನಿರಾಶ್ರಿತರಲ್ಲಿ ಬಡತನ, ಸೋಮಾರಿತನ ಮಿತಿ ಮೀರಿದೆ. ಗಾಜಾಪಟ್ಟಿ ಶಿಬಿರದಲ್ಲಿರುವ ಶೇ.47ರಷ್ಟು ನಿರಾಶ್ರಿತರು ನಿರುದ್ಯೋಗಿಗಳಾಗಿದ್ದಾರೆ. ಶೇ.13ರಷ್ಟು ಯುವ ಜನರು ಪೌಷ್ಠಿಕಾಂಶಗಳ ಕೊರತೆಯಿಂದ ರಕ್ತಹೀನತೆಯಂತಹ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಪ್ಯಾಲೆಸ್ತೀನಿಯನ್‌ನ ಬಹುಪಾಲು ನಿರಾಶ್ರಿತರು ತಮ್ಮ ಸ್ವಂತ ಸ್ಥಾನಕ್ಕೆ ಮರಳಿ ಹೋಗಿ ಬದುಕಲು ಬಯಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. 2023ರಲ್ಲಿ ಇಪ್ಪತ್ತೈದು ಸಾವಿರದಷ್ಟು ನಿರಾಶ್ರಿತರು ತಮ್ಮ ತಾಯ್ನಾಡಿಗೆ ಮರಳಿದ್ದಾರೆ. ಉಳಿದವರು ಯೂರೋಪಿಯನ್ ದೇಶಗಳಲ್ಲಿ ನೆಲೆಸಲು ಬಯಸುತ್ತಿದ್ದಾರೆ.

ಸನಿಹ ಭವಿಷ್ಯದಲ್ಲಿ ಯೂರೋಪಿಯನ್ ದೇಶಗಳು ಮಧ್ಯಪ್ರಾಚ್ಯ ದೇಶಗಳ ನಿರಾಶ್ರಿತರು ದೇಶಕ್ಕೆ ಬರದಂತೆ ನಿಷೇಧಿಸುವ ಎಲ್ಲಾ ಸಾಧ್ಯತೆಗಳಿವೆ. ಈ ಹಿಂದೆ ಮುಕ್ತ ಅನುಮತಿಯಲ್ಲಿ ಯೂರೋಪಿಯನ್ ದೇಶಗಳಿಗೆ ಹರಿದು ಬಂದ ನಿರಾಶ್ರಿತರು ಈಗ ಅಲ್ಲಿನ ನಾಗರಿಕರಿಗೆ ಭಾರೀ ಸಮಸ್ಯೆಗಳನ್ನು ಸೃಷ್ಟಿಸಿದ್ದಾರೆ. ನಿರ್ಬಂಧಿತ ಸಾಮಾಜಿಕ ವ್ಯವಸ್ಥೆ ಹೊಂದಿರುವ ವಲಸಿಗರು ಯೂರೋಪಿಯನ್ ಮುಕ್ತ ಸಾಮಾಜಿಕ ವ್ಯವಸ್ಥೆ ನಾಶ ಮಾಡುವ ಪ್ರಯತ್ನದಲ್ಲಿದ್ದಾರೆ. ಆದ್ದರಿಂದ ಶಾಂತಿಯುತವಾಗಿದ್ದ ಯೂರೋಪ್ ಇತ್ತೀಚಿನ ವರ್ಷಗಳಲ್ಲಿ ಅಶಾಂತಿ, ದೊಂಬಿ, ಗೊಂದಲಗಳ ಗೂಡಾಗಿದೆ. ಮುಂದಿನ ದಿನಗಳಲ್ಲಿ ವಲಸೆ ಬಂದಿರುವವರು ಮತ್ತು ಮೂಲ ಯೂರೋಪಿಯನ್‌ರ ನಡುವೆ ಪ್ರಭುತ್ವಕ್ಕಾಗಿ, ಅಸ್ತಿತ್ವಕ್ಕಾಗಿ ಭಾರೀ ಸಂಘರ್ಷವೇರ್ಪಡುವ ಎಲ್ಲ ಸಾಧ್ಯತೆಗಳಿವೆ.

2015ರಲ್ಲಿ ನಾರ್ವೆ ದೇಶದ ನಿರಾಶ್ರಿತರ ಕೌನ್ಸಿಲ್‌ನ ಮುಖ್ಯಸ್ಥೆ ಹಾಗೂ ವಿಶ್ವಸಂಸ್ಥೆಯ ಅಧಿಕಾರಿಯಾಗಿದ್ದ ಜೆನ್ ಈಜ್‌ಲ್ಯಾಂಡ್‌ರ ಪ್ರಕಾರ, ನಿರಾಶ್ರಿತರು ಸಾಮಾನ್ಯ ಅವ್ಯವಸ್ಥೆಯ ಬಲಿಪಶುಗಳು, ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸರಕಾರಗಳ ವೈಫಲ್ಯದಿಂದ ಉದ್ಭವಿಸಿರುವ ಪರಿಸ್ಥಿತಿಯ ಕೈಗೊಂಬೆಗಳು ಈ ನಿರಾಶ್ರಿತರಾಗಿದ್ದಾರೆ.

ಶಿರಡಿ ಎಕ್ಸ್‌ಪ್ರೆಸ್ ರೈಲಿನಲ್ಲಿ ದರೋಡೆ; ಪ್ರಯಾಣಿಕರ 25 ಲಕ್ಷ ಮೌಲ್ಯದ ವಸ್ತುಗಳ ಲೂಟಿ

ಬೀದರ್: ಕಾಕಿನಾಡ ಪೋರ್ಟ್–ಸಿಕಂದರಾಬಾದ್–ಶಿರಡಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಗುರುವಾರ ತಡರಾತ್ರಿ ದರೋಡೆ ನಡೆದಿದ್ದು, ಪ್ರಯಾಣಿಕರ ರೂ.25 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳನ್ನು ದೋಚಿರುವ ಘಟನೆ ನಡೆದಿದೆ. ಇದನ್ನು ಖಂಡಿಸಿ ಪ್ರಯಾಣಿಕರು ಶುಕ್ರವಾರ ಮುಂಜಾನೆ ಬೀದರ್ ರೈಲು ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು. ಗುರುವಾರ ತಡರಾತ್ರಿ ಎರಡು ಗಂಟೆ ಸುಮಾರಿಗೆ ಮಹಾರಾಷ್ಟ್ರದ ಪರಳಿ ರೈಲು ನಿಲ್ದಾಣದ ಸಮೀಪ ರೈಲಿನ ಮೂರು ಹವಾನಿಯಂತ್ರಿತ ಬೋಗಿಗಳಿಂದ 30ಕ್ಕೂ ಹೆಚ್ಚು ಪ್ರಯಾಣಿಕರ ಬ್ಯಾಗುಗಳಲ್ಲಿದ್ದ 25 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳನ್ನು ದರೋಡೆ ಮಾಡಲಾಗಿದೆ. ಪ್ರಯಾಣಿಕರ ಬ್ಯಾಗುಗಳಲ್ಲಿ ಚಿನ್ನಾಭರಣ, ಹಣ, ಬೆಲೆಬಾಳುವ ವಸ್ತುಗಳು, ಆಧಾರ್ ಕಾರ್ಡ್, ಪಾನ್ ಕಾರ್ಡ್, ಬ್ಯಾಂಕ್ ಎಟಿಎಂ, ಮಧುಮೇಹ ಸೇರಿದಂತೆ ಇತರೆ ಕಾಯಿಲೆಗಳ ಮಾತ್ರೆಗಳು ಇದ್ದವು ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಬ್ಯಾಗುಗಳನ್ನು ದೋಚಿದ ವಿಷಯ ತಿಳಿದ ಪ್ರಯಾಣಿಕರು ಮುಂಜಾನೆ 5.30ರ ಸುಮಾರಿಗೆ ರೈಲು ಬೀದರ್ ರೈಲು ನಿಲ್ದಾಣ ತಲುಪುತ್ತಿದ್ದಂತೆ ಕೆಳಗಿಳಿದು ಪ್ರತಿಭಟನೆ ನಡೆಸಿದರು. ರೈಲ್ವೆ ಪೊಲೀಸರ ನಿರ್ಲಕ್ಷ್ಯದ ವಿರುದ್ಧ ಘೋಷಣೆಗಳನ್ನು ಕೂಗಿದರು. ವಸ್ತುಗಳನ್ನು ಹುಡುಕಿಕೊಡುವಂತೆ ಬಿಗಿ ಪಟ್ಟು ಹಿಡಿದರು. ಪ್ರಕರಣ ದಾಖಲಿಸಿಕೊಂಡು ವಸ್ತುಗಳನ್ನು ಪತ್ತೆ ಹಚ್ಚಿ ವಾಪಸ್ ಕೊಡಿಸುವಂತೆ ಆಗ್ರಹಿಸಿದರು. ಆದರೆ, ಸ್ಥಳೀಯ ರೈಲ್ವೆ ಪೊಲೀಸರು ನಿರಾಕರಿಸಿದರು. ಲಿಖಿತ ರೂಪದಲ್ಲಿ ನಿಮ್ಮ ದೂರು ಬರೆದು ಕೊಡಿ, ನಮ್ಮ ಸಿಬ್ಬಂದಿ ಸಿಕಂದರಾಬಾದ್ ರೈಲ್ವೆ ಪೊಲೀಸ್ ಠಾಣೆಗೆ ಅದನ್ನು ತಲುಪಿಸುವರು ಎಂದು ಹೇಳಿದಾಗ ಪ್ರಯಾಣಿಕರು ಸಮ್ಮತಿ ಸೂಚಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಇದರಿಂದ ರೈಲು ಸಂಚಾರ ಕೆಲ ಸಮಯ ವಿಳಂಬವಾಯಿತು.

ಯಡಿಯೂರಪ್ಪ ಬಂಧನ ಬೇಡ

ಮಧ್ಯಂತರ ಆದೇಶ ವಿಸ್ತರಿಸಿದ ಹೈಕೋರ್ಟ್



ಬೆಂಗಳೂರು, ಜು.26– ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗೆ ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ ಎಂಬ ಈ ಹಿಂದಿನ ಮಧ್ಯಂತರ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.

ಪ್ರಕರಣ ರದ್ದು ಕೋರಿ ಯಡಿಯೂರಪ್ಪ ಅವರು ಸಲ್ಲಿಸಿರುವ ಅರ್ಜಿಯನ್ನು, ಶಾಸಕರು, ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು. ಜ.29ರಿಂದ ಹೈಕೋರ್ಟ್‌ನ ಜನಪ್ರತಿನಿಧಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣಾ ನ್ಯಾಯಪೀಠದ ರೋಸ್ಟರ್ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ನ್ಯಾಯಮೂರ್ತಿಗಳು ಪ್ರಕರಣವನ್ನು ಮುಂದೂಡಿ ಆದೇಶಿಸಿದರು.

ನನ್ನ ಮಗಳ ಮೇಲೆ ಅತ್ಯಾಚಾರ ನಡೆದಿದೆ, ನನಗೆ ನ್ಯಾಯ ಕೊಡಿಸಿ ಎಂದು ಯಡಿಯೂರಪ್ಪ ಬಳಿ ಹೋಗಿದ್ದ 53 ವರ್ಷದ ಮಹಿಳೆಯೊಬ್ಬರು; ಯಡಿಯೂರಪ್ಪ ಅವರು ನನ್ನ ಮಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ 2024ರ ಮಾರ್ಚ್ 14ರಂದು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಇದರನ್ವಯ ಪೊಲೀಸರು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012ರ ಕಲಂ 8 ಮತ್ತು ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 354(ಎ) ಅಡಿಯಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಎಫ್‌ಐಆರ್ ದಾಖಲಿಸಿದ್ದರು.

ಪಾದಯಾತ್ರೆ ಹೊರಟರೆ ಪ್ರತಿದಿನ ಒಂದೊಂದು ಹಗರಣ ಬಯಲು

ಬೆಂಗಳೂರು, ಜು.26(ಕೆಎಂಶಿ)– ಬಿಜೆಪಿ ಹಗರಣಗಳ ಸರದಾರರು, ಪಾದಯಾತ್ರೆ ಮಾಡುವ ಮೂಲಕ ತಾವೇ ತೋಡಿಕೊಂಡಿರುವ ಬಾವಿಗೆ ಬೀಳಲು ಹೋಗುತ್ತಿದ್ದಾರೆ. ಇದು ಆತ್ಮಹತ್ಯೆ ಪ್ರಯತ್ನವಾಗಿದೆ ಎಂದು ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಪಾದಯಾತ್ರೆಯ ಒಂದೊಂದು ದಿನವೂ ಅವರ ಒಂದೊಂದು ಹಗರಣ ಬಯಲು ಮಾಡುತ್ತೇವೆ. ಪಾದಯಾತ್ರೆ ಮಾಡುವ ಮೂಲಕ ಅವರ ಅಕ್ರಮಗಳನ್ನು ಬಯಲು ಮಾಡಲು ನಮಗೆ ಸದವಕಾಶ ಒದಗಿಸಿಕೊಟ್ಟಿದ್ದಾರೆ ಎಂದರು.

ಬಿಜೆಪಿ ಕಾಲದ ಅಕ್ರಮಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗಿಯಾಗಿದ್ದಾರೋ, ಮಂತ್ರಿಗಳು ಭಾಗಿಯಾಗಿದ್ದರೋ, ಅಧಿಕಾರಿಗಳು ಭಾಗಿಯಾಗಿದ್ದಾರೋ ಎಂದು ಉತ್ತರ ನೀಡಲಿ. ಅಕ್ರಮಗಳ ಕುರಿತು ಯಾವುದೇ ಮಾಧ್ಯಮ ಅಥವಾ ಸಾರ್ವಜನಿಕ ವೇದಿಕೆಗಳಲ್ಲಿ ಬಹಿರಂಗ ಚರ್ಚೆಗೆ ಬರಲಿ. ಎಚ್.ಡಿ.ಕುಮಾರಸ್ವಾಮಿ,

ಬಿಜೆಪಿ ವಿರುದ್ಧ ಡಿಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ



ಯಡಿಯೂರಪ್ಪ, ಜಗದೀಶ್‌ಶೆಟ್ಟರ್, ಬಸವರಾಜ ಬೊಮ್ಮಾಯಿ, ಆರ್. ಅಶೋಕ್ ಯಾರಾದರೂ ಚರ್ಚೆಗೆ ಬರಲಿ ನಾನು ಸಿದ್ಧನಿದ್ದೇನೆ ಎಂದು ಸವಾಲು ಹಾಕಿದರು.

ದೇಶಕ್ಕೆ ಪಾದಯಾತ್ರೆ ಹೋರಾಟ ಪರಿಚಯಿಸಿದ್ದೇ ಕಾಂಗ್ರೆಸ್ ಪಕ್ಷ. ದೇಶದಲ್ಲಿ ಕಾಂಗ್ರೆಸ್ ಆಡಳಿತವಿರುವ ಅತಿ ದೊಡ್ಡ ರಾಜ್ಯ ಕರ್ನಾಟಕ. ನಮ್ಮ ಸರ್ಕಾರ ಅಸ್ಥಿರಗೊಳಿಸಲು ಬಿಜೆಪಿ ಅವರು ಪ್ರಯತ್ನಿಸುತ್ತಿದ್ದಾರೆ. ಅವರು ಏನಾದರೂ ಮಾಡಲಿ, ನಾವು ನಮ್ಮದೇ ರೀತಿಯಲ್ಲಿ ಉತ್ತರ ನೀಡುತ್ತೇವೆ.

ಮುಖ್ಯಮಂತ್ರಿಗಳ ಹೆಸರಿಗೆ ಮಸಿ ಬಳಿದು ಪ್ರಚಾರ ಪಡೆಯಲು ಬಿಜೆಪಿಯವರು ಷಡ್ಯಂತ್ರ ರೂಪಿಸಿ ಪಾದಯಾತ್ರೆ ಮಾಡುತ್ತಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಧಿಕಾರಿಗಳು ಅಕ್ರಮ ಎಸಗಿದ್ದಾರೆ ಎಂದು ತಿಳಿದ ತಕ್ಷಣ, ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸುತ್ತಿದ್ದು, ಹಲವರನ್ನು ಬಂಧಿಸಿ, ಅಕ್ರಮ ವರ್ಗಾವಣೆಯಾದ ಹಣ ವಾಪಸ್ ಪಡೆದಿದ್ದೇವೆ. ಪ್ರತಿಪಕ್ಷಗಳು ಪ್ರಚಾರಕ್ಕಾಗಿ ಬೇರೆ ತನಿಖಾ ಸಂಸ್ಥೆಗಳನ್ನು ಕರೆತಂದು ನಮ್ಮವರಿಗೆ ಕಿರುಕುಳ ನೀಡುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಕಾನೂನು ಪ್ರಕಾರ ಅವರ ಪ್ರಯತ್ನ ಅವರು ಮಾಡಲಿ. ಈ ವಿಚಾರ ಚರ್ಚಿಸಲು ಸದನದಲ್ಲಿ ಅವಕಾಶ ನೀಡಿದೆವು. ಆದರೆ ಅವರು ಮುಖ್ಯಮಂತ್ರಿಗಳಿಗೆ ಉತ್ತರ ನೀಡಲು ಅವಕಾಶವನ್ನೇ ನೀಡಲಿಲ್ಲ. ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸಿ.ಟಿ ರವಿ ಸೇರಿದಂತೆ ಹಲವು ಬಿಜೆಪಿ ನಾಯಕರು ಮಾತನಾಡುವಾಗ ತಾಳ್ಮೆಯಿಂದ ಕೇಳಿಸಿಕೊಂಡಿದ್ದೇವೆ ಎಂದರು.

ನೀಟ್–ಯುಜಿ ಅಂತಿಮ ಫಲಿತಾಂಶ ಪ್ರಕಟ; ಟಾಪರ್‌ಗಳ ಸಂಖ್ಯೆ 61ಕ್ಕೆ ಇಳಿಕೆ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(NTA) ವಿವಾದಿತ ವೈದ್ಯಕೀಯ ಪ್ರವೇಶ ಪರೀಕ್ಷೆ NEET-UGಯ ಅಂತಿಮ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡು ಸರಿಯಾದ ಉತ್ತರಗಳಿವೆ ಎಂದು ಎನ್‌ಟಿಎ ಹೇಳಿದ್ದ ಭೌತಶಾಸ್ತ್ರದ ಪ್ರಶ್ನೆಯ ಅಂಕಗಳನ್ನು ಗಣನೆಗೆ ತೆಗೆದುಕೊಂಡು ಸುಪ್ರೀಂಕೋರ್ಟ್ ನಿರ್ದೇಶನದ ನಂತರ ಫಲಿತಾಂಶ ಪ್ರಕಟಿಸಲಾಗಿದೆ.

ಮರು ಪರಿಷ್ಕೃತ ಸ್ಕೋರ್ ಕಾರ್ಡ್‌ಗಳು ಇದೀಗ ಲೈವ್ ಆಗಿವೆ ಎಂದು ಎನ್‌ಟಿಎ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಹಿಂದೆ ಟಾಪರ್ ಎಂದು ಘೋಷಿಸಲ್ಪಟ್ಟ 67 ಅಭ್ಯರ್ಥಿಗಳ ಪೈಕಿ 44 ಅಭ್ಯರ್ಥಿಗಳು ಆ ನಿರ್ದಿಷ್ಟ ಭೌತಶಾಸ್ತ್ರದ ಪ್ರಶ್ನೆಗೆ ನೀಡಲಾದ ಅಂಕಗಳಿಂದಾಗಿ ಪೂರ್ಣ ಅಂಕಗಳನ್ನು ಗಳಿಸಿದ್ದಾರೆ.

ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಸಮಯದ ನಷ್ಟವನ್ನು ಸರಿದೂಗಿಸಲು ಆರು ಅಭ್ಯರ್ಥಿಗಳಿಗೆ ನೀಡಲಾದ ಗ್ರೇಸ್ ಅಂಕಗಳನ್ನು ಏಜೆನ್ಸಿ ಹಿಂತೆಗೆದುಕೊಳ್ಳುವುದರೊಂದಿಗೆ ಟಾಪರ್‌ಗಳ ಸಂಖ್ಯೆಯನ್ನು 61ಕ್ಕೆ ಇಳಿಸಲಾಗಿದೆ.

ಮೇ 5 ರಂದು ನಡೆದಿದ್ದ ವಿವಾದಿತ ನೀಟ್ ಯುಜಿ ಪರೀಕ್ಷೆಯನ್ನು ರದ್ದುಗೊಳಿಸಬೇಕು ಮತ್ತು ಮರು–ಪರೀಕ್ಷೆ ನಡೆಸಬೇಕು ಎಂದು ಕೋರಿ ಸಲ್ಲಿಸಲಾದ ಅರ್ಜಿಗಳನ್ನು ಸುಪ್ರೀಂಕೋರ್ಟ್ ಕಳೆದ ಮಂಗಳವಾರ ವಜಾಗೊಳಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬುದಕ್ಕೆ ಯಾವುದೇ ಸೂಕ್ತ ದಾಖಲೆಗಳಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. NEET-UG ಪರೀಕ್ಷೆಯ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸುತ್ತಿದ್ದು, ಇದುವರೆಗೆ ಆರು ಎಫ್‌ಐಆರ್‌ಗಳನ್ನು ದಾಖಲಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕಾರ್ಗಿಲ್ ವಿಜಯ ದಿವಸ್: ಲಡಾಕ್‌ನ ದ್ರಾಸ್‌ನಲ್ಲಿ ಯೋಧರ ಸ್ಮಾರಕಕ್ಕೆ ಪ್ರಧಾನಿ ಮೋದಿ ನಮನ


ಯೋಧರ ಸ್ಮಾರಕಕ್ಕೆ ನಮನ ಸಲ್ಲಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ.

ದ್ರಾಸ್ ಕಾರ್ಗಿಲ್ ಯುದ್ಧ ಸ್ಮಾರಕ (ಲಡಾಕ್), ಜು. 26– ಕಾರ್ಗಿಲ್ ವಿಜಯ್ ದಿವಸದ 25ನೇ ವಾರ್ಷಿಕೋತ್ಸವದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಲಡಾಖ್‌ಗೆ ಭೇಟಿ ನೀಡಿ ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಹೋರಾಡಿ ವೀರಮರಣವನ್ನಪ್ಪಿದ ಯೋಧರ ಸ್ಮಾರಕಕ್ಕೆ ಗೌರವ ನಮನ ಸಲ್ಲಿಸಿದರು.

ಪ್ರಧಾನಿ ಭೇಟಿಗೂ ಮುನ್ನ ದ್ರಾಸ್‌ನಲ್ಲಿರುವ ಕಾರ್ಗಿಲ್ ಯುದ್ಧ ಸ್ಮಾರಕದಲ್ಲಿ ಭದ್ರತಾ ಉದ್ದೇಶಗಳಿಗೆ ಅನುಗುಣವಾಗಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿತ್ತು.


ನಂತರ ಅಲ್ಲಿರುವ ಮ್ಯೂಸಿಯಂಗೆ ಭೇಟಿ ನೀಡಿದ ಪ್ರಧಾನಮಂತ್ರಿಗಳು ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಬಳಸಿರುವ ಮಿಲಿಟರಿ ಉಪಕರಣಗಳು, ಭಾರತೀಯ ಸೇನೆಯ ಯುದ್ಧ ಸಲಕರಣೆಗಳು, ಹುತಾತ್ಮ ಯೋಧರ ಛಾಯಾಚಿತ್ರಗಳನ್ನು ವೀಕ್ಷಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಇತರ ಗಣ್ಯರು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಸೈನಿಕರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಕಾರ್ಗಿಲ್ ವಿಜಯ್ ದಿವಸ್ ನಮ್ಮ ಸಶಸ್ತ್ರ ಪಡೆಗಳ ಅದಮ್ಯ ಧೈರ್ಯ ಮತ್ತು ಅಸಾಧಾರಣ ಶೌರ್ಯಕ್ಕೆ ಗೌರವ ಸಲ್ಲಿಸಲು ರಾಷ್ಟ್ರಕ್ಕೆ ಒಂದು ಸಂದರ್ಭವಾಗಿದೆ. 1999ರಲ್ಲಿ ಕಾರ್ಗಿಲ್ ಶಿಖರಗಳಲ್ಲಿ ಭಾರತ ಮಾತೆಯನ್ನು ರಕ್ಷಿಸುವ ಸಂದರ್ಭದಲ್ಲಿ ಅತ್ಯುನ್ನತ ತ್ಯಾಗ ಮಾಡಿದ ಪ್ರತಿಯೊಬ್ಬ ಸೈನಿಕನಿಗೆ ನಾನು ಗೌರವ ಸಲ್ಲಿಸುತ್ತೇನೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾರ್ಗಿಲ್ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದ ನಂತರ, ಪ್ರಧಾನಿ ಮೋದಿ ಅವರು ಲಡಾಖ್‌ನ ಶಿಂಕುನ್ ಲಾ ಸುರಂಗ ಯೋಜನೆಯ ಕಾರ್ಯಕ್ರಮವನ್ನು ವರ್ಚುವಲ್ ಮೂಲಕ ನಡೆಸಿಕೊಟ್ಟರು.

ಶಿಂಕುನ್ ಲಾ ಸುರಂಗ ಯೋಜನೆಯು 4.1 ಕಿಮೀ ಉದ್ದದ ಅವಳಿ–ಟ್ಯೂಬ್ ಸುರಂಗವನ್ನು ಒಳಗೊಂಡಿದೆ, ಇದು ಲೇಹ್‌ಗೆ ಎಲ್ಲಾ ಹವಾಮಾನದಲ್ಲಿ ಸಂಪರ್ಕವನ್ನು ಒದಗಿಸಲು ನಿಮು – ಪಾಡುಮ್ – ದರ್ಚಾ ರಸ್ತೆಯಲ್ಲಿ ಸುಮಾರು 15,800 ಅಡಿ ಎತ್ತರದಲ್ಲಿ ನಿರ್ಮಿಸಲಾಗುತ್ತಿದೆ.

ಇದರ ಕಾಮಗಾರಿ ಒಮ್ಮೆ ಪೂರ್ಣಗೊಂಡರೆ ವಿಶ್ವದ ಅತಿ ಎತ್ತರದ ಸುರಂಗವಾಗಲಿದೆ. ಶಿಂಕುನ್ ಲಾ ಸುರಂಗವು ದೇಶದ ಸಶಸ್ತ್ರ ಪಡೆಗಳು ಮತ್ತು ಸಲಕರಣೆಗಳ ತ್ವರಿತ ಮತ್ತು ಪರಿಣಾಮಕಾರಿ ಕ್ರಮವನ್ನು ಜಾರಿಗೊಳಿಸುವುದು ಮಾತ್ರವಲ್ಲದೆ ಲಡಾಖ್‌ನಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ.



ಪಾದಯಾತ್ರೆ ಮೂಲಕ ಕಾರ್ಗಿಲ್ ಯುದ್ಧದ ಸಂದೇಶ


ಮೈಸೂರು ಎಕ್ಸ್ ಸರ್ವಿಸ್‌ಮೆನ್ ಮೂವಮೆಂಟ್ ವತಿಯಿಂದ ಪಾದಯಾತ್ರೆ ಮೂಲಕ ಕಾರ್ಗಿಲ್ ಯುದ್ದದ ಸಂದೇಶ ಸಾರಿ, ಹುತಾತ್ಮರಾದ ಕಾರ್ಗಿಲ್ ಯೋಧರಿಗೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರತಿಮೆ ಮುಂಭಾಗ ಗೌರವ ಸಲ್ಲಿಸಲಾಯಿತು.

ಮೈಸೂರು, ಜು.26(ಜಿಎ)–ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಮೈಸೂರು ಎಕ್ಸ್ ಸರ್ವಿಸ್‌ಮೆನ್ ಮೂವಮೆಂಟ್ ವತಿಯಿಂದ ಪಾದಯಾತ್ರೆ ಮೂಲಕ ಕಾರ್ಗಿಲ್ ಯುದ್ದದ ಸಂದೇಶ ಸಾರಲಾಯಿತು.

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಕಾರ್ಗಿಲ್‌ನಲ್ಲಿ ಹುತಾತ್ಮರಾದ ಕ್ಯಾಪ್ಟನ್ ವಿಕ್ರಂ ಬಾತ್ರ, ಲೆಫ್ಟಿನೆಂಟ್ ಮನೋಜ್ ಕುಮಾರ್ ಪಾಂಡೆ ಮತ್ತು ಕ್ಯಾಪ್ಟನ್ ಸೌರಭ್ ಕಾಲಿಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಿದರು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಪಾದಯಾತ್ರೆ ದೊಡ್ಡ ಗಡಿಯಾರ, ಗಾಂಧಿ ವೃತ್ತ, ಡಿ.ದೇವರಾಜ ಅರಸ್ ರಸ್ತೆ ಮೂಲಕ ಮೆಟ್ರೋಪೋಲ್ ವೃತ್ತದಲ್ಲಿರುವ ಫೀಲ್ಡ್ ಮಾರ್ಷಲ್ ಕೆಎಂ ಕಾರ್ಯಪ್ಪ ಪ್ರತಿಮೆ ಬಳಿಗೆ ತಲುಪಿತು. ಪಾದಯಾತ್ರೆಯಲ್ಲಿ ಮೈಸೂರು ಎಕ್ಸ್ ಸರ್ವಿಸ್‌ಮೆನ್ ಮೂವಮೆಂಟ್‌ನ 70ಕ್ಕಿಂತಲೂ ಹೆಚ್ಚು ಮಾಜಿ ಸೈನಿಕರು, ನಗರದ ವಿವಿಧ ಕಾಲೇಜಿನ 250ಕ್ಕೂ ಹೆಚ್ಚು ಎನ್‌ಸಿಸಿ ವಿದ್ಯಾರ್ಥಿಗಳು, 60ಕ್ಕಿಂತಲೂ ಹೆಚ್ಚು ಸೈನಿಕ್ ಅಕಾಡೆಮಿಯ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪಾಲ್ಗೊಂಡು ಭಾರತ್ ಮಾತಾಕೀ ಜೈ ಎಂಬ ಘೋಷಣೆ ಕೂಗಿ ದೇಶ ಭಕ್ತಿ ಮೆರೆದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರತಿಮೆ ಮುಂಭಾಗ ಹುತಾತ್ಮರಾದ ಕಾರ್ಗಿಲ್ ಯೋಧರಿಗೆ ಮುಖ್ಯ ಅತಿಥಿಗಳಾದ ನಿವೃತ್ತ ಸೇನಾಧಿಕಾರಿ ಕರ್ನಲ್ ಮಹೇಂದ್ರ ಸಿಂಗ್‌ರಿಂದ ರಿತ್ ಪರೇಡ್ ಮಾಡಿಸಲಾಯಿತು. ಈ ವೇಳೆ ಪಾಲಿಕೆ ಉಪ ಆಯುಕ್ತ ಮಂಜುನಾಥ್ ರೆಡ್ಡಿ, ಮಣಿಪಾಲ ಆಸ್ಪತ್ರೆಯ ವೈದ್ಯ ಡಾ. ಸುಮಿತ್, ವಿವೇಕಾನಂದ, ಶ್ರೀಧರ್, ಕಿಶೋರ್ ಕದಂ, ವಿಶ್ವನಾಥ್, ಲೋಕೇಶ್, ಧನಂಜಯ, ಸುರೇಶ್, ರಾಮ ನಾರಾಯಣ, ಮೋಹನ್, ಮಹದೇವ್ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಸೈನಿಕರಿಗೆ ಶೀಘ್ರದಲ್ಲೇ ಮುಡಾದಿಂದ ನಿವೇಶನ

● ಮುಡಾ ಅಧ್ಯಕ್ಷ ಕೆ.ಮರಿಗೌಡ ಭರವಸೆ ● ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರತಿಮೆಗೆ ಪುಷ್ಪಾರ್ಚನೆ


ಕಾರ್ಗಿಲ್ ವಿಜಯೋತ್ಸವ ರಜತ ಮಹೋತ್ಸವದ ಅಂಗವಾಗಿ ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರು ಮೈಸೂರಿನ ಮೆಟ್ರೋಪೋಲ್ ವೃತ್ತದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿದರು.

ಮೈಸೂರು, ಜು.26(ಜಿಎ)–ಮುಡಾದಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಮಾಜಿ ಸೈನಿಕರಿಗೆ ಶೀಘ್ರದಲ್ಲಿ ನಿವೇಶನ ಮಂಜೂರು ಮಾಡಲಾಗುವುದು ಎಂದು ಮುಡಾ ಅಧ್ಯಕ್ಷ ಕೆ.ಮರಿಗೌಡ ಮಾಜಿ ಸೈನಿಕರಿಗೆ ಭರವಸೆ ನೀಡಿದರು.

ಕಾರ್ಗಿಲ್ ವಿಜಯೋತ್ಸವದ ರಜತ ಮಹೋತ್ಸವದ ಅಂಗವಾಗಿ ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರು ನಗರದ ಮೆಟ್ರೋಪೋಲ್ ವೃತ್ತದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರತಿಮೆ ಮುಂಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆ.ಎಂ. ಕಾರ್ಯಪ್ಪನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಸಿಹಿ ವಿತರಿಸಿ ಮಾತನಾಡಿದರು.

ತಮ್ಮ ಪ್ರಾಣವನ್ನು ಲೆಕ್ಕಿಸದೆ ಪ್ರಾಣತ್ಯಾಗ ಮಾಡಿರುವ ವೀರ ಯೋಧರಿಗೆ ಗೌರವ ಸಲ್ಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ದೇಶದ ಸಮಗ್ರತೆ ಮತ್ತು ಏಕತೆಗಾಗಿ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದ ಅವರು, ಮುಡಾದಲ್ಲಿ ನಿವೇಶನ ಪಡೆಯಲು ಸಾಕಷ್ಟು ಮಾಜಿ ಸೈನಿಕರು ಅರ್ಜಿ ಸಲ್ಲಿಸಿದ್ದಾರೆ. ಅವರಿಗೆ ಹೆಚ್ ಕ್ಯಾಟಗರಿಯಲ್ಲಿ ನಿವೇಶನ ಮಂಜೂರು ಮಾಡಲು ಪಟ್ಟಿ ಸಿದ್ದಪಡಿಸಲಾಗಿದೆ. ಶೀಘ್ರದಲ್ಲಿಯೇ ಮಂಜೂರು ಮಾಡಲಾಗುತ್ತದೆ ಎಂದರು. ಈ ವೇಳೆ ಮೈಸೂರು ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ನಿರ್ಮಾಣವಾಗುತ್ತಿರುವ ಯುದ್ಧ ಸ್ಮಾರಕಕ್ಕೆ ಸಹಕಾರ ನೀಡುವಂತೆ ಮಾಜಿ ಸೈನಿಕರು ಮಾಡಿದ ಮನವಿಗೆ ಸ್ಪಂದಿಸಿದ ಅವರು, ಮುಡಾದಿಂದ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಸಂಸ್ಥಾಪಕ ಪಿ.ಕೆ.ಬಿದ್ದಪ್ಪ, ಉಪಾಧ್ಯಕ್ಷ ನರಸೇಗೌಡ, ಎಸ್.ಆರ್.ರವಿಕುಮಾರ್, ಹೆಚ್.ಎಸ್. ಸುರೇಶ್, ಬಿ.ಎಂ.ಗೋಪಾಲ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದರು.

ಕಾರ್ಗಿಲ್ ದಿವಸ್ ರಜತೋತ್ಸವ ಆಚರಣೆ


ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರದ ವತಿಯಿಂದ ಕಾರ್ಗಿಲ್ ದಿವಸ್ ರಜತೋತ್ಸವ ಸಂದರ್ಭದಲ್ಲಿ ಪರಮವೀರ ಚಕ್ರ ಪ್ರಶಸ್ತಿ ಪಡೆದ ವೀರಯೋಧ ವಿಕ್ರಂ ಬಾತ್ರಾ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಮೈಸೂರು, ಜು. 26– ಮೈಸೂರಿನ ರಾಮಕೃಷ್ಣ ನಗರದ ರಾಮಕೃಷ್ಣ ವಿದ್ಯಾಕೇಂದ್ರದ ವತಿಯಿಂದ ಕಾರ್ಗಿಲ್ ದಿವಸ್ ರಜತೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಈ ವೇಳೆ ದೇಶಕ್ಕಾಗಿ ಪ್ರಾಣತೆತ್ತ ಮರಣೋತ್ತರ ಪರಮವೀರ ಚಕ್ರ ಪ್ರಶಸ್ತಿ ಪಡೆದ ವೀರಯೋಧ ವಿಕ್ರಂ ಬಾತ್ರಾ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರೊ.ಜಿ.ಚಂದ್ರಶೇಖರ್, ಕಾರ್ಗಿಲ್ ಪ್ರದೇಶದ ಭೌಗೋಳಿಕ ಹಿನ್ನೆಲೆ ಹಾಗೂ ದೇಶಕ್ಕಾಗಿ ಪ್ರಾಣತೆತ್ತ ವೀರಯೋಧ ವಿಕ್ರಂ ಬಾತ್ರಾ ಅವರ ವೀರ ಮರಣದ ಬಗ್ಗೆ ತಿಳಿಸಿಕೊಟ್ಟರು. ಇಂಡಿಯನ್ ಏರ್ ಫೋರ್ಸ್‌ನ ಸೀನಿಯರ್ ನಾನ್ ಕಮೀಷನ್ಡ್ ಆಫೀಸರ್ ಆರ್. ಶ್ವೇತಾದ್ರಿ ಮಾತನಾಡಿ, ಪ್ರತಿಯೊಬ್ಬರೂ ವಿದ್ಯಾರ್ಥಿ ದೆಸೆಯಿಂದಲೇ ದೇಶಭಕ್ತಿಯನ್ನು ಬೆಳೆಸಿಕೊಳ್ಳಬೇಕು. ಸೇನೆಗೆ ಸೇರಿ ಸೇವೆ ಸಲ್ಲಿಸಿ ದೇಶಭಕ್ತಿಯನ್ನು ಮೆರೆಯಬೇಕೆಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಎಂ.ಪಾಪೇಗೌಡ ಮಾತನಾಡಿ, ನಮ್ಮ ರಾಷ್ಟ್ರಧ್ವಜವು ಗಾಳಿಯಿಂದ ಹಾರಾಡುತ್ತಿಲ್ಲ, ಬದಲಾಗಿ ದೇಶಕ್ಕಾಗಿ ಮಡಿದ ವೀರಯೋಧರ ಉಸಿರಿಂದ ಹಾರಾಡುತ್ತಿದೆ ಎಂದು ಹೇಳಿದರು.

ಎಂ.ದೊರೆರಾಜು, ಮುಖ್ಯೋಪಾಧ್ಯಾಯಿನಿ ವೀಣಾ ಕೆ.ಹೆಗಡೆ ಇನ್ನಿತರರು ಭಾಗವಹಿಸಿದ್ದರು.

ಆಷಾಢ ಶುಕ್ರವಾರದ ಪೂಜೆಯೊಂದಿಗೆ ಕಾರ್ಗಿಲ್ ವಿಜಯ್ ದಿವಸ್ ಆಚರಣೆ


ಕಾರ್ಗಿಲ್ ವಿಜಯ್ ದಿವಸ್ ಹಾಗೂ 3ನೇ ಆಷಾಢ ಶುಕ್ರವಾರ ಅಂಗವಾಗಿ ಸದ್ವಿದ್ಯಾ ಕಾಲೇಜಿನ ವೃತ್ತದಲ್ಲಿ ಪ್ರಸಾದ ವಿತರಿಸಲಾಯಿತು.

ಮೈಸೂರು, ಜು. 26– ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಸದ್ವಿದ್ಯಾ ಕಾಲೇಜಿನ ವೃತ್ತದಲ್ಲಿ ಅಕ್ಷಯ ಗ್ರೂಪ್ಸ್ ವತಿಯಿಂದ 3ನೇ ಆಷಾಢ ಶುಕ್ರವಾರ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ಅನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು. ನಂತರ 25ನೇ ವರ್ಷದ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಭಾರತದ ಧ್ವಜ ಹಿಡಿದು ದೇಶಕ್ಕಾಗಿ ಹೋರಾಡಿ ಹುತಾತ್ಮರಿಗೆ ಸೈನಿಕರು ಅಮರ ಹೈ ಎಂಬ ಘೋಷಣೆಗಳನ್ನು ಕೂಗಿದರು.

ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಮಾತನಾಡಿ, ಕಾರ್ಗಿಲ್ ಯುದ್ಧದ ಸಮಯದಲ್ಲಿ ಭಾರತೀಯ ಸೇನೆಯ ಶಕ್ತಿ, ಸಾಮರ್ಥ್ಯವನ್ನು ಇಡೀ ವಿಶ್ವಕ್ಕೆ ಪರಿಚಯಿಸಲಾಯಿತು. ಇದರಲ್ಲಿ ಭಾರತ ಜಯಿಸುವ ಮೂಲಕ ಬಲಶಾಲಿ ರಾಷ್ಟ್ರ ಎಂಬುದನ್ನು ತೋರ್ಪಡಿಸಿದೆ ಎಂದು ಹೇಳಿದರು. ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಕ್ಷಯ ಗ್ರೂಪ್ಸ್ ಸಂಚಾಲಕರಾದ ಪರಮೇಶ್‌ಗೌಡ, ಪ್ರಮೋದ್, ಸುರೇಂದ್ರ, ಸಂದೇಶ್, ಯೋಗೇಶ್, ಅಜಯ್ ಶಾಸ್ತ್ರಿ, ಕಿರಣ್, ಕೃಷ್ಣ, ರವಿಚಂದ್ರ, ಶ್ರವಣ್, ಮಂಜುನಾಥ್, ಅಭಿ, ವಿನೋದ್, ಸಂದೀಪ್, ಶ್ರೀನಿವಾಸ್, ಹಾಗೂ ಇನ್ನಿತರರು ಹಾಜರಿದ್ದರು.

ಶ್ರೀ ಛಾಯಾದೇವಿ ಕಾಲೇಜಿನಲ್ಲಿ ಕಾರ್ಗಿಲ್ ವಿಜಯೋತ್ಸವ


ಮೈಸೂರು ರಾಜೇಂದ್ರನಗರದ ಶ್ರೀ ಛಾಯಾದೇವಿ ಕಾಲೇಜಿನಲ್ಲಿ ಶುಕ್ರವಾರ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಯಿತು. ಈ ವೇಳೆ ಪ್ರಾಂಶುಪಾಲ ಡಾ.ಅಂಥೋಣಿ ಪಾಲ್ ರಾಜ್, ಅಧ್ಯಾಪಕರು ಹಾಗೂ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು.

ಮೈಸೂರಲ್ಲಿ ಬೈಕ್ ರ್‍ಯಾಲಿ ಮೂಲಕ ಕಾರ್ಗಿಲ್ ವಿಜಯೋತ್ಸವ ಆಚರಣೆ

ಯೋಧರ ಸ್ಮರಣೆ, ಮಾಜಿ ಯೋಧರಿಗೆ ಸನ್ಮಾನ, ಗಮನ ಸೆಳೆದ ರ್‍ಯಾಲಿ


ಕಾರ್ಗಿಲ್ ವಿಜಯೋತ್ಸವದ ರಜತ ಮಹೋತ್ಸವದ ಅಂಗವಾಗಿ ಮೈಸೂರಿನಲ್ಲಿ ಬೈಕ್ ರ್‍ಯಾಲಿ ನಡೆಸಲಾಯಿತು.


ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ ಹಾಗೂ ರೋಟರಿ ಕ್ಲಬ್ ಆಫ್ ಹೆರಿಟೇಜ್ ಸಹಯೋಗದಲ್ಲಿ ನಿವೃತ್ತ ಯೋಧರಾದ ಮಾಸ್ತಿಗೌಡ, ರವಿ ಕುಶಾಲ್, ಎಂ.ಮಹದೇವ, ಸಿ.ಮಂಜುನಾಥ್ ಅವರಿಗೆ ಯೋಧ ಸನ್ಮಾನ ಮಾಡಲಾಯಿತು.

ಮೈಸೂರು, ಜು.26(ಜಿಎ)–ಕಾರ್ಗಿಲ್ ವಿಜಯೋತ್ಸವದ ರಜತ ಮಹೋತ್ಸವದ ಅಂಗವಾಗಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ ಹಾಗೂ ರೋಟರಿ ಕ್ಲಬ್ ಆಫ್ ಹೆರಿಟೇಜ್ ಸಹಯೋಗದಲ್ಲಿ ಮೈಸೂರಿನಲ್ಲಿ ಬೈಕ್ ರ್‍ಯಾಲಿ ನಡೆಸಲಾಯಿತು.

ನಗರದ ಮೆಟ್ರೋಪೋಲ್ ವೃತ್ತದ ಬಳಿಯಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಜಯೋತ್ಸವದ ಬೈಕ್ ರ್‍ಯಾಲಿಗೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿ, ತೆರೆದ ವಾಹನದಲ್ಲಿ ರ್‍ಯಾಲಿಯಲ್ಲಿ ಪಾಲ್ಗೊಂಡರು. ಮೆಟ್ರೋಪೋಲ್ ವೃತ್ತದಿಂದ ಆರಂಭವಾದ ರ್‍ಯಾಲಿಯೂ ರೈಲ್ವೆಸ್ಟೇಷನ್ ವೃತ್ತ, ಆಯುರ್ವೇದ ಆಸ್ಪತ್ರೆ ವೃತ್ತ, ಸಯ್ಯಾಜಿರಾವ್ ರಸ್ತೆ, ಪ್ರಭಾ ಥಿಯೇಟರ್, ಗಾಂಧಿ ವೃತ್ತ, ದೊಡ್ಡ ಗಡಿಯಾರ, ಜಯಚಾಮರಾಜ ಒಡೆಯರ್ ಸರ್ಕಲ್, ಹಾರ್ಡಿಂಜ್ ವೃತ್ತ, ಅರಮನೆ ಮುಂಭಾಗದ ರಸ್ತೆ, ಶ್ರೀ ಶಿವರಾತ್ರೀಶ್ವರ ಸರ್ಕಲ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್, ಏಕಲವ್ಯ ವೃತ್ತ (ಮಹಾರಾಜ ಮೈದಾನ), ಅಗ್ನಿಶಾಮಕ ಕಛೇರಿಯ ಮುಂಭಾಗ, ಶ್ಯಾಂ ಸ್ಟೂಡಿಯೋ, ಅಪೋಲೋ ಆಸ್ಪತ್ರೆ ಜಂಕ್ಷನ್, ಅಕ್ಷಯ್ ಭಂಡಾರ್, ವಿಜಯ ಬ್ಯಾಂಕ್ ವೃತ್ತ, ಸೋಮಾನಿ ಕಾಲೇಜು ಮುಂಭಾಗ, ಚಿತ್ರಬಾನು ರಸ್ತೆ, ಕುವೆಂಪು ನಗರ ಕಾಂಪ್ಲೆಕ್ಸ್‌ನಿಂದ ಉದಯರವಿ ರಸ್ತೆ ಮಾರ್ಗವಾಗಿ ರಸ್ತೆಯುದ್ದಕ್ಕೂ ನೂರಾರು ಮಾಜಿ ಸೈನಿಕರು ಮತ್ತು ಸಾರ್ವಜನಿಕರು ಜೈ ಜವಾನ್ ಜೈ ಕಿಸಾನ್, ಭಾರತ್ ಮಾತಾ ಕೀ ಜೈ, ವಂದೇ ಮಾತರಂ, ಕಾರ್ಗಿಲ್ ಯೋಧರಿಗೆ ಜೈ ಎಂದು ಘೋಷಣೆ ಗಳನ್ನು ಕೂಗುತ್ತ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದವರೆಗೆ ಸಂಚರಿಸಿ ಮೈಸೂರಿಗರಲ್ಲಿ ಕಾರ್ಗಿಲ್ ಯುದ್ಧ ದಿನಗಳನ್ನು ನೆನಪಿಸಿದರು.

ವೇದಿಕೆ ಕಾರ್ಯಕ್ರಮ: ರ್‍ಯಾಲಿ ಬಳಿಕ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಭಾರತೀಯರಿಗೆ ಕಾರ್ಗಿಲ್ ವಿಜಯ್ ದಿವಸ್ ಮರೆಯಲಾಗದಂತಹ ಅವಿಸ್ಮರಣೀಯ ದಿನ. ಸೇನೆಯಲ್ಲಿ ದುಡಿದವರನ್ನು ಭಾರತೀಯರು ಯಾವಾಗಲೂ ಸ್ಮರಿಸಬೇಕು. ದೇಶಕ್ಕಾಗಿ ಕಾರ್ಗಿಲ್ ಯುದ್ಧದಲ್ಲಿ 500ಕ್ಕೂ ಹೆಚ್ಚು ಸೈನಿಕರು ಜೀವ ತೆತ್ತಿದ್ದಾರೆ. ತಮ್ಮ ಕುಟುಂಬ, ಮನೆ ಮಕ್ಕಳು ಎಲ್ಲವನ್ನೂ ಬಿಟ್ಟು ದೇಶ ಸೇವೆಯೇ ಪರಮಶ್ರೇಷ್ಠ ಎಂದು ದುಡಿದು ನಮ್ಮೆಲ್ಲರಿಗೂ ರಕ್ಷಣೆ ನೀಡಿದ್ದಾರೆ. ನಮಗೆ ನಮ್ಮ ತಂದೆ ತಾಯಿ ಎಷ್ಟು ಮುಖ್ಯವೋ ಅಷ್ಟೇ ಭಾರತೀಯ ಸೇನೆ, ಸೈನಿಕರು ಮುಖ್ಯ ಎಂದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಕಾರ್ಗಿಲ್ ವಿಜಯ್ ದಿವಸ್ ಎನ್ನುವಂತದ್ದು ಈ ದೇಶದ ಉತ್ಸವ ಎಂದರೇ ತಪ್ಪಾಗಲಾರದು. ದೇಶಕ್ಕೆ ಆಪತ್ತು ಬಂದಂತಹ ಸಂದರ್ಭದಲ್ಲಿ ನಾವೆಲ್ಲರೂ ಸೇವೆ ಮಾಡಲು ಸನ್ನದ್ಧರಾಗುವಂತಹ ಮನೋಭಾವ ಬೆಳೆಸಿಕೊಳ್ಳಬೇಕು. ಸೈನಿಕರನ್ನು ನೆನೆಯುವಂತಹ ಇಂತಹ ಕಾರ್ಯಕ್ರಮಗಳು ಅಸಂಖ್ಯಾತ ಯೋಧರ ಮನೋಸ್ಥೈರ್ಯ ತುಂಬುವಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಭಾರತೀಯ ವಾಯುಪಡೆಯ ನಿವೃತ್ತ ಫ್ಲೈಟ್ ಲೆಫ್ಟಿನೆಂಟ್ ಫರೀಧಿ ಸಿಂಗ್ ಮಾತನಾಡಿ, ಹೆಣ್ಣು ಮನಸ್ಸು ಮಾಡಿದರೆ ಈ ದೇಶವನ್ನು ಕಟ್ಟಬಹುದು. ಅದಕ್ಕೆ ಬಹಳಷ್ಟು ಉದಾಹರಣೆ ನಮ್ಮ ಕಣ್ಣ ಮುಂದೆ ಇದೆ. ಹೀಗಾಗಿ ನಾವೆಲ್ಲರೂ ದೇಶಪ್ರೇಮ ಭಾವೈಕ್ಯತೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಜೀವನಕ್ಕಾಗಿ ನೌಕಾಪಡೆಗೆ ಸೇರಿಕೊಂಡೆ. ಅದು ಸಾಕಷ್ಟು ಜೀವನದ ಶಿಸ್ತು ಬದುಕು ವ್ಯಕ್ತಿತ್ವವನ್ನು ಕಲಿಸಿತು.ಅಲ್ಲಿಂದ ನನಗೆ ಅಗಾಧವಾದ ಜೀವನದ ಮೌಲ್ಯಗಳು ದೊರಕಿದೆ ಎಂದು ಭಾರತೀಯ ನೌಕಾಪಡೆಯ ನಿವೃತ್ತ ಅಧಿಕಾರಿ ವಿಕ್ರಂ ದತ್ತ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಾರ್ಗಿಲ್‌ನಲ್ಲಿ ಭಾಗವಹಿಸಿದ್ದಂತಹ ನಿವೃತ್ತ ಯೋಧರಾದ ಸಿ.ಮಂಜುನಾಥ್, ರವಿ ಕುಶಾಲ್, ಎಂ.ಮಹದೇವ, ಮಾಸ್ತಿ ಗೌಡ ಅವರಿಗೆ ಯೋಧ ಸನ್ಮಾನ ನೆರವೇರಿಸಲಾಯಿತು. ಈ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ.ಪಿ. ದಿವಾಕರ್, ಕಾರ್ಯದರ್ಶಿ ನಂಜುಂಡ ಸ್ವಾಮಿ, ಖಜಾಂಚಿ ನಟರಾಜು, ಉಪಾಧ್ಯಕ್ಷ ಶಿವಕುಮಾರ್, ನೀಲಕಂಠ ಶೆಟ್ಟಿ ಮತ್ತು ಮಾಜಿ ಸೈನಿಕರು ಮತ್ತು ಕುಟುಂಬದವರು ಹಾಜರಿದ್ದರು.

ಮೈಸೂರು ಮಿತ್ರ

ದೇಶ - ವಿದೇಶ

ಒಲಿಂಪಿಕ್ಸ್ ಉದ್ಘಾಟನೆಗೂ ಮುನ್ನ ಫ್ರಾನ್ಸ್ ರೈಲ್ವೆ ಮೇಲೆ ದಾಳಿ

ಪ್ಯಾರಿಸ್ (ಫ್ರಾನ್ಸ್): ಒಲಿಂಪಿಕ್ಸ್ ಆರಂಭಕ್ಕೆ ಕೆಲವೇ ಗಂಟೆ ಮುನ್ನ ಫ್ರಾನ್ಸ್ ದೇಶದಾದ್ಯಂತ ರೈಲ್ವೆ ವ್ಯವಸ್ಥೆ ಮೇಲೆ ಸಂಘಟಿತ ದಾಳಿ ನಡೆದಿದೆ. ರೈಲ್ವೆ ಇಲಾಖೆಗೆ ಸೇರಿದ ಸ್ವತ್ತುಗಳ ಮೇಲೆ ಆಯಕಟ್ಟಿನ ಸ್ಥಳಗಳಲ್ಲಿ ಬೆಂಕಿ ಇಡಲಾಗಿದೆ. ಹೀಗಾಗಿ, ಫ್ರಾನ್ಸ್ ದೇಶದ ಹೈಸ್ಪೀಡ್ ರೈಲು ಸೇವೆ ಮೇಲೆ ಗಂಭೀರ ಪರಿಣಾಮ ಉಂಟಾಗಿದ್ದು, ಸುಮಾರು 8 ಲಕ್ಷ ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಫ್ರಾನ್ಸ್ ದೇಶದಾದ್ಯಂತ ರೈಲು ಸಂಪರ್ಕ ಸೇವೆಯಲ್ಲಿ ವ್ಯತ್ಯಯ ಉಂಟಾಗಿದೆ. ರೈಲು ಪ್ರಯಾಣಕ್ಕೆ ಮುಂದಾಗಿದ್ದ ಪ್ರಯಾಣಿಕರಿಗೆ ತಮ್ಮ ಪ್ರಯಾಣ ಮುಂದೂಡುವಂತೆ ಸರ್ಕಾರ ಆದೇಶ ನೀಡಿದೆ. ಇದು ದುರುದ್ದೇಶ ಪೂರಿತ, ಪೂರ್ವ ನಿಯೋಜಿತ ಹಾಗೂ ಸಂಘಟಿತ ವಿಧ್ವಂಸಕ ಕೃತ್ಯ ಎಂದು ಫ್ರಾನ್ಸ್ ಗೃಹ ಇಲಾಖೆಯ ಪ್ರಾಥಮಿಕ ತನಿಖೆ ವೇಳೆ ಬಯಲಾಗಿದ್ದು, ಮಾಧ್ಯಮಗಳಿಗೆ ಮಾಹಿತಿ ಸಿಕ್ಕಿದೆ.



ಫ್ರಾನ್ಸ್ ದೇಶದ ರೈಲ್ವೆ ವ್ಯವಸ್ಥೆಯನ್ನು ಟಿವಿಜಿ ನೆಟ್‌ವರ್ಕ್ ಎನ್ನಲಾಗುತ್ತದೆ. ಈ ರೈಲ್ವೆ ಸಂಪರ್ಕ ವ್ಯವಸ್ಥೆಯೇ ಇದೀಗ ಅಸ್ತವ್ಯಸ್ತವಾಗಿದ್ದು, ದೇಶಾದ್ಯಂತ ಹಲವೆಡೆ ರೈಲು ಸಂಪರ್ಕ ಜಾಲಗಳಿಗೆ ಬೆಂಕಿ ಹಚ್ಚಲಾಗಿದೆ.

ಇದುವರೆಗೂ ಯಾವುದೇ ಭಯೋತ್ಪಾದಕ ಸಂಘಟನೆ ಈ ಕೃತ್ಯದ ಹೊಣೆ ಹೊತ್ತಿಲ್ಲ. ಫ್ರಾನ್ಸ್‌ನ ಭದ್ರತಾ ಪಡೆಗಳ ತನಿಖೆಯಲ್ಲೂ ಈ ಕೃತ್ಯದ ಕೈವಾಡ ಯಾರದ್ದು, ಉದ್ದೇಶ ಏನು ಎಂದು ತಿಳಿದು ಬಂದಿಲ್ಲ. ಆದರೆ, ಈ ಕೃತ್ಯದ ಹಿಂದೆ ಪ್ಯಾಲಸ್ತೀನ್ ಪರ ಬೆಂಬಲಿಗರ ಕೈವಾಡ ಇರಬಹುದು ಎಂಬ ಶಂಕೆ ಕೇಳಿ ಬಂದಿದೆ.

ಗುಜರಾತ್‌ನಲ್ಲಿರುವ ಪಾಕ್ ನಿರಾಶ್ರಿತ ಮಹಿಳೆಗೆ ಪಾನ್ ಕಾರ್ಡ್

ನವದೆಹಲಿ: ಗುಜರಾತ್‌ನಲ್ಲಿ ವಾಸವಿರುವ ಪಾಕಿಸ್ತಾನದ ನಿರಾಶ್ರಿತೆಗೆ ಪಾನ್ ಕಾರ್ಡ್ ನೀಡಲಾಗಿರುವ ಪ್ರಕರಣ ಪತ್ತೆಯಾಗಿದೆ. ಅಲ್ಲಿನ ಸಹರ್ ನಗರದಲ್ಲಿ ವಾಸವಿರುವ ಪಾಕಿಸ್ತಾನ ಮೂಲದ ನಿರಾಶ್ರಿತರ ಕುಟುಂಬದ ಮಹಿಳೆಗೆ ಪಾನ್ ಕಾರ್ಡ್ ನೀಡಲಾಗಿದೆ ಎಂದು ರಾಜ್ಯ ಆರೋಗ್ಯ ಇಲಾಖೆ ಹೇಳಿದೆ.



ಆರೋಗ್ಯ ಇಲಾಖೆಯ ತನಿಖೆಯಲ್ಲಿ ಈ ಪ್ರಕರಣ ಬಯಲಾಗಿದ್ದು, ಭೂರಿಬೆನ್ ಠಾಕೋರ್ (ಅಲಿಯಾಸ್ ಭೂರಿ ಶಾಂಡೋ). ಪಾಕ್ ನಿರಾಶ್ರಿತ ಕುಟುಂಬಕ್ಕೆ ಆಯುಷ್ಮಾನ್ ಕಾರ್ಡ್ ನೀಡಿರುವುದರ ಬಗ್ಗೆಯೂ ತನಿಖೆ ನಡೆಯಲಿದೆ.

ದೀರ್ಘಾವಧಿ ವೀಸಾದಲ್ಲಿರುವ ಪಾಕಿಸ್ತಾನಿ ಪ್ರಜೆಗಳಿಗೆ ಈ ಹಿಂದೆ ಪತ್ತೆಯಾದ ಪಡಿತರ ಚೀಟಿ, ಆಧಾರ್ ಕಾರ್ಡ್, ಆದಾಯದ ಪುರಾವೆ ಮತ್ತು ಆಯುಷ್ಮಾನ್ ಕಾರ್ಡ್ ಜೊತೆಗೆ ಇದೀಗ ಪ್ಯಾನ್ ಕಾರ್ಡ್ ಸಮಸ್ಯೆ ತಲೆದೋರಿದೆ.

ದೀರ್ಘಾವಧಿಯ ವೀಸಾದಲ್ಲಿ ವಾಸಿಸುತ್ತಿರುವ ಪಾಕಿಸ್ತಾನಿ ಕುಟುಂಬವು 2021 ರಲ್ಲಿ ಪಡಿತರ ಚೀಟಿಯನ್ನು ಹೊಂದಿತ್ತು ಎಂದು ಆರೋಗ್ಯ ಇಲಾಖೆಯ ತನಿಖೆಯಿಂದ ತಿಳಿದುಬಂದಿದೆ. ಪಾಕಿಸ್ತಾನಿ ನಿರಾಶ್ರಿತರ ಹೆಸರಿನಲ್ಲಿ ಪಾನ್ ಕಾರ್ಡ್ ನೀಡಿರುವುದು ಸಹ ಪತ್ತೆಯಾಗಿದೆ. ಮೆಹಸಾನ ಮಮ್ಮಲದಾರ ಕಛೇರಿಯು ಕುಟುಂಬಕ್ಕೆ ಪಡಿತರ ಚೀಟಿಯನ್ನು ನೀಡಿದ್ದು, ಅದರ ಆಧಾರದ ಮೇಲೆ ಮೆಹಸಾನ ತಾಲೂಕಾ ಅಭಿವೃದ್ಧಿ ಅಧಿಕಾರಿಯ ಕಛೇರಿಯು ಆದಾಯ ವಿವರವನ್ನು ನೀಡಿದೆ. ಆದರೆ, ಎರಡು ವರ್ಷಗಳ ಹಿಂದೆ ಚುನಾವಣಾ ಕಾರ್ಡ್‌ನ ಸಮಸ್ಯೆ ಕಾಣಿಸಿಕೊಂಡಾಗ ಪಾಕಿಸ್ತಾನಿ ಕುಟುಂಬವು ಪಡಿತರ ಚೀಟಿಯನ್ನು ಒಪ್ಪಿಸಿತು.

ಅಮೆರಿಕದಲ್ಲಿ ನಕಲಿ ಕ್ಯಾನ್ಸರ್ ಔಷಧಿ ಮಾರಾಟ; ಭಾರತೀಯ ಮೂಲದ ವ್ಯಕ್ತಿಯ ಬಂಧನ

ವಾಷಿಂಟನ್: ನಕಲಿ ಕ್ಯಾನ್ಸರ್ ಔಷಧಿಗಳ ಮಾರಾಟ ಮತ್ತು ಕಳ್ಳಸಾಗಾಣಿಕೆಯ ಆರೋಪದ ಮೇಲೆ ಬಿಹಾರ ಮೂಲದ ವ್ಯಕ್ತಿಯನ್ನು ಅಮೆರಿಕದಲ್ಲಿ ಬಂಧಿಸಿರುವುದು ಬೆಳಕಿಗೆ ಬಂದಿದೆ. ಸಂಜಯ್ ಕುಮಾರ್ (43) ಅಮೆರಿಕಕ್ಕೆ ಸಾವಿರಾರು ಡಾಲರ್ ಮೌಲ್ಯದ ನಕಲಿ ಔಷಧಗಳನ್ನು ಮಾರಾಟ ಮತ್ತು ಕಳ್ಳಸಾಗಣೆ ಮಾಡಿದ ಆರೋಪ ಹೊತ್ತಿದ್ದಾನೆ.

ಕೀಟ್ರುಡಾ ಒಂದು ಕ್ಯಾನ್ಸರ್ ಇಮ್ಯುನೊಥೆರಪಿಯಾಗಿದ್ದು, ಇದನ್ನು 19 ವಿಧದ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಇದರ ತಯಾರಿಕೆ ಮತ್ತು ವಿತರಣೆಯನ್ನು ಮೆರ್ಕ್ ಶಾರ್ಪ್ ಮತ್ತು ಡೊಹ್ಮೆ ಎಲ್‌ಎಲ್‌ಸಿ ಮೂಲಕ ಮಾತ್ರ ಮಾಡಬಹುದಾಗಿದೆ. ಅಮೆರಿಕಾದಲ್ಲಿ, Merck Sharp & Dohme LLC ಹೊರತುಪಡಿಸಿ ಯಾರೂ ಅದನ್ನು ಮಾರಾಟ ಮಾಡಲು ಅಥವಾ ತಯಾರಿಸಲು ಅನುಮತಿಯನ್ನು ಹೊಂದಿಲ್ಲ. ಈ ಸಂಬಂಧ ಸಂಜಯ್ ಅವರನ್ನು ಜೂನ್ 26 ರಂದು ಹೂಸ್ಟನ್‌ನಲ್ಲಿ ಬಂಧಿಸಲಾಗಿದೆ. ಸಂಜಯ್ ಕುಮಾರ್ ವಿರುದ್ಧ ನಕಲಿ ಕ್ಯಾನ್ಸರ್ ಔಷಧಿಗಳ ಮಾರಾಟ ಮತ್ತು ಕಳ್ಳಸಾಗಾಣಿಕೆಯ ಆರೋಪವಿದ್ದು, ತಪ್ಪಿತಸ್ಥರೆಂದು ಸಾಬೀತಾದರೆ, ಅವರು ಪ್ರತಿ ಅಪರಾಧಕ್ಕೆ 20 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ.

ರೈಲು ಬರುವ ವೇಳೆ ಹಳಿ ಮೇಲೆ ಸಿಲುಕಿದ 40 ಮಕ್ಕಳಿದ್ದ ಶಾಲಾ ಬಸ್

ನಾಗ್ಪುರ: ನಾಗ್ಪುರದ ಲೆವೆಲ್ ಕ್ರಾಸಿಂಗ್‌ನಲ್ಲಿ ರೈಲು ಬರುತ್ತಿದ್ದ ವೇಳೆ ಮಕ್ಕಳು ಪ್ರಯಾಣಿಸುತ್ತಿದ್ದ ಶಾಲಾ ಬಸ್ ರೈಲ್ವೆ ಹಳಿಗಳ ಮೇಲೆ ಸಿಲುಕಿದ್ದು, ಲೋಕೋ ಪೈಲಟ್ ಮತ್ತು ಸ್ಥಳೀಯರ ಸಮಯೋಚಿತ ಪ್ರಯತ್ನದಿಂದ 40 ವಿದ್ಯಾರ್ಥಿಗಳ ಜೀವ ಉಳಿದಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.




ಲೆವೆಲ್ ಕ್ರಾಸಿಂಗ್‌ನಲ್ಲಿ ರೆಡ್ ಸಿಗ್ನಲ್ ಇದ್ದರೂ ಶಾಲಾ ಬಸ್ ಚಾಲಕ ಬಸ್ ನಿಲ್ಲಿಸದೆ ಮುಂದೆ ಸಾಗಿದ್ದಾರೆ. ಬಸ್ ಹಳಿಗಳ ಮೇಲೆ ಇದ್ದಾಗ ಲೆವೆಲ್ ಕ್ರಾಸಿಂಗ್‌ನ ಎರಡೂ ಗೇಟ್‌ಗಳನ್ನು ಮುಚ್ಚಲಾಯಿತು. ಇದೇ ಸಮಯದಲ್ಲಿ ಮಧ್ಯ ಪ್ರದೇಶದ ಛಿಂದ್ವಾರಾದಿಂದ ನಾಗ್ಪುರದ ಇಟ್ವಾರಿಗೆ ಪ್ಯಾಸೆಂಜರ್ ರೈಲು ಹೋಗುತ್ತಿತ್ತು ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೆಲವೇ ಕ್ಷಣಗಳಲ್ಲಿ ಅಲ್ಲಿಗೆ ಆಗಮಿಸುತ್ತಿದ್ದ ರೈಲು ಚಾಲಕನಿಗೆ ರೈಲು ನಿಲ್ಲಿಸುವಂತೆ ಸೂಚಿಸಲು ಸ್ಥಳೀಯರು ಹಳಿಗಳ ಮೇಲೆ ಆಗಮಿಸಿ ಅಪಾಯದ ಬಗ್ಗೆ ಸೂಚನೆ ನೀಡಿದ್ದಾರೆ. ಇನ್ನು ಲೆವೆಲ್ ಕ್ರಾಸಿಂಗ್ ಮಧ್ಯೆ ಶಾಲಾ ಬಸ್ ಇರುವುದನ್ನು ಕಂಡ ಗೇಟ್ ಕೀಪರ್ ವಾಕಿಟಾಕಿ ಮೂಲಕ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಹಳಿಗಳ ಮೇಲೆ ಅನೇಕ ಜನರು ಜಮಾಯಿಸಿದ್ದನ್ನು ಗಮನಿಸಿದ ಲೋಕೋ ಪೈಲಟ್ ಏನೋ ಸರಿಯಿಲ್ಲ ಎಂದು ಅರಿತು ಬ್ರೇಕ್ ಹಾಕಿದ್ದಾರೆ. ಹೀಗಾಗಿ ರೈಲು ಲೆವೆಲ್ ಕ್ರಾಸಿಂಗ್ ಸಮೀಪ ಬಂದು ರೈಲು ನಿಂತಿದೆ. ನಂತರ ಹತ್ತು ನಿಮಿಷಗಳಲ್ಲಿ ಗೇಟ್ ಓಪನ್ ಮಾಡಲಾಯಿತು ಮತ್ತು ಶಾಲಾ ಬಸ್ ಸುರಕ್ಷಿತವಾಗಿ ಇನ್ನೊಂದು ಬದಿಗೆ ದಾಟಿತು ಎಂದು ಅಧಿಕಾರಿ ತಿಳಿಸಿದ್ದಾರೆ.

ವೇಶ್ಯಾವಾಟಿಕೆಗೆ ರಕ್ಷಣೆ ಕೊಡಿ ಎಂದ ವಕೀಲನಿಗೆ 10 ಸಾವಿರ ದಂಡ!

ಚೆನ್ನೈ: ವೇಶ್ಯಾವಾಟಿಕೆ ನಡೆಯುವ ಕೇಂದ್ರಗಳಿಗೆ ರಕ್ಷಣೆ ಕೋರಿ ವಕೀಲರೊಬ್ಬರು ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದರು. ವಕೀಲರ ಈ ಅರ್ಜಿ ನೋಡಿ ನ್ಯಾಯಾಧೀಶರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಘಟನೆ ತಮಿಳುನಾಡಿನ, ಕನ್ಯಾಕುಮಾರಿಯಲ್ಲಿ ಬೆಳಕಿಗೆ ಬಂದಿದೆ.



ಅರ್ಜಿದಾರನಿಗೆ 10,000 ರೂಪಾಯಿ ದಂಡ ವಿಧಿಸಿ, ಮನವಿಯನ್ನು ಮದ್ರಾಸ್ ಹೈಕೋರ್ಟ್ ವಜಾಗೊಳಿಸಿದೆ. ಮಧುರೈ ಪೀಠದ ನ್ಯಾಯಮೂರ್ತಿ ಬಿ ಪುಗಳೇಂದಿ ಅವರು ವಕೀಲನ ನೋಂದಣಿ ಪತ್ರದ ನೈಜತೆ ಮತ್ತು ಆತನ ಶಿಕ್ಷಣ ಪ್ರಮಾಣ ಪತ್ರಗಳನ್ನು ಪರಿಶೀಲಿಸುವಂತೆ ತಮಿಳುನಾಡು ಮತ್ತು ಪುದುಚೇರಿ ವಕೀಲರ ಪರಿಷತ್ತಿಗೆ ಆದೇಶವನ್ನೂ ನೀಡಿದ್ದಾರೆ. ವಾಸ್ತವವಾಗಿ, ಕನ್ಯಾಕುಮಾರಿ ನಾಗರಕೋಯಿಲ್‌ನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ವಕೀಲನೊಬ್ಬನ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಇದೀಗ ಅರ್ಜಿದಾರರು ಈ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದು, ವೇಶ್ಯಾವಾಟಿಕೆ ನಡೆಸುತ್ತಿರುವುದಕ್ಕೆ ರಕ್ಷಣೆ ಬೇಕು ಎಂದು ಕೋರ್ಟ್‌ನಲ್ಲಿ ಕೋರಿದ್ದಾರೆ.

ಬಡವರಿಗೆ ನೆರವಾಗಿ; ಅವರು ನಿಮ್ಮನ್ನು ಎಂದಿಗೂ ಮರೆಯಲ್ಲ

ಖಾಸಗಿ ವೈದ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

ಮೈಸೂರು, ಜು.26(ಎಂಕೆ)– ಶ್ರೀಮಂತರು ಖಾಸಗಿ ಆಸ್ಪತ್ರೆಗೆ ಹೋದರೆ, ಬಡವರು ಸರ್ಕಾರಿ ಆಸ್ಪತ್ರೆಗೆ ಹೋಗುತ್ತಾರೆ. ಆಕಸ್ಮಾತ್ ಬಡವರೇನಾದರೂ ಖಾಸಗಿ ಆಸ್ಪತ್ರೆಗೆ ಬಂದರೆ ಅವರಿಗೆ ಸಹಾಯ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಖಾಸಗಿ ಆಸ್ಪತ್ರೆ ವೈದ್ಯರಿಗೆ ಸಲಹೆ ನೀಡಿದರು.

ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ 'ರೋಬೋಟಿಕ್ ನೀ ಮತ್ತು ಹಿಪ್ ಜಾಯಿಂಟ್ ರೀಪ್ಲೇಸ್‌ಮೆಂಟ್ ಕೇಂದ್ರ'ವನ್ನು ರಿಮೋಟ್ ಬಟನ್ ಒತ್ತುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನಲ್ಲಿ ಪ್ರಥಮವಾಗಿ ಸ್ಥಾಪನೆಯಾಗಿರುವ ಈ ಕೇಂದ್ರ ಮೈಸೂರಿಗೆ ಮಾತ್ರವಲ್ಲಾ ಇಡೀ ರಾಜ್ಯದ ಜನತೆಗೆ ಅನುಕೂಲವಾಗುವಂತಾಗಲಿ ಎಂದು ಆಶಿಸಿದರು.

ಇತ್ತೀಚಿನ ವರ್ಷಗಳಲ್ಲಿ ಮಂಡಿ ಮತ್ತು ಹಿಪ್ ಜಾಯಿಂಟ್ ರೀಪ್ಲೇಸ್‌ಮೆಂಟ್ ಮಾಡಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸಾಮಾನ್ಯವಾಗಿ 60 ವರ್ಷದ ನಂತರ ಮಂಡಿ ನೋವು ಬರುವುದು ಸಹಜ. ಶ್ರೀಮಂತರ ಬಳಿ ಹಣವಿರುತ್ತೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಾರೆ.



ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ 'ರೋಬೋಟಿಕ್ ನೀ ಮತ್ತು ಹಿಪ್ ಜಾಯಿಂಟ್ ರೀಪ್ಲೇಸ್‌ಮೆಂಟ್ ಕೇಂದ್ರ'ವನ್ನು ರಿಮೋಟ್ ಬಟನ್ ಒತ್ತುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಆಸ್ಪತ್ರೆ ಮುಖ್ಯಸ್ಥ ಡಾ.ಗಿರೀಶ್ ಚಂದ್ರ ಮತ್ತಿತರರಿದ್ದರು.

ಆದರೆ ಬಡವರು ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಖಾಸಗಿ ಆಸ್ಪತ್ರೆಗಳಿಗೆ ಬಡವರು ಬಂದರೆ ಅವರಿಗೆ ಸಹಾಯ ಮಾಡಿ. ನೀವು ಬಡವರಿಗೆ ಸಹಾಯ ಮಾಡಿದರೆ, ಅವರು ನಿಮ್ಮನ್ನು ಎಂದಿಗೂ ಮರೆಯುವುದಿಲ್ಲ. ಅಲ್ಲದೆ ಅವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ತಿಳಿಸಿದರು.

ನಿಮ್ಮ ಬಳಿಗೆ ಬರುವೇ!: ನನಗೂ ಸ್ವಲ್ಪ ಸ್ವಲ್ಪ ಮಂಡಿ ನೋವು ಬರುತ್ತಿದೆ. ಮುಂದಿನ ಆಗಸ್ಟ್ ತಿಂಗಳಿಗೆ ನನಗೆ 77 ವರ್ಷಗಳಾಗಲಿದ್ದು, ಆಕಸ್ಮಾತ್ ನನಗೇನಾದರೂ ಜಾಯಿಂಟ್ ರೀಪ್ಲೇಸ್‌ಮೆಂಟ್ ಮಾಡಿಸಿಕೊಳ್ಳುವ ಸ್ಥಿತಿ ಬಂದರೆ ನಿಮ್ಮ ಬಳಿಯೇ ಬರುತ್ತೇನೆ ಎಂದು ತಮ್ಮದೇ ಧಾಟಿಯಲ್ಲಿ ಹೇಳುವ ಮೂಲಕ ಹಾಸ್ಯ ಚಟಾಕಿ ಹಾರಿಸಿದರು.

ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರೂ ಆದ ಮೂಳೆ ತಜ್ಞ ಡಾ.ಗಿರೀಶ್ ಚಂದ್ರ, ನಮ್ಮೂರಿನ ಪಕ್ಕದ ಕುಪ್ಪೆಗಾಲದವರು. ಅವರ ತಂದೆ ಕುಳ್ಳಯ್ಯ ಕೂಡ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿದವರು ಎಂದು ಸ್ಮರಿಸಿದರಲ್ಲದೆ ಸಮಾಜದ ಜನರ ಸೇವೆಗೆ ವೈದ್ಯರು ನೆರವಾಗಬೇಕು. ಕಷ್ಟದಲ್ಲಿ ನೆರವಾದರೆ ಯಾವಾಗಲೂ ನೆನೆಸಿಕೊಳ್ಳುತ್ತಾರೆ ಎಂದರು.

ವೈದ್ಯಕೀಯ ಕ್ಷೇತ್ರದ ವೇಗ ಹೆಚ್ಚಿದೆ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಆಧುನಿಕ ತಂತ್ರಜ್ಞಾನದ ಅವಲಂಬನೆಯಿಂದ ವೈದ್ಯಕೀಯ ಕ್ಷೇತ್ರದ ವೇಗ ಹೆಚ್ಚಾಗಿದೆ. ರೋಬೋಟಿಕ್ ತಂತ್ರಜ್ಞಾನ ಮೂಲಕ ರೋಗಿಗೆ ಯಾವುದೇ ರೀತಿಯ ನೋವಿನ ಅರಿವಾಗದಂತೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಖಂಡ ಮರಿಸ್ವಾಮಿ, ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಗಿರೀಶ್ ಚಂದ್ರ, ಡಾ.ನಿಖಿತಾ, ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಹಲವು ಗಣ್ಯರಿಂದ ಚಾಮುಂಡೇಶ್ವರಿ ದರ್ಶನ





ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಪದ್ಮಶ್ರೀ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕ, ಮೂರನೇ ಆಷಾಡ ಶುಕ್ರವಾರದಂದು ಬೆಟ್ಟಕ್ಕೆ ಭೇಟಿ ನೀಡಿ, ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದರು.

ಮೈಸೂರು, ಜು.26(ಎಂಕೆ)– ಮೂರನೇ ಆಷಾಡ ಶುಕ್ರವಾರದ ಹಿನ್ನಲೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಹಲವು ಗಣ್ಯರು ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದರು.

ಪದ್ಮಶ್ರೀ ಸಾಲುಮರದ ತಿಮ್ಮಕ್ಕ ದೇವಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ಹಾಗೆಯೇ ನಟ ದರ್ಶನ್ ಸಹೋದರ ದಿನಕರ್, ಸಹೋದರಿ ಪುತ್ರ ಚಂದನ್, ನಟ ಚಿಕ್ಕಣ್ಣ, ಎಂಎಲ್‌ಸಿ ಶರವಣ, ಸಂಸದ ಸುನೀಲ್ ಬೋಸ್ ದಂಪತಿ ಸೇರಿ ಹಲವರು ಬೆಟ್ಟಕ್ಕೆ ಭೇಟಿ ನೀಡಿ ನಾಡ ದೇವಿಯ ದರ್ಶನ ಪಡೆದರು. ಸಂಜೆ ವೇಳೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಭೇಟಿ ನೀಡಿ, ಪೂಜೆ ಸಲ್ಲಿಸಿದರು.

ನೂಕು ನುಗ್ಗಲು: ಮೊದಲ ಆಷಾಡ ಶುಕ್ರವಾರಕ್ಕಿಂತ ಭಕ್ತರ ಸಂಖ್ಯೆ ಕಡಿಮೆ ಇದ್ದಂತೆ ಕಂಡರು, ನೂಕು ನುಗ್ಗಲು ಮಾತ್ರ ಭಕ್ತರನ್ನು ಹೈರಾಣಾಗಿಸಿತು. ಅದರಲ್ಲಿಯೂ ವಿಐಪಿ, ವಿವಿಐಪಿ ಗೇಟ್‌ನಲ್ಲಿ ಒಳ ನುಸುಳಲು ಭಕ್ತರು ಪರದಾಡಿದರು. ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು, ಸಿಬ್ಬಂದಿ ತಮ್ಮ ಐಡಿ ಕಾರ್ಡ್ ತೋರಿಸಿದರು ಪೊಲೀಸರು ಅವರನ್ನು ಒಳ ಬಿಡಲು ನಿರಾಕರಿಸಿದರು. ಇದರ ನಡುವೆ ಜನಪ್ರತಿನಿಧಿಗಳ ಹಿಂಬಾಲಕರು ಮಾತ್ರ ಕುಟುಂಬ ಸಮೇತ ಪ್ರವೇಶ ಪಡೆಯುತ್ತಿರುವುದು ಸಾಮಾನ್ಯವಾಗಿತ್ತು.

ಕೀಲಿ ಕೀ ಗುದ್ದಾಟ: ಗೇಟ್ ಕೀಲಿ ಕೀ ವಿಚಾರವಾಗಿ ಮುಜರಾಯಿ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಮುಸುಕಿನ ಗುದ್ದಾಟದಿಂದ ವಿಐಪಿ ಎಂಟ್ರಿ ಹಾಗೂ ಭಕ್ತರ ನಡುವಿನ ಗುದ್ದಾಟಕ್ಕೆ ಕಾರಣವಾಯಿತು. ವಿಐಪಿ ಗೇಟ್ ಮುಚ್ಚಿದ್ದರಿಂದ ಆಗಿದ್ದರಿಂದ ವಿವಿಐಪಿ ಎಂಟ್ರಿ ಹೌಸ್‌ಫುಲ್ ಆಗಿ ಭಕ್ತರ ಜತೆಗೆ ಗುದ್ದಾಟ ನಡೆಸುವಂತಾಯಿತು. ಇದನ್ನು ತಪ್ಪಿಸಿ ಗಣ್ಯರನ್ನು ಕರೆದೊಯ್ಯಲು ಪೊಲೀಸರು ಪರದಾಡಿದರು. ಹಿರಿಯ ಅಧಿಕಾರಿಗಳ ಸಮನ್ವಯತೆ ಕೊರತೆ ಎದ್ದು ಕಾಣುತ್ತಿತ್ತು.

ಮಹಿಳಾ ಟಿ20 ಏಷ್ಯಾಕಪ್: ಬಾಂಗ್ಲಾದೇಶದ ವಿರುದ್ಧ ಭಾರತಕ್ಕೆ ದಾಖಲೆಯ 10 ವಿಕೆಟ್ ಜಯ

ಫೈನಲ್ ತಲುಪಿದ ಮಹಿಳಾ ಪಡೆ!

ಡಂಬುಲ್ಲಾ(ಶ್ರೀಲಂಕಾ), ಜು. ಮಹಿಳಾ ಟಿ20 ಏಷ್ಯಾಕಪ್ ಮೊದಲ ಸೆಮಿಫೈನಲ್ ಪಂದ್ಯ ಭಾರತ ಹಾಗೂ ಬಾಂಗ್ಲಾದೇಶ ನಡುವೆ ನಡೆದಿದ್ದು ಭಾರತ 10 ವಿಕೆಟ್‌ಗಳಿಂದ ಬಾಂಗ್ಲಾದೇಶವನ್ನು ಮಣಿಸಿ ಫೈನಲ್ ತಲುಪಿದೆ.


ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ನಿಗದಿತ ಓವರ್‌ನಲ್ಲಿ 8 ವಿಕೆಟ್ ನಷ್ಟಕ್ಕೆ 80 ರನ್ ಪೇರಿಸಿತ್ತು. ಬಾಂಗ್ಲಾ ನೀಡಿದ 81 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ತಂಡ 11 ಓವರ್‌ಗಳ ಮುಕ್ತಾಯಕ್ಕೆ ವಿಕೆಟ್ ನಷ್ಟವಿಲ್ಲದೆ 83 ರನ್ ಬಾರಿಸಿ ಗೆಲುವಿನ ನಗೆ ಬೀರಿತು.

ಬಾಂಗ್ಲಾ ಪರ ನಿಗರ್ ಸುಲ್ತಾನಾ 32 ರನ್ ಬಾರಿಸಿ ಔಟಾದರೆ ಶೋರ್ನಾ ಅಖ್ತರ್ ಅಜೇಯ 19 ರನ್ ಸಿಡಿಸಿದ್ದಾರೆ. ಈ ಇಬ್ಬರು ಆಟಗಾರರನ್ನು ಬಿಟ್ಟರೆ ಮತ್ಯಾರು ಎರಡಂಕಿ ದಾಟಲಿಲ್ಲ. ಭಾರತ ಪರ ಬೌಲಿಂಗ್ ನಲ್ಲಿ ರೇಣುಕಾ ಸಿಂಗ್ ಹಾಗೂ ರಾಧಾ ಯಾದವ್ ತಲಾ 3 ವಿಕೆಟ್ ಪಡೆದರೆ ಪೂಜಾ ವಸ್ತ್ರಾಕರ್ ಮತ್ತು ದೀಪ್ತಿ ಶರ್ಮಾ ತಲಾ 1 ವಿಕೆಟ್ ಪಡೆದಿದ್ದಾರೆ.

ಭಾರತದ ಪರ ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿದ ಸ್ಮೃತಿ ಮಂದಾನ ಅಜೇಯ 55 ಮತ್ತು ಶೆಫಾಲಿ ವರ್ಮಾ ಅಜೇಯ 26 ರನ್ ಬಾರಿಸಿ ತಂಡಕ್ಕೆ 10 ವಿಕೆಟ್ ಗಳಿಂದ ಅಮೋಘ ಗೆಲುವು ತಂದುಕೊಟ್ಟರು. ಏಷ್ಯಾಕಪ್ ಟೂರ್ನಿಯಲ್ಲಿ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಶ್ರೀಲಂಕಾ ಮತ್ತು ಪಾಕಿಸ್ತಾನ ಮುಖಾಮುಖಿಯಾಗಲಿದ್ದು ಆ ಪಂದ್ಯದಲ್ಲಿ ಗೆದ್ದವರ ಜೊತೆ ಭಾರತ ಫೈನಲ್ ಪಂದ್ಯದಲ್ಲಿ ಸೆಣಸಲಿದೆ.



ಎ.ಎಸ್.ನಟರಾಜ್ ಅವರಿಗೆ 'ಲಾ ಗೈಡ್' ಅಭಿನಂದನೆ



ಮೈಸೂರಿನ ಸಾ.ರಾ.ಕನ್ವೆನ್ಷನ್ ಹಾಲ್‌ನಲ್ಲಿ ಎ.ಎಸ್.ನಟರಾಜ್ ಅವರ ಗುರು ವಂದನಾ ಕಾರ್ಯಕ್ರಮದ ವೇಳೆ 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆ ವತಿಯಿಂದ ಎ.ಎಸ್.ನಟರಾಜ್ ಅವರನ್ನು ಅಭಿನಂದಿಸಲಾಯಿತು. ಲಾ ಗೈಡ್ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಮಾಜಿ ಅಧ್ಯಕ್ಷರಾದ ಜಿ.ವಿ.ರಾಮಮೂರ್ತಿ, ಎಂ.ಮಹದೇವಸ್ವಾಮಿ, ಮಾಜಿ ಕಾರ್ಯದರ್ಶಿ ಉಮೇಶ್ ಸೇರಿದಂತೆ ಹಲವು ವಕೀಲರು ನಟರಾಜ್ ಅವರಿಗೆ ಪುಷ್ಪಗುಚ್ಛ ನೀಡಿ ಶುಭ ಕೋರಿದರು.

ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ



ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಪಾಲ್ಗೊಂಡರು

ಮೈಸೂರು, ಜು.26(ಎಸ್‌ಪಿಎನ್)– ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಜೇನುಗೂಡು ಸೇವಾ ಸಮಿತಿ ವತಿಯಿಂದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ ಶುಕ್ರವಾರ ಜರುಗಿತು.

ಶ್ರೀ ಚಾಮುಂಡೇಶ್ವರಿ ಅಮ್ಮನವರ 16ನೇ ವರ್ಷದ ಆಷಾಡ ವಿಶೇಷ ಪೂಜಾ ಮಹೋತ್ಸವದ ಅಂಗವಾಗಿ ಇಂದಿನಿಂದ ಮೂರು ದಿನಗಳು ವಿವಿಧ ಪೂಜಾ ಕಾರ್ಯಕ್ರಮ ಹಾಗೂ ಭಾನುವಾರ ಮಧ್ಯಾಹ್ನ ಅನ್ನಸಂತರ್ಪಣೆ ಕಾರ್ಯಕ್ರಮ ಇರಲಿದೆ.

ಈ ಪೂಜಾ ಮಹೋತ್ಸವದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಪೂಜಾ ಮಹೋತ್ಸವದಲ್ಲಿ ಪಾಲ್ಗೊಂಡು ದೇವಿ ಕೃಪೆಗೆ ಪಾತ್ರರು. ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಸೇರಿದಂತೆ ಇತರೆ ಜನಪ್ರತಿನಿಧಿಗಳು ಭಾಗಿಯಾಗಿದ್ದರು. ಈ ವೇಳೆ ಜೇನುಗೂಡು ಸೇವಾ ಸಮಿತಿ ಅಧ್ಯಕ್ಷೆ ರಾಧಾ, ಮಾಲ ಮಹೇಂದ್ರ, ಭವ್ಯ ಮುತ್ತುರಾಜ್, ಸತೀಶ್ ಗೌಡ, ನವೀಶ್ ಗೌಡ, ಹೃತ್ವಿಕ್ ಗೌಡ, ರತನ್‌ಗೌಡ, ನಾಗೇಶ್‌ಗೌಡ ಹಾಗೂ ರಾಕೇಶ್ ಗೌಡ ಉಪಸ್ಥಿತರಿದ್ದರು.

ಮೈಸೂರು ಕಾರಾಗೃಹ ತರಬೇತಿ ಸಂಸ್ಥೆ ಜೈಲರ್ ಆಗಿ ಎನ್. ರೂಪವಾಣಿ

ಮೈಸೂರು, ಜು.26(ಎಸ್‌ಪಿಎನ್)– ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವರ್ಗಾವಣೆ ಹಿನ್ನೆಲೆಯಲ್ಲಿ ಮೈಸೂರು ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆಯ ಪ್ರಭಾರ ಜೈಲರ್ ಆಗಿದ್ದ ಎನ್.ರೂಪವಾಣಿ ಅವರನ್ನು ಅದೇ ಹುದ್ದೆಯಲ್ಲಿ ರಾಜ್ಯ ಸರ್ಕಾರ ಖಾಯಂಗೊಳಿಸಿದೆ.

'ಸಿ' ಗ್ರೂಪ್ ಅಧಿಕಾರಿಗಳು ವರ್ಗಾವಣೆ: ಕಾರಾಗೃಹ ಮತ್ತು ಸುಧಾರಣೆ ಸೇವಾ ಇಲಾಖೆಯಲ್ಲಿ ಗ್ರೂಪ್ 'ಸಿ' ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೋರಿಕೆ ಮೇರೆಗೆ ಎನ್.ಆರ್.ಚೇತನ ಅವರನ್ನು ವಿಜಯಪುರದಿಂದ ಮೈಸೂರಿಗೆ ವರ್ಗಾಯಿಸಲಾಗಿದ್ದು, ಮೈಸೂರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಗೀತಾ ಅಂಬಣ್ಣ ಮಾಲಗಾರ ಅವರನ್ನು ಬಾಗಲಕೋಟೆ ಕಾರಾಗೃಹಕ್ಕೆ ವರ್ಗಾಯಿಸಲಾಗಿದೆ. ಹೀಗೆ ಒಟ್ಟು 9 ಮಂದಿಯನ್ನು ವಿವಿಧ ಕಾರಾಗೃಹದಲ್ಲಿ ಕರ್ತವ್ಯ ನಿರ್ವಹಿಸಿದ್ದ ಅಧಿಕಾರಿಗಳನ್ನು ಕೋರಿಕೆ ಮೇರೆಗೆ ವರ್ಗಾಯಿಸಿ ರಾಜ್ಯ ಕಾರಾಗೃಹ ಮತ್ತು ಸುಧಾರಣೆ ಸೇವೆ ಮಹಾ ನಿರ್ದೇಶಕರನ್ನು ಮಾಲಿನಿ ಕೃಷ್ಣಮೂರ್ತಿ ಶುಕ್ರವಾರ ಆದೇಶಿಸಿದ್ದಾರೆ.

ಬಿಜೆಪಿ ಯುವ ಮೋರ್ಚಾದಿಂದ ಕಾರ್ಗಿಲ್ ವಿಜಯೋತ್ಸವ

ಮೈಸೂರು, ಜು.26(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಕಾರ್ಗಿಲ್ ವಿಜಯದ 25ನೇ ವಾರ್ಷಿಕೋತ್ಸವ ಅಂಗವಾಗಿ ಕಾರ್ಗಿಲ್ ಯುದ್ಧದ ವೇಳೆ ಹುತಾತ್ಮರಾದ ಯೋಧರಿಗೆ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು ಶುಕ್ರವಾರ ಶ್ರದ್ಧಾಂಜಲಿ ಅರ್ಪಿಸಿದರು.



ಕಾರ್ಗಿಲ್ ವಿಜಯದ 25ನೇ ವಾರ್ಷಿಕೋತ್ಸವ ಅಂಗವಾಗಿ ವಿಜಯೋತ್ಸವ ಆಚರಿಸಿ, ನಿವೃತ್ತ ಯೋಧರನ್ನು ಸನ್ಮಾನಿಸಲಾಯಿತು

ಈ ವೇಳೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 27 ಯೋಧರನ್ನು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸನ್ಮಾನಿಸಿ, ಮಾತನಾಡಿದ ಅವರು, ಪ್ರತಿ ವರ್ಷ ಜುಲೈ 26ರಂದು 'ಕಾರ್ಗಿಲ್ ವಿಜಯ ದಿವಸ್' ಎಂದು ಆಚರಿಸಲಾಗುತ್ತಿದೆ. ಉತ್ತರ ಕಾರ್ಗಿಲ್ ಜಿಲ್ಲೆಯಲ್ಲಿ ಪರ್ವತದ ತುದಿಗಳಲ್ಲಿ ಪಾಕಿಸ್ತಾನಿ ಯೋಧರು ಅವಿತುಕೊಂಡು ಭಾರತೀಯ ಸೇನಾಪಡೆಗಳ ವಿರುದ್ಧ ಗುಂಡಿನ ಸುರಿಮಳೆಗೈಯ್ದರು. ಈ ಹಿನ್ನೆಲೆಯಲ್ಲಿ ನೂರಾರು ಮಂದಿ ಭಾರತೀಯ ಯೋಧರು ಸಾವನ್ನಪ್ಪಿದರು ಎಂದರು.

ಭಾರತದೊಂದಿಗೆ ಅಂದಿನ ಪಾಕಿಸ್ತಾನಿ ಪ್ರಧಾನಿ ನವಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಪರ್ವೇಜ್ ಮುಷರಫ್ ನೇತೃತ್ವದಲ್ಲಿ ಶಾಂತಿ ಒಪ್ಪಂದ ಮಾಡಿಕೊಂಡ ಸಂದರ್ಭದಲ್ಲಿಯೇ ಮೋಸದಿಂದ ಪಾಕಿಸ್ತಾನಿ ಸೈನ್ಯ ಕಾರ್ಗಿಲ್ ಯುದ್ಧ ಆರಂಭಿಸಿತು. ನಂತರ ಭಾರತೀಯ ಸೇನಾಪಡೆ ಪಾಕಿಸ್ತಾನಿ ಸೈನ್ಯವನ್ನು ಸೋಲಿಸಿತು.

ಪಾಕಿಸ್ತಾನಿ ಸೈನಿಕರು ಕಾರ್ಗಿಲ್‌ನ ಬೆಟ್ಟಗುಡ್ಡಗಳಲ್ಲಿ ಅವಿತುಗೊಂಡು ನಮ್ಮ ಸೈನಿಕರ ಮೇಲೆ ಗುಂಡು ಹಾರಿಸುತ್ತಿದ್ದರು. ಆದರೂ ನಮ್ಮ ಸೈನಿಕರು ಕೊರೆಯುವ ಚಳಿಯಲ್ಲಿ ಯುದ್ಧ ಮಾಡಿ, ಪಾಕಿಸ್ತಾನಿ ಸೈನಿಕರನ್ನು ಸದೆಬಡಿಯುವಲ್ಲಿ ಯಶಸ್ವಿಯಾದರು. ಈ ಯುದ್ಧ ಜಯಿಸಿ, ಇಂದಿಗೆ 25 ವರ್ಷ ಕಳೆದಿರುವ ಹಿನ್ನೆಲೆಯಲ್ಲಿ ದೇಶಾದ್ಯಂತ 'ಕಾರ್ಗಿಲ್ ವಿಜಯ ದಿವಸ್' ಹೆಸರಿನಲ್ಲಿ ಆಚರಣೆ ಮಾಡಲಾಗುತ್ತಿದೆ ಎಂದರು.

ನಿವೃತ್ತ ಯೋಧರಿಗೆ ಸನ್ಮಾನ: ಹೆಚ್.ಎಸ್.ರವೀಂದ್ರ ಕುಮಾರ್, ನಟರಾಜ್, ಬಾಲಕೃಷ್ಣ, ಸಿ.ಮಂಜುನಾಥ್, ಕೃಷ್ಣಮೂರ್ತಿ, ಆರ್.ಎಲ್.ಕುಮಾರ್, ಶಾಂತಪ್ಪ, ಆರ್.ಮೋಹನ್, ನೀಲ್‌ಕಾಂತ ಕುಮಾರ್ ಶೆಟ್ಟಿ, ಕೆ.ರಾಜು, ಕಿರಣ್ ಕುಮಾರ್, ಸೋಮಯ್ಯ, ಕರಿಯಪ್ಪ, ಎಸ್.ಶಿವಕುಮಾರ್, ಆರ್.ನಾಗಭೂಷಣ್, ಕಾಂತರಾಜು, ಜಗದೀಶ್, ಚಂದ್ರಶೇಖರ್, ಲಿಂಗರಾಜು, ಕೆ.ವಿ.ಮಹೇಶ್, ಚಂದ್ರಕುಮಾರ್, ಜಯಣ್ಣ, ವಿರೂಪಾಕ್ಷಪ್ಪ, ಎಂ.ವಿ.ಕುಮಾರ್, ಸಿ.ಪಿ.ರಾಜು, ಮಹದೇವ ಸ್ವಾಮಿ, ಜಿ.ಎನ್.ರತ್ನಾಕರ್ ನಾಯಕ್, ಹೆಚ್.ಬಿ.ಉಮೇಶ್, ಟಿ.ಪಿ.ಚಂಗಪ್ಪ, ಕೆ.ಪಿ.ದಿವಾಕರ್, ಪ್ರಭಾಕರ್ ರಾವ್ ಶಿಂಧೆ, ಸಿದ್ದಯ್ಯ ಹಿರೇಮಠ್,ಜೈಶಂಕರ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಈ ವೇಳೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಸನ್ಮಾನದ ನಂತರ ಬಿಜೆಪಿ ಕಾರ್ಯಕರ್ತರು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ನಗರ ಸಂಚಾರ ಎಸಿಪಿ ಕಚೇರಿ ವೃತ್ತದವರೆಗೆ ಪಂಜಿನ ಮೆರವಣಿಗೆ ನಡೆಸಿ, ಜೈ ಜವಾನ್, ಜೈ ಕಿಸಾನ್ ಸೇರಿದಂತೆ ಇತರೆ ಘೋಷಣೆಗಳನ್ನು ಕೂಗಿದರು.

ಈ ವೇಳೆ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಅಲ್ಪಸಂಖ್ಯಾತರ ಮೋರ್ಚಾದ ಅಧ್ಯಕ್ಷ ಡಾ.ಅನಿಲ್ ಥಾಮಸ್, ನಗರ ಉಪಾಧ್ಯಕ್ಷ ಜೋಗಿ ಮಂಜು, ಮುಖಂಡರಾದ ರುದ್ರಮೂರ್ತಿ, ಗಿರಿಧರ್, ಕೆ.ಎಂ.ನಿಶಾಂತ್, ಮನೀತ್, ದಿನೇಶ್ ಗೌಡ, ಸಚಿನ್, ಲೋಹಿತ್, ಪ್ರಣಯ್, ರಾಜೇಶ್, ಪುರುಷೋತ್ತಮ್ ಸೇರಿದಂತೆ ಇತರೆ ಮುಖಂಡರಿದ್ದರು.

ಕೊಡಗು ಜಿಲ್ಲೆ ಜನಜೀವನ ಅಸ್ತವ್ಯಸ್ತ

● ಮುಂದುವರೆದ ಮುಂಗಾರು ಮಳೆ ಅಬ್ಬರ ● ನಿವಾಸಿಗಳಿಗೆ ಪ್ರವಾಹ ಎದುರಾಗುವ ಆತಂಕ



ಕಣಿವೆ ಬಸವನಹಳ್ಳಿ ಮುಖ್ಯ ರಸ್ತೆಯಲ್ಲಿ ಬಿದ್ದ ಮರವನ್ನು ಅಗ್ನಿ ಶಾಮಕ ದಳ ಮತ್ತು ಅರಣ್ಯ ಸಿಬ್ಬಂದಿ ತೆರವುಗೊಳಿಸಿದರು.

ಮಡಿಕೇರಿ, ಜು.26–ಕೊಡಗಿನಾದ್ಯಂತ ಮಳೆ ಅಬ್ಬರ ಶುಕ್ರವಾರವೂ ಹೆಚ್ಚಾಗಿದ್ದು, ಆರೆಂಜ್ ಅಲರ್ಟ್ ಮುಂದುವರೆಸಲಾಗಿದೆ. ಭಾರೀ ಗಾಳಿ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಗಿದ್ದು, ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿ ಪ್ರವಾಹ ಎದುರಾಗುವ ಆತಂಕ ನದಿ ತಟದ ನಿವಾಸಿಗಳಲ್ಲಿ ಮನೆ ಮಾಡಿದೆ.

ತಲಕಾವೇರಿ, ಭಾಗಮಂಡಲ ಸೇರಿದಂತೆ ಬ್ರಹ್ಮಗಿರಿ ಬೆಟ್ಟ ಸಾಲಿನ ಗ್ರಾಮಗಳಲ್ಲಿ ವ್ಯಾಪಕ ಮಳೆ ಸುರಿಯುತ್ತಿದ್ದು, ತ್ರಿವೇಣಿ ಸಂಗಮ ಮತ್ತೆ ಮುಳುಗಡೆಯಾಗಿದೆ. ವಿರಾಜಪೇಟೆ ತಾಲೂಕಿನ ಕಳತ್ಮಾಡು ಸರ್ಕಾರಿ ಶಾಲಾ ಕಟ್ಟಡದ ಮೇಲೆ ಮರ ಬಿದ್ದ ಪರಿಣಾಮ ಛಾವಣಿಗೆ ಹಾನಿಯಾಗಿದೆ. ಬೈರಂಬಾಡ ಶಾಲೆಯ ಕಟ್ಟಡದ ಮೇಲೆ ಬೃಹತ್ ಗಾತ್ರದ ಮರ ಬಿದ್ದು ಕಟ್ಟಡಕ್ಕೆ ಹಾನಿಯಾಗಿದೆ. ಘಟನಾ ಸ್ಥಳಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್ ಭೇಟಿ ನೀಡಿ, ಪರಿಶೀಲಿಸಿದರು. ಶಾಲೆ ರಜೆ ನೀಡಿದ್ದರಿಂದ ಅಪಾಯ ತಪ್ಪಿದಂತಾಗಿದೆ.

ವಿವಿಧೆಡೆ ಹತ್ತಾರು ಮರಗಳು ಮುರಿದು ಬಿದ್ದು ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದರೆ, ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಸಮಸ್ಯೆಯಿಂದ ಕಗ್ಗತ್ತಲು ಆವರಿಸಿದೆ. ಶನಿವಾರ ಸಂತೆ–ಕುಶಾಲನಗರ ಮುಖ್ಯ ರಸ್ತೆಯ ಕಣಿವೆ ಬಸವನಹಳ್ಳಿಯಲ್ಲಿ ಬೃಹತ್ ಗಾತ್ರದ ಮರ ಬಿದ್ದು, ವಿದ್ಯುತ್ ಕಂಬದ ದುರಸ್ತಿ ಮಾಡುತ್ತಿದ್ದ ಸೆಸ್ಕ್ ಕಿರಿಯ ಇಂಜಿನಿಯರ್ ಮನುಕುಮಾರ್ ಮತ್ತು ಲೈನ್‌ಮನ್ ಮಂಜು ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮರ ಬಿದ್ದ ಪರಿಣಾಮ ಎನ್.ಬಿ.ನಾಗಪ್ಪ ಅವರ ಮನೆಯ ಕಾಂಪೌಂಡ್ ಹಾಗೂ ಕೊಟ್ಟಿಗೆಗೆ ಹಾನಿಯಾಗಿದೆ. ಅಗ್ನಿ ಶಾಮಕ ದಳ ಮತ್ತು ಅರಣ್ಯ ಸಿಬ್ಬಂದಿ ಮರ ತೆರವುಗೊಳಿಸಿದರು.

ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ಭಾಗದಲ್ಲಿ ದಾಖಲೆಯ ಮಳೆಯಾಗುತ್ತಿದ್ದು, ಸೋಮವಾರಪೇಟೆ–ಶಾಂತಳ್ಳಿ ಸಂಪರ್ಕ ರಸ್ತೆಯ ಕುಂದಳ್ಳಿಯಲ್ಲಿ ಮತ್ತೆ ಭಾರೀ ಭೂ ಕುಸಿತವಾಗಿದೆ. ಜೇಡಿಗುಂಡಿಯಲ್ಲಿ ಗುಡ್ಡದ ಮಣ್ಣು ರಸ್ತೆಗೆ ಬಿದ್ದಿರುವ ಪರಿಣಾಮ ವಾಹನ ಸಂಚಾರ ಬಂದ್ ಆಗಿದ್ದು, ಜಡಿ ಮಳೆಯಲ್ಲೇ ಮಣ್ಣು ತೆರವಿಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಮುಂದುವರೆದ ಮನೆ ಹಾನಿ: ಕೊಡ್ಲಿಪೇಟೆಯ ಶಿವರಳ್ಳಿ ಗ್ರಾಮದ ಲಕ್ಷ್ಮಮ್ಮ ತಮ್ಮೇಗೌಡ, ಸಂಪಿಗೆದಾಳು ಗ್ರಾಮದ ಭಾಗ್ಯ ಧರ್ಮಪ್ಪ, ವಡಯನಪುರ ಗ್ರಾಮದ ಗೌರಮ್ಮ, ಶನಿವಾರಸಂತೆ ಮುಖ್ಯ ರಸ್ತೆ ವಾಸವಿರುವ ಬಿಲಾಳ, ಹೆಬ್ಬಾಲೆಯ ವೇದಾವತಿ, ಹೊಸತೋಟ ರಾಧಾ, ಮಡಿಕೇರಿ ತಾಲೂಕು ಸಂಪಾಜೆಯ ಚಡಾವು ಗ್ರಾಮದ ಸುಲೇಖ, ಮೇಕೇರಿ ನಿವಾಸಿ ವೇದಾವತಿ ಅವರ ಮನೆಗಳ ಗೋಡೆಗಳು ಕುಸಿದಿದ್ದು, ಛಾವಣಿಗೆ ತೀವ್ರ ಹಾನಿಯಾಗಿದೆ. ಘಟನಾ ಸ್ಥಳಗಳಿಗೆ ಕಂದಾಯ ಮತ್ತು ಸ್ಥಳೀಯ ಪಂಚಾಯಿತಿ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಚೆಂಬು ಗ್ರಾಮದ ದಬ್ಬಡ್ಕ ಶಾಲೆ ಸಮೀಪದ ಬಸ್ ತಂಗುದಾಣದ ಮೇಲೆ ಮರ ಬಿದ್ದು ತೀವ್ರ ಹಾನಿಯಾಗಿದೆ.

ಮಳೆ ವಿವರ: ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಯಲ್ಲಿ ಸರಾಸರಿ 88.15 ಮಿ.ಮೀ. ಮಳೆಯಾಗಿದೆ. ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ವ್ಯಾಪ್ತಿಯಲ್ಲಿ 200 ಮಿ.ಮೀ, ಕೊಡ್ಲಿಪೇಟೆ ವ್ಯಾಪ್ತಿಯಲ್ಲಿ 80, ಭಾಗಮಂಡಲದಲ್ಲಿ 180, ನಾಪೋಕ್ಲು ವ್ಯಾಪ್ತಿಯಲ್ಲಿ 134, ಶ್ರೀಮಂಗಲದಲ್ಲಿ 153, ಹುದಿಕೇರಿ 134.1, ಅಮ್ಮತ್ತಿ ವ್ಯಾಪ್ತಿ 80 ಮಿ.ಮೀ. ಮಳೆಯಾಗಿದೆ.

ನದಿ ಮೂಲದ ಗ್ರಾಮಗಳಾದ ಮಡಿಕೇರಿ, ಕಾಲೂರು, ಸೂರ್ಲಬ್ಬಿ, ಕುಂಬಾರಗಡಿಗೆ, ಮುಕ್ಕೋಡ್ಲು, ಮಾದಾಪುರ, ಕುಂಬೂರು, ಇಗ್ಗೋಡ್ಲು ಮತ್ತಿತರೆಡೆ ಭಾರೀ ಮಳೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಟ್ಟಿಹೊಳೆ ಮತ್ತು ಮಾದಾಪುರ ಹೊಳೆಗಳು ಉಕ್ಕಿ ಹರಿಯುತ್ತಿವೆ.

ಇಂದೂ ಶಾಲಾ–ಕಾಲೇಜಿಗೆ ರಜೆ

ಜಿಲ್ಲೆಯಲ್ಲಿ ಬಿರುಸಿನ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಜು.27 ರಂದು ರಜೆ ಘೋಷಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಪ್ರಕೃತಿ ವಿಕೋಪ ಸಮರ್ಥವಾಗಿ ನಿಭಾಯಿಸಿ

ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳಿಗೆ ಡಿಸಿ ವೆಂಕಟ್ ರಾಜಾ ಸೂಚನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧ ನಡೆದ ಸಭೆಯಲ್ಲಿ ಡಿಸಿ ವೆಂಕಟ್ ರಾಜಾ ಮಾತನಾಡಿದರು.

ಮಡಿಕೇರಿ, ಜು.26–ಕೊಡಗು ಜಿಲ್ಲೆಯಲ್ಲಿ ಮತ್ತೆ ಮಳೆ ಬಿರುಸುಗೊಂಡಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾದಲ್ಲಿ ಪ್ರಕೃತಿ ವಿಕೋಪವನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ವಿವಿಧ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಪ್ರಕೃತಿ ವಿಕೋಪ ನಿರ್ವಹಣೆಯಲ್ಲಿ ಕಂದಾಯ, ಲೋಕೋಪಯೋಗಿ, ಪಂಚಾಯತ್ ರಾಜ್, ಅರಣ್ಯ, ಸೆಸ್ಕ್, ಅಗ್ನಿಶಾಮಕ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. ಮುಂದಿನ ದಿನಗಳಲ್ಲೂ ಇದೇ ರೀತಿ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ಯಾವುದೇ ಹಾನಿ ಆಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ತಾಕೀತು ಮಾಡಿದರು.

ಜಿಲ್ಲೆಯಲ್ಲಿ ಧಾರಾಕಾರ ಮಳೆಯಿಂದ ಜಲಾಶಯ, ಜಲಪಾತಗಳು, ಹಳ್ಳಕೊಳ್ಳ, ನದಿ ತೊರೆಗಳು ತುಂಬಿ ಹರಿಯುತ್ತಿವೆ. ಇದರಿಂದ ಅಂತರ್ಜಲ ಸಹ ಹೆಚ್ಚಾಗಿದೆ ಹೀಗಾಗಿ ಯಾವುದೇ ಹಾನಿ ಉಂಟಾಗದಂತೆ ಎಚ್ಚರ ವಹಿಸಬೇಕು. ಕಳೆದ 2018, 2019, 2020 ರಲ್ಲಿ ಆಗಸ್ಟ್‌ನಲ್ಲೇ ಹೆಚ್ಚಿನ ಮಳೆಯಾಗಿದೆ. ಹಾಗಾಗಿ ಮತ್ತಷ್ಟು ಮುನ್ನೆಚ್ಚರ ವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿದರು. ಜಿಪಂ ಸಿಇಓ ಆನಂದ ಪ್ರಕಾಶ ಮೀನಾ, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಅಪರ ಜಿಲ್ಲಾಧಿಕಾರಿ ಬಿ.ಬಸಪ್ಪ, ಐಟಿಡಿಪಿ ಇಲಾಖೆ ಅಧಿಕಾರಿ ಹೊನ್ನೇಗೌಡ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ರಂಗಧಾಮಪ್ಪ ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ಮಂಜುಳಾ, ಪೌರಾಯುಕ್ತ ವಿಜಯ್ ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

ಸಭೆಯಲ್ಲಿ ಪೌರಾಡಳಿತ ಇಲಾಖೆ ಎಇಇ ಹೇಮಂತ್ ಕುಮಾರ್, ಲೋಕೋಪಯೋಗಿ ಇಲಾಖೆ ಇಇ ಸಿದ್ದೇಗೌಡ, ಪಂಚಾಯತ್ ರಾಜ್ ಇಂಜಿನಿಯರ್, ತಹಸೀಲ್ದಾರ್‌ಗಳಾದ ಪ್ರವೀಣ್ ಕುಮಾರ್, ನವೀನ್ ಕುಮಾರ್, ರಾಮಚಂದ್ರ, ತಾಪಂ ಇಓಗಳಾದ ಶೇಖರ್, ಅಪ್ಪಣ್ಣ ಇದ್ದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ 24 ಗಂಟೆಯೊಳಗೆ ಪರಿಹಾರ ವಿತರಿಸಬೇಕು. ಸಾರ್ವಜನಿಕರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಗ್ರಾಪಂ ಮಟ್ಟದಲ್ಲಿ ಸಭೆ ನಡೆಸಿ, ಪ್ರಕೃತಿ ವಿಕೋಪ ನಿರ್ವಹಿಸಬೇಕು. ಈ ಸಂಬಂಧಿಸಿದಂತೆ ಈಗಾಗಲೇ ಹೋಬಳಿ ಮಟ್ಟದ ನೋಡಲ್ ಅಧಿಕಾರಿಗಳು ವಿವಿಧ ಹಾನಿ ಮತ್ತಿತರ ಸ್ಥಿತಿಗತಿ ಬಗ್ಗೆ ನಿತ್ಯ ವರದಿ ನೀಡಬೇಕು. ತುರ್ತು ಕಾರ್ಯವಿದ್ದಲ್ಲಿ ನೇರವಾಗಿ ಮಾಹಿತಿ ನೀಡಬೇಕು. ಜಿಲ್ಲೆಯ ಹಲವು ಕಡೆಗಳಲ್ಲಿ ಶಾಲಾ ಕಟ್ಟಡಕ್ಕೆ ಹಾನಿಯಾಗಿದ್ದು, ಮಕ್ಕಳ ಸುರಕ್ಷತೆಗೆ ಹೆಚ್ಚಿನ ಗಮನಹರಿಸಬೇಕು.

–ವೆಂಕಟ್ ರಾಜಾ, ಜಿಲ್ಲಾಧಿಕಾರಿ

ಮಡಿಕೇರಿಯಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಣೆ



ಮಡಿಕೇರಿಯಲ್ಲಿ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಯುದ್ಧ ಸ್ಮಾರಕಕ್ಕೆ ನಮನ ಸಲ್ಲಿಸಲಾಯಿತು.

ಮಡಿಕೇರಿ, ಜು.26–ಜಿಲ್ಲಾ ಮಾಜಿ ಸೈನಿಕರ ಸಂಘ, ಕೊಡಗು ಜಿಲ್ಲಾ ಬಿಜೆಪಿ, ಹಿಂದೂ ಜಾಗರಣಾ ವೇದಿಕೆ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ಶುಕ್ರವಾರ 25ನೇ ವರ್ಷದ 'ಕಾರ್ಗಿಲ್ ವಿಜಯ್ ದಿವಸ್' ಅನ್ನು ಆಚರಿಸುವ ಮೂಲಕ ಹುತಾತ್ಮ ವೀರ ಯೋಧರಿಗೆ ಗೌರವ ಸಮರ್ಪಿಸಿದವು.

ನಗರಸಭೆ ಬಳಿಯ ಯುದ್ಧ ಸ್ಮಾರಕ ಮತ್ತು ಜನರಲ್ ತಿಮ್ಮಯ್ಯ ಮ್ಯೂಸಿಯಂ ಬಳಿಯ 'ಅಮರ್ ಜವಾನ್' ಯುದ್ಧ ಸ್ಮಾರಕಕ್ಕೆ ಗಣ್ಯರು ಹಾಗೂ ಸಂಘ–ಸಂಸ್ಥೆಗಳ ಪ್ರಮುಖರು ಪುಷ್ಪ ನಮನ ಸಲ್ಲಿಸುವ ಮೂಲಕ ಹುತಾತ್ಮ ಯೋಧರಿಗೆ ನಮನ ಸಲ್ಲಿಸಿದರು.

ಇದೇ ವೇಳೆ ನಿವೃತ್ತ ಯೋಧರಾದ ಹಾನರರಿ ಕ್ಯಾಪ್ಟನ್ ಜಿ.ಎಸ್.ರಾಜಾರಾಮ್, ಎನ್.ಚಂದ್ರನ್, ಸಿ.ಪ್ರಮೋದ್ ಕುಮಾರ್, ಬಾಬು ಪ್ರಸಾದ್ ರೈ ಅವರನ್ನು ರೋಟರಿ ವುಡ್ಸ್ ಪ್ರಮುಖರು ಸನ್ಮಾನಿಸಿದರು. ಮಾಜಿ ಸೈನಿಕರ ಸಂಘದ ಮೇಜರ್ ಚಿಂಗಪ್ಪ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಹಿಂದೂ ಜಾಗರಣಾ ವೇದಿಕೆಯ ವಿನಯ್ ಹಾಜರಿದ್ದರು.

ನಾಳೆ ಕೊಡವ ಸಮಾಜದ ಮಹಾಸಭೆ

ವಿರಾಜಪೇಟೆ: ವಿರಾಜಪೇಟೆ ಕೊಡವ ಸಮಾಜದ ಮಹಾಸಭೆ ಜು.28 ರಂದು ಬೆಳಗ್ಗೆ 10.30ಕ್ಕೆ ಕೊಡವ ಸಮಾಜದ ಅಧ್ಯಕ್ಷ ಕುಂಬೆರ ಮನುಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಗೌರವ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನದಿಯಲ್ಲಿ ಪುರುಷನ ಶವ ಪತ್ತೆ

ಸರ್ಕಾರಿ ನೌಕರನಿಗಾಗಿ ಶೋಧ ಕಾರ್ಯ ಮುಂದುವರೆಕೆ

ಕುಶಾಲನಗರ: ಇಲ್ಲಿನ ಕೊಪ್ಪ ಸೇತುವೆ ಮೇಲಿನಿಂದ ಕಾವೇರಿ ನದಿಗೆ ಹಾರಿ ಸರ್ಕಾರಿ ನೌಕರನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಹಿನ್ನೆಲೆಯಲ್ಲಿ ಶುಕ್ರವಾರ ಶೋಧ ಕಾರ್ಯ ನಡೆಸುವ ವೇಳೆ ಬೇರೊಂದು ಪುರುಷನ ಶವ ಪತ್ತೆಯಾಗಿದೆ.

ಕೆಲ ದಿನಗಳ ಹಿಂದೆ ಕಾಣೆಯಾಗಿದ್ದ ಕುಶಾಲನಗರ ಸಮೀಪದ ಬಸವನಹಳ್ಳಿ ಗ್ರಾಮದ ನಿವಾಸಿ ಮಹೇಶ್ ಶವ ಪತ್ತೆಯಾಗಿದೆ. ಮಡಿಕೇರಿ ಉಪವಿಭಾಗಾಧಿಕಾರಿ ಕಚೇರಿ ನೌಕರ ಅರುಣ್‌ಕುಮಾರ್ ಮೂರು ದಿನಗಳ ಹಿಂದೆ ಕೊಪ್ಪ ಸೇತುವೆ ಮೇಲಿಂದ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದ್ದು, ಅರುಣ್ ಕುಮಾರ್ ಪತ್ತೆ ಕಾರ್ಯ ಮುಂದುವರೆಸಲಾಗಿತ್ತು. ಆದರೆ, ಶುಕ್ರವಾರ ಮಹೇಶ್ ಶವ ಪತ್ತೆಯಾಗಿದೆ. ನೌಕರ ಅರುಣ್ ಕುಮಾರ್ ಪತ್ತೆಗಾಗಿ ಒಟ್ಟು 5 ತಂಡ ಕೊಪ್ಪ ಸೇತುವೆಯಿಂದ ಕಣಿವೆ ರಾಮಲಿಂಗೇಶ್ವರ ದೇವಾಲಯ ಮುಂಭಾಗದ ನದಿ ಉದ್ದಕ್ಕೂ ತೀವ್ರ ಶೋಧ ನಡೆಸುತ್ತಿದೆ. ಆದರೆ, ಆತ ಇನ್ನೂ ಪತ್ತೆಯಾಗಿಲ್ಲ.

ಹುತಾತ್ಮ ಯೋಧರಿಗೆ ಗೌರವ ಸಮರ್ಪಣೆ



ವಿರಾಜಪೇಟೆಯಲ್ಲಿ ಹುತಾತ್ಮ ಯೋಧರ ಸ್ಮಾರಕಕ್ಕೆ ಮೇಜರ್ ಜನರಲ್ ಬಾಚರಣಿಯಂಡ ಎ.ಕಾರ್ಯಪ್ಪ ಪುಷ್ಪ ನಮನ ಸಲ್ಲಿಸಿದರು.

ವಿರಾಜಪೇಟೆ, ಜು.26–ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ವತಿಯಿಂದ ವಿರಾಜಪೇಟೆಯಲ್ಲಿ ಶುಕ್ರವಾರ ಮಳೆ ನಡುವೆಯೂ ಕಾರ್ಗಿಲ್ ವಿಜಯ್ ದಿವಸ್ ಆಚರಿಸಲಾಯಿತು.

ತಾಲೂಕು ಕಚೇರಿ ಬಳಿಯ ಹುತಾತ್ಮ ಯೋಧರ ಸ್ಮಾರಕಕ್ಕೆ ಮೇಜರ್ ಜನರಲ್ ಬಾಚರಣಿಯಂಡ ಎ.ಕಾರ್ಯಪ್ಪ ಹಾಗೂ ತಹಸೀಲ್ದಾರ್ ರಾಮಚಂದ್ರ ಪುಷ್ಪ ನಮನ ಸಲ್ಲಿಸಿ, ವೀರ ಯೋಧರಿಗೆ ಗೌರವ ಸಮರ್ಪಿಸಿದರು. ನಂತರ ಗಡಿಯಾರ ಕಂಬದಿಂದ ಮಾಜಿ ಸೈನಿಕರು, ಪ್ರಗತಿ ಶಾಲೆ, ಸಂತ ಅನ್ನಮ್ಮ ವಿದ್ಯಾಸಂಸ್ಥೆ, ರೋಟರಿ ಶಾಲೆಯ ಸ್ಕೌಟ್ ಮತ್ತು ಗೈಡ್ಸ್, ಎನ್‌ಸಿಸಿ ವಿದ್ಯಾರ್ಥಿಗಳು ಮುಖ್ಯರಸ್ತೆಯಲ್ಲಿ ಮೆರವಣಿಗೆ ನಡೆಸಿದರು.

ವಿರಾಜಪೇಟೆ ಕೊಡವ ಸಮಾಜದ ಉಪಾಧ್ಯಕ್ಷ ಕುಯಿಮಂಡ ಕಿರಣ್, ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಹೆಗ್ಗಡೆ ಸಮಾಜದ ಅಧ್ಯಕ್ಷ ಪಡಿಞರಂಡ ಅಯ್ಯಪ್ಪ, ಕೊಡವ ಮುಸ್ಲಿಂ ಅಸೋಸಿಯೇಷನ್ ಅಧ್ಯಕ್ಷ ದುದ್ದಿಯಂಡ ಸೂಫಿ, ಬಿಲ್ಲವ ಸೇವಾ ಸಮಾಜದ ಅಧ್ಯಕ್ಷ ಬಿ.ಎಂ.ಗಣೇಶ್, ವಿರಾಜಪೇಟೆ ನಗರ ಪೊಲೀಸ್ ಠಾಣಾಧಿಕಾರಿ ರವೀಂದ್ರ, ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ಕಾರ್ಯದರ್ಶಿ ಮಗ್ಗೇರ ನಂದಾ, ಖಜಾಂಚಿ ತೊರೇರ ಪೂವಯ್ಯ, ಮಾಜಿ ಅಧ್ಯಕ್ಷ ಗಣೇಶ್ ನಂಜಪ್ಪ, ಉಪಾಧ್ಯಕ್ಷ ರಾಜಚಂದ್ರಶೇಖರ್, ಸದಸ್ಯರಾದ ಎಂ.ಕೆ.ಸಲಾಂ, ಕೊಂಗಾಂಡ ಬೀಮಯ್ಯ, ಕಬ್ಬಚೀರ ರತ್ನ ಬೋಪಯ್ಯ, ಬಾಳೆಕುಟ್ಟೀರ ದಿನಿ ಬೋಪಣ್ಣ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಹೇಶ್ ನಾಚಯ್ಯ, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಮೇಜರ್ ಗಿರಿ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಹಾಗೂ ಮತ್ತಿತರ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕೇಂದ್ರ ಬಜೆಟ್ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ



ಚಾಮರಾಜನಗರದಲ್ಲಿ ಕೇಂದ್ರ ಬಜೆಟ್ ವಿರೋಧಿಸಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಚೊಂಬು ಹಿಡಿದು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜು.26–ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ರಾಜ್ಯಕ್ಕೆ ಯಾವುದೇ ಅನುದಾನ ನೀಡಿಲ್ಲ ಎಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಖಾಲಿ ಚೊಂಬು ಪ್ರದರ್ಶಿಸುವ ಮೂಲಕ ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿದರು. ನಂತರ ಕೆಲಕಾಲ ಧರಣಿ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ. ರಾಜ್ಯಕ್ಕೆ ಯಾವುದೇ ಅನುದಾನ ನೀಡದೇ ತಾರತಮ್ಯ ಮಾಡಿದ್ದು, ಕರ್ನಾಟಕದಿಂದ ಐವರು ಕೇಂದ್ರ ಮಂತ್ರಿಗಳಿದ್ದರೂ ಸಹ ಅನುದಾನ ತರುವಲ್ಲಿ ವಿಫಲರಾಗಿದ್ದಾರೆ. ಇದೊಂದು ಬಿಹಾರ ಮತ್ತು ಆಂಧ್ರಪ್ರದೇಶದ ಬಜೆಟ್ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಲತಾ ರಾಜಶೇಖರ ಜತ್ತಿ, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಆರ್.ಮಹದೇವ್, ಗ್ಯಾರಂಟಿ ಯೋಜನೆಗಳ ಸಮಿತಿ ಜಿಲ್ಲಾಧ್ಯಕ್ಷ ಚಂದ್ರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಗುರುಸ್ವಾಮಿ, ಮುಕುಂದ ವರ್ಮ, ಎಪಿಎಂಸಿ ಅಧ್ಯಕ್ಷ ಮಹದೇವಸ್ವಾಮಿ, ಸೋಮೇಶ್, ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಜು.30ಕ್ಕೆ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ

ಸಭೆಯಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಭಾಗ್ಯರಾಜ್ ಎಚ್ಚರಿಕೆ



ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ನಡೆದ ಕಬ್ಬು ಬೆಳೆಗಾರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಭಾಗ್ಯರಾಜ್ ಮಾತನಾಡಿದರು.

ಚಾಮರಾಜನಗರ, ಜು.26–ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಜು.30ರಂದು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಎಚ್ಚರಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿ ಅವರು, ಅಂದು ಚಾಮರಾಜೇಶ್ವರ ದೇವಸ್ಥಾನದ ಎದುರು ಸಮಾವೇಶಗೊಂಡು ಅಲ್ಲಿಂದ ಜೋಡಿರಸ್ತೆ ಮಾರ್ಗವಾಗಿ ಮೆರವಣಿಗೆ ನಡೆಸಲಾಗುವುದು. ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಮುತ್ತಿಗೆ ಹಾಕುವ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಪ್ರಸಕ್ತ ಸಾಲಿಗೆ ಮುಂಗಡ 4000 ರೂ. ನಿಗದಿಗೊಳಿಸಿ, ಕಳೆದ ಸಾಲಿನ ಲಾಭಾಂಶವನ್ನು ಪ್ರತಿ ಟನ್‌ಗೆ 150 ರೂ. ನೀಡಬೇಕು. ಸಕ್ಕರೆ ಕಾರ್ಖಾನೆ ಮುಖ್ಯ ದ್ವಾರದಲ್ಲಿ ಮುಂದೆ ಎಪಿಎಂಸಿ ಮುಖಾಂತರ ತೂಕದ ಯಂತ್ರ ಅಳವಡಿಸಬೇಕು. ಬೇರೆ ಜಿಲ್ಲೆ ಕಬ್ಬು ಸಾಗಣೆಗೆ ನಿರ್ಬಂಧ ಹೇರಬಾರದು ಎಂದು ಆಗ್ರಹಿಸಿದರು.

ಮುಕ್ತ ಮಾರುಕಟ್ಟೆಯಲ್ಲಿ ರೈತರು ಮಾರಾಟ ಮಾಡಿದರೆ, ಹೆಚ್ಚಿನ ಬೆಲೆ ಸಿಗುತ್ತದೆ ಹಾಗೂ ಕಟಾವು ವಿಳಂಬ ತಪ್ಪುತ್ತದೆ ಜೊತೆಗೆ ಪೈಪೋಟಿ ದರ ಬೆಳೆಗಾರರಿಗೆ ಸಿಗುತ್ತದೆ. ಇದರಿಂದ ಕಬ್ಬು ಕಟಾವಿನ ವಿಳಂಬ ಕಡಿಮೆಯಾಗುತ್ತದೆ ಕೇಂದ್ರ ಸರ್ಕಾರ ಎಫ್‌ಆರ್‌ಪಿ ದರವನ್ನು ಪ್ರತಿಟನ್‌ಗೆ 3400 ನಿಗದಿ ಮಾಡಿರುವುದು ರೈತರಿಗೆ ಮಾಡಿರುವ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಲೆಯೂರಿನ ರಾಂಪುರ ಕೆರೆಗೆ ಆಲಂಬೂರು ಏತನೀರಾವರಿ ಮೂಲಕ ನೀರು ತುಂಬಿಸುವ ಯೋಜನೆಯನ್ನು ವಿಸ್ತರಿಸಬೇಕು. ಇದರಿಂದ ಹಿರಿಬೇಗೂರು, ಕಿಳಲಿಪುರ, ಅರಳಿಕಟ್ಟೆ ಕುಲಗಾಣ ಗ್ರಾಮಗಳಲ್ಲಿ ಅಂತರ್ಜಲ ವೃದ್ಧಿಗೆ ಅನುಕೂಲವಾಗಲಿದೆ. ಆದ್ದರಿಂದ ಈ ಯೋಜನೆಯನ್ನು ತಕ್ಷಣ ಕೈಗೊಳ್ಳಲು ಜಿಲ್ಲಾಡಳಿತ ಕ್ರಮವಹಿಸಬೇಕು. ಹೊಸ ಕೃಷಿ ಪಂಪ್‌ಸೆಟ್‌ಗಳಿಗೆ ಅಕ್ರಮ–ಸಕ್ರಮ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ತಾಲೂಕು ಅಧ್ಯಕ್ಷ ಅರಳಿಕಟ್ಟೆ ಕುಮಾರ್, ಉಡಿಗಾಲ ಗ್ರಾಮ ಘಟಕ ಅಧ್ಯಕ್ಷ ಮಂಜುನಾಥ್, ಮಹದೇವಸ್ವಾಮಿ, ಅರಳಿಕಟ್ಟೆ ಪ್ರಭುಸ್ವಾಮಿ, ಕೀಳಲಿಪುರ ಶ್ರೀಕಂಠ, ಸ್ವಾದ್ರಹಳ್ಳಿ ಮಲ್ಲಿಕಾರ್ಜುನ, ಮಲೆಯೂರು ಪ್ರವೀಣ್, ನಂಜದೇವನಪುರ ರಾಜು, ಪ್ರಶಾಂತ್ ಇದ್ದರು.

ಸೊಳ್ಳೆ ನಿಯಂತ್ರಣಕ್ಕೆ ಫಾಗಿಂಗ್ ಸಿಂಪಡಣೆ



ಚಾಮರಾಜನಗರ ನಗರಸಭೆ ವ್ಯಾಪ್ತಿ ಸೊಳ್ಳೆ ನಿಯಂತ್ರಣಕ್ಕೆ ಫಾಗಿಂಗ್ ಸಿಂಪಡಿಸಲಾಯಿತು.

ಚಾಮರಾಜನಗರ, ಜು.26–ಡೆಂಗ್ಯೂ ತಡೆಗಟ್ಟುವ ನಿಟ್ಟಿನಲ್ಲಿ ಸೊಳ್ಳೆ ನಿಯಂತ್ರಣಕ್ಕೆ ನಗರಸಭೆ ವ್ಯಾಪ್ತಿ ಫಾಗಿಂಗ್ ಸಿಂಪಡಿಸಲಾಗುತ್ತಿದೆ.

ಡೆಂಗ್ಯೂ ಹರಡದಂತೆ ಸೊಳ್ಳೆಗಳ ನಿಯಂತ್ರಣಕ್ಕೆ ನಗರಸಭೆ ವತಿಯಿಂದ ವಿವಿಧ ಬಡಾವಣೆಗಳಲ್ಲಿ ಪ್ರತಿನಿತ್ಯ ಫಾಗಿಂಗ್ ಸಿಂಪಡಿಸುತ್ತಿದ್ದು, ಸಾರ್ವಜನಿಕರು ತಮ್ಮ ಮನೆ ಸುತ್ತ ಎಳನೀರು ಬುರುಡೆ, ಚಿಪ್ಪು, ಹಳೆಯ ಟೈರ್ ಹಾಗೂ ಇತರೆಡೆ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಸೊಳ್ಳೆಗಳು ಬಾರದಂತೆ ಸ್ವಚ್ಛತೆ ಕಾಪಾಡಬೇಕು. ಕೈ–ಕಾಲು ಮುಚ್ಚುವಂತೆ ಬಟ್ಟೆ ಧರಿಸಬೇಕು. ಜ್ವರ ಕಾಣಿಸಿಕೊಂಡ ತಕ್ಷಣ ಹತ್ತಿರದ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳಿಗೆ ತೆರಳಿ ಚಿಕಿತ್ಸೆ ಪಡೆಯಬೇಕು. ಜೊತೆಗೆ ಆರೋಗ್ಯ ಇಲಾಖೆ ಸೂಚನೆಗಳನ್ನು ಪಾಲಿಸಬೇಕು ಎಂದು ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ಬಿಎಸ್‌ಪಿ ಪ್ರತಿಭಟನೆ



ಚಾಮರಾಜನಗರದಲ್ಲಿ ಬಹುಜನ ಸಮಾಜ ಪಕ್ಷದ ಕಾರ್ಯಕರ್ತರು ರಾಜ್ಯ ಸರ್ಕಾರದವಿರುದ್ಧ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜು.26–ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಮೀಸಲು ಹಣವನ್ನು ರಾಜ್ಯ ಸರ್ಕಾರ ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿ ಬಹುಜನ ಸಮಾಜ ಪಕ್ಷದ ಕಾರ್ಯಕರ್ತರು ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಬಿಎಸ್‌ಪಿ ರಾಜ್ಯ ಸಂಯೋಜಕ ಎಂ.ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಡಾ.ಹ.ರಾ.ಮಹೇಶ್, ಜಿಲ್ಲಾಧ್ಯಕ್ಷ ಎನ್.ನಾಗಯ್ಯ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತ ಹಾಗೂ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನದ ವರೆಗೆ ಮೆರವಣಿಗೆ ನಡೆಸಿದರು. ಬಳಿಕ ಅಪರ ಜಿಲ್ಲಾಧಿಕಾರಿ ಗೀತಾಹುಡೇದ ಅವರಿಗೆ ಮನವಿ ಸಲ್ಲಿಸಿದರು.

ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಎಸ್ಸಿ, ಎಸ್ಟಿ ಅಭಿವೃದ್ಧಿ ಮೀಸಲು 25,390 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಆ ಸಮುದಾಯಗಳ ಕುತ್ತಿಗೆ ಕುಯ್ಯುವ ಕೆಲಸ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಪ್ರಧಾನ ಕಾರ್ಯದರ್ಶಿ ಬ.ಮ.ಕೃಷ್ಣಮೂರ್ತಿ, ಸಂಯೋಜಕ ರಾಜಶೇಖರಮೂರ್ತಿ, ಟೌನ್ ಅಧ್ಯಕ್ಷ ರಂಗಸ್ವಾಮಿ, ತಾಲೂಕು ಅಧ್ಯಕ್ಷ ಚಂದ್ರಕಾಂತ, ಹನೂರು ತಾಲೂಕು ಅಧ್ಯಕ್ಷ ಸೀಗನಾಯಕ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಕೀಲಗೆರೆ ಬಸವಣ್ಣ ದೊಡ್ಡರಾಯಪೇಟೆ ಕೃಷ್ಣಮೂರ್ತಿ, ಕೊಳ್ಳೇಗಾಲದ ಮಣಿ, ಉತ್ತಂಬಳ್ಳಿ ಶಿವು, ಮಲ್ಲಿಕ್, ರಾಜಶೇಖರ್ ಇತರರಿದ್ದರು.

ನಾಳೆ ಬೆಳ್ಳಿ ಬೆಡಗು ಸಂಭ್ರಮಾಚರಣೆಗೆ ಚಾಲನೆ

ಚಾಮರಾಜನಗರ, ಜು.26–ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ 25ನೇ ವರ್ಷದ ಅಂಗವಾಗಿ ಜು.28 ರಂದ ನಗರದಲ್ಲಿ ಬೆಳ್ಳಿ ಬೆಡಗು ಸಂಭ್ರಮಾಚರಣೆಗೆ ಚಾಲನೆ ನೀಡಲಾಗುವುದು ಎಂದು ಸಂಘದ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ದುಂಡು ಮಾದಪ್ಪ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಸ್ಥಾಪನೆಗೊಂಡು 25 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜು.28ರಂದು ಬೆಳಗ್ಗೆ 10 ಗಂಟೆಗೆ ನಗರದ ಬಿ.ರಾಚಯ್ಯ ಜೋಡಿರಸ್ತೆಯ ಸಿದ್ದಮಲ್ಲೇಶ್ವರ ವಿರಕ್ತ ಮಠದ ಆವರಣದ ಅನುಭವ ಮಂಟಪದಲ್ಲಿ ಸಂಭ್ರಮಾಚರಣೆಗೆ ವಿವಿಧ ಮಠಾಧೀಶರು ಚಾಲನೆ ನೀಡಲಿದ್ದಾರೆ ಎಂದರು.

ಮರಿಯಾಲ ಮಠದ ಶ್ರೀ ಇಮ್ಮಡಿ ರಾಜೇಂದ್ರ ಸ್ವಾಮೀಜಿ, ಚಾ.ನಗರ ವಿರಕ್ತ ಮಠದ ಶ್ರೀ ಚನ್ನಬಸವಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಸಿದ್ದಮಲ್ಲಪ್ಪ, ನಾಗಭೂಷನ್, ಎನ್.ಮಹದೇವಸ್ವಾಮಿ, ಎಂ.ಸುಂದರ್, ನಿರ್ದೇಶಕ ಕೆ.ಎಸ್.ಮಹದೇವಸ್ವಾಮಿ ಇದ್ದರು.

ಮನೀಶ್ ನಿಧನ



ಯಳಂದೂರು, ಜು.26–ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಪಟ್ಟಣದ ಗೌತಮ್ ಬಡಾವಣ' ನಿವಾಸಿ ಬಸವರಾಜು ಅವರ ಪುತ್ರ ಮನೀಶ್ (13) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಬಾಲಕ ತಂದೆ ಬಸವರಾಜು, ತಾಯಿ ಸವಿತಾ, ಸಹೋದರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಪಟ್ಟಣದ ಹೊರವಲಯದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅಮಚವಾಡಿಯಲ್ಲಿ ಕಾರ್ಗಿಲ್ ವಿಜಯ್ ದಿವಸ್...



ಚಾಮರಾಜನಗರ ತಾಲೂಕಿನ ಅಮಚವಾಡಿ ಯುವಕರ ಸಂಘ ಹಮ್ಮಿಕೊಂಡಿದ್ದ ಕಾರ್ಗಿಲ್ ವಿಜಯ್ ದಿವಸ್ ಆಚರಣೆ ಕಾರ್ಯಕ್ರಮದಲ್ಲಿ ಜೈ ಹಿಂದ್ ಪ್ರತಿಷ್ಠಾನ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ರಾಷ್ಟ್ರಧ್ವಜ ಪ್ರದರ್ಶಿಸಿದರು. ಸಂಘದ ರಘು, ಕನ್ನಡ ಸಾಹಿತ್ಯ ಪರಿಷತ್ತಿನ ಪವನ್, ಶಂಕರ್, ರಾಜು, ರಮೇಶ್, ಜೆ.ಮಹದೇವಸ್ವಾಮಿ, ಸುರೇಶ್, ಮಹದೇವಸ್ವಾಮಿ ಇದ್ದರು.

ಒಂದನೇ ಪುಟದಿಂದ

ಇನ್ನು ಬೆಂಗಳೂರು ದಕ್ಷಿಣ ಜಿಲ್ಲೆ

ಅವರಿಗೆ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣ ಮಾಡುವಂತೆ ಮನವಿ ಪತ್ರ ಸಲ್ಲಿಸಿದ್ದರು. ಈ ವೇಳೆ ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ಹಾಗೂ ಹಾರೋಹಳ್ಳಿ ತಾಲೂಕುಗಳನ್ನು ಹಾಗೆಯೇ ಉಳಿಸಿಕೊಳ್ಳುವಂತೆಯೂ ಮನವಿ ಮಾಡಿದ್ದರು. ಈ ಮೊದಲು ದೊಡ್ಡಬಳ್ಳಾಪುರ, ನೆಲಮಂಗಲ, ಯಲಹಂಕ, ದೇವನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಹೊಸಕೋಟೆ, ರಾಮನಗರ, ಮಾಗಡಿ, ಕನಕಪುರ ಮತ್ತು ಚನ್ನಪಟ್ಟಣ ತಾಲೂಕುಗಳು ಬೆಂಗಳೂರು ಜಿಲ್ಲೆಯ ಭಾಗವಾಗಿದ್ದವು. 1986ರ ಸಾಲಿನಲ್ಲಿ ದೊಡ್ಡಬಳ್ಳಾಪುರ, ನೆಲಮಂಗಲ, ದೇವನಹಳ್ಳಿ, ಹೊಸಕೋಟೆ, ಚನ್ನಪಟ್ಟಣ, ರಾಮನಗರ, ಮಾಗಡಿ ಹಾಗೂ ಕನಕಪುರ ತಾಲೂಕುಗಳನ್ನು ಸೇರಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನಾಗಿ ಘೋಷಿಸಲಾಯಿತು.

ಮುಡಾ ಭೂಮಿ ಪಡೆದಿದ್ದಾರೆ

ಈ ಮಾಹಿತಿ ಹಂಚಿಕೊಂಡ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಿನಕಲ್‌ನಲ್ಲಿ 1 ಎಕರೆ, ದೇವನೂರಿನಲ್ಲಿ 2.25 ಎಕರೆ, ಕೆಸರೆಯಲ್ಲಿ 4.15 ಎಕರೆ, ಮೈಸೂರಲ್ಲಿ 7.08 ಎಕರೆ, ಶಾಸಕ ಜಿ.ಟಿ.ದೇವೇಗೌಡ ಹೀರನಗೆರೆಯಲ್ಲಿ 2.25 ಎಕರೆ, ಮಾದಗಳ್ಳಿಯಲ್ಲಿ 1 ಎಕರೆ, ಉದ್ಯಮಿ ಯು.ಎಸ್.ನಾಚನಹಳ್ಳಿಪಾಳ್ಯದಲ್ಲಿ 1.26 ಎಕರೆ, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ 0.05 ಎಕರೆ, ಮಾಜಿ ಸಚಿವ ಸಾರಾ ಮಹೇಶ್ ದಟ್ಟಗಳ್ಳಿಯಲ್ಲಿ 0.09, ಬೋಗಾದಿಯಲ್ಲಿ 2.11 ಎಕರೆ, ಮಾಹಿತಿ ಹಕ್ಕು ಕಾರ್ಯಕರ್ತ ಗಂಗರಾಜು ಹೂಟಗಳ್ಳಿ ಮತ್ತು ಕುಪ್ಪಲೂರಿನಲ್ಲಿ ಒಟ್ಟು 0.17 ಎಕರೆ ಭೂಮಿ ಪಡೆದಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು 1984ರಲ್ಲೇ 300X200 ಅಳತೆಯ ಕೈಗಾರಿಕಾ ನಿವೇಶನ ಪಡೆದು ಅದನ್ನು ಬದಲಿ ನಿವೇಶನ ಮಾಡಿಕೊಡುವಂತೆಯೂ ಕೋರಿದ್ದಾರೆ.

ನನಗೆ ಮುಡಾ ನಿವೇಶನವನ್ನೇ ಕೊಟ್ಟಿಲ್ಲ

ನನಗೆ ಕೊಟ್ಟಿಲ್ಲ. 2006ರಲ್ಲಿಯೇ ನಾನು ಸಿಎಂ ಆಗಿದ್ದೆ. ಅಧಿಕಾರ ದುರುಪಯೋಗ ಮಾಡಿಕೊಳ್ಳಬೇಕು ಎಂದು ನನಗೆ ಅನ್ನಿಸಿದ್ದರೆ ಆಗಲೇ ಆ ನಿವೇಶನವನ್ನು ನನ್ನ ಹೆಸರಿಗೆ ಬರೆಸಿಕೊಳ್ಳಬಹುದಾಗಿತ್ತು. ಆದರೆ, ಸಿದ್ದರಾಮಯ್ಯ ಅವರಂತೆ ನಾನು ಅಧಿಕಾರ ದುರುಪಯೋಗ ಮಾಡಿಕೊಳ್ಳಲಿಲ್ಲ ಎಂದು ತಿರುಗೇಟು ನೀಡಿದರು.

ಈ ನಿವೇಶನದ ಬಗ್ಗೆ ರಾಮಕೃಷ್ಣ ಹೆಗಡೆ ಅವರ ಕಾಲದಿಂದಲೂ ತನಿಖೆ ನಡೆಯುತ್ತಿದೆ. ಲೋಕಾಯುಕ್ತ, ಸಿಐಡಿ ತನಿಖೆಗಳು ನಡೆದು ಹೋಗಿವೆ. 500 ನಿವೇಶನಗಳನ್ನು ದೇವೇಗೌಡರು ಪಡೆದುಕೊಂಡಿದ್ದಾರೆ ಎಂದು ಅಪಪ್ರಚಾರ ಮಾಡಲಾಗಿತ್ತು. ಕೊನೆಗೆ ತನಿಖೆಯಲ್ಲಿ ಒಂದು ನಿವೇಶನವನ್ನಷ್ಟೇ ಪಡೆದುಕೊಂಡಿದ್ದಾರೆ ಎಂದು ಗೊತ್ತಾಯಿತು.

2012ರಲ್ಲಿ ನಾನು ಮುಡಾಕ್ಕೆ ಪತ್ರ ಬರೆದು ನನಗೆ ಹಂಚಿಕೆ ಮಾಡಿರುವ ನಿವೇಶನ ಕೊಡಿ ಎಂದು ಮನವಿ ಮಾಡಿದ್ದೆ. 2017ರಲ್ಲಿ ಮತ್ತೊಂದು ಪತ್ರವನ್ನೂ ಬರೆದಿದ್ದೆ. 40 ವರ್ಷವೇ ಆಗಿದೆ, ನಿವೇಶನ ಕೊಟ್ಟಿಲ್ಲ. ಈ ನಿವೇಶನವನ್ನು ಅವರು ನನಗೆ ಧರ್ಮಕ್ಕೆ ಕೊಡುತ್ತಿಲ್ಲ. ಅದಕ್ಕೆ ನಾನು 34,000 ರೂ. ಹಣ ಕಟ್ಟಿದ್ದೇನೆ. ಆ ಹಣ ಕಟ್ಟಿ 40 ವರ್ಷಗಳೇ ಆಗಿದೆ. ಇದು ನಿಜವಾದ ಪರಿಸ್ಥಿತಿ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಹೇಳಿದರು.

ಇಂದು ಬೆಂಗಳೂರಿನಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಆರ್ಭಟ ನೋಡಿದೆ. ಈ ವ್ಯಕ್ತಿ ಯಾವ ಹಿನ್ನೆಲೆಯಿಂದ ಬಂದಿರುವುದು ಎನ್ನುವುದು ನನಗೆ ಗೊತ್ತಿದೆ. ಬೆಂಗಳೂರು ನಗರದಲ್ಲಿ ಈ ಮಹಾಶಯ ಏನೆಲ್ಲಾ ಭ್ರಷ್ಟಾಚಾರ ಎಸಗಿದ್ದಾರೆ ಎಂದು ತೆಗೆದರೆ ಈ ವ್ಯಕ್ತಿಯ ಅಸಲಿ ಬಂಡವಾಳ ಗೊತ್ತಾಗುತ್ತದೆ. ಬೆಂಗಳೂರು ಸುತ್ತಮುತ್ತಾ ಮಾಡಿದ್ದಾರಲ್ಲ, ಅದನ್ನಷ್ಟೇ ತೆಗೆದಿಟ್ಟರೆ ಸಾಕು ಎಂದು ಕುಮಾರಸ್ವಾಮಿ ಭೈರತಿ ಸುರೇಶ್‌ಗೆ ತಿರುಗೇಟು ಕೊಟ್ಟರು. ನನ್ನ ಹೆಸರಿನಲ್ಲಿರುವ ನಿವೇಶನವನ್ನು ಬೇಕಿದ್ದರೆ ನೀವೇ ನಿಮ್ಮ ಮಗನಿಗೋ ಅಥವಾ ನಿಮ್ಮ ಧರ್ಮಪತ್ನಿ ಹೆಸರಿಗೋ ಅಥವಾ ನಿಮ್ಮ ಪರಮಾಪ್ತ ಭೈರತಿ ಸುರೇಶ್ ಹೆಸರಿಗೋ ಇಲ್ಲವೇ ಯಾವುದಾದರೂ ಅನಾಥಾಶ್ರಮಕ್ಕೋ ಬರೆದುಕೊಟ್ಟುಬಿಡಿ. ಯಾವ ತಕರಾರೂ ಇಲ್ಲ ಎಂದು ಸಿದ್ದರಾಮಯ್ಯ ಅವರಿಗೆ ಟಾಂಗ್ ಕೊಟ್ಟರು.

ಮಾನ ಬೀದಿಯಲ್ಲಿ ಹರಾಜು: ವಾಲ್ಮೀಕಿ ಹಗರಣ ಸಿದ್ದರಾಮಯ್ಯ ಸರಕಾರದ ಮಾನವನ್ನು ಬೀದಿಯಲ್ಲಿ ಹರಾಜು ಹಾಕಿದೆ. ಹಗರಣ ನಡೆದಿರುವ ಬಗ್ಗೆ ಸ್ವತಃ ಸಿಎಂ ಸಿದ್ದರಾಮಯ್ಯನವರೇ ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಹಾಗಾದರೆ ಹಗರಣದ ಜವಾಬ್ದಾರಿ ಯಾರು ಹೊರಬೇಕು? ಈ ಹಗರಣವನ್ನು ಮಾಡಿರುವವರು ಅಯೋಗ್ಯ ಅಧಿಕಾರಿಗಳು ಎಂದು ಹೇಳಿಕೆ ನೀಡಿದ್ದಾರೆ. ಅಂತಹ ಅಯೋಗ್ಯ ಅಧಿಕಾರಿಗಳನ್ನು ಇಟ್ಟುಕೊಂಡವರನ್ನು ಏನೆಂದು ಕರೆಯಬೇಕು ಎಂದು ಕುಮಾರಸ್ವಾಮಿ ಚಾಟಿ ಬೀಸಿದರು. ಅಧಿಕಾರಿ ಕಲ್ಲೇಶರನ್ನು ಅಮಾನತು ಮಾಡಿದ್ದೀರಿ. ಅವರ ಕೈಯ್ಯಲ್ಲಿ ಜಾರಿ ನಿರ್ದೇಶನಾಲಯದ ವಿರುದ್ಧ ಪೋಲಿಸರಿಗೆ ದೂರು ಕೊಡಿಸಿ, ಎಫ್‌ಐಆರ್ ಮಾಡಿಸಿದ್ದೀರಿ. ಅದಕ್ಕೆ ಹೈಕೋರ್ಟ್ ತಡೆ ನೀಡಿದೆ. ನಿಮಗೆ ಯಾರು ಈ ಐಡಿಯಾ ಕೊಟ್ಟರೋ ಗೊತ್ತಿಲ್ಲ. ಆದರೆ, ಅವರು ಸರಿಯಾದ ಐಡಿಯಾನಾದರೂ ನಿಮಗೆ ಕೊಡಬೇಕಿತ್ತು ಎಂದು ಸಿಎಂಗೆ ಕುಟುಕಿದರು. ಎಂಟು ಬಾರಿ ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದೇನೆ. ತೆರಿಗೆ ಪಾಲು, ರಾಜ್ಯದ ಹಣ ಬಿಡುಗಡೆ ಮಾಡಿ ಎಂದು ಕೇಳಿದ್ದೇನೆ. ಈ ಬಗ್ಗೆ ಕೇಂದ್ರ ಸರಕಾರ ಉತ್ತರ ಕೊಟ್ಟಿಲ್ಲ ಎಂದು ಹೇಳಿದ್ದೀರಲ್ಲ ಸಿದ್ದರಾಮಯ್ಯನವರೇ, ನಾನು ಪ್ರಾಮಾಣಿಕ ಎಂದು ಎಷ್ಟು ದಿನ ಹೇಳಿಕೊಳ್ಳುತ್ತೀರಿ. ಇದು ಮುಗಿದ ಆಟ. ಕಾಂಗ್ರೆಸ್‌ನವರು ಮೈಸೂರಿಂದ ಬೆಂಗಳೂರಿಗಲ್ಲ, ದೆಹಲಿಗೆ ಪಾದಯಾತ್ರೆ ಬರಲಿ ಎಂದು ಕುಮಾರಸ್ವಾಮಿ ಅವರು ವ್ಯಂಗ್ಯವಾಡಿದರು. ಮುಡಾ ಹಗರಣದ ವಿರುದ್ಧ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಜಂಟಿಯಾಗಿ ಹೋರಾಟ ನಡೆಸಲಿವೆ. ಈ ಬಗ್ಗೆ ರೂಪುರೇಷೆ ಸಿದ್ಧ ಮಾಡಲು ಎನ್‌ಡಿಎ ಸಭೆ ಕರೆದಿದ್ದೇವೆ ಎಂದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

WANTED
Job position- CHEFF OR HELPER
Qualifications-10th or PUC
Shop Name-Teaday
Address- New Kantaraj urs Road, Kavitha Bakery Circle, TK layout, Mysore
9718515635

LAND CARE SOLUTIONS
HOUSE FOR SALE
North / West Corner
3920 Sqft.
No. 1226, G&H Block, Kuvempunagar, Mysore
Call: 9845414842 | 0821-3137855

SITE FOR SALE
MUDA APPROVED 30X40 SOUTH FACE NISARGA LAYOUT BHUGATHA HALLI BANNUR ROAD MYSORE
9480191444
9620625734

LAND CARE SOLUTIONS
Site Sellers & Buyers in
HV Rajiv Township (HD Kote Road)
Shankarnagar (Kergalli - RT Nagar)
Nanjangud (Prime Location)
Call: 9845414842 | 0821-3137855

SCVT English Medium School
Rajendranagar, Mysore-07
WANTED
Science Teacher-01 (CBZ)
Computer Teacher-01 (BSC)
9964612301
Scvt8055@gmail.com

ವಧು ಬೇಕಾಗಿದೆ
52 ವರ್ಷ ಪ್ರಾಯದ ಶಿವಳ್ಳಿ ಬ್ರಾಹ್ಮಣ ಜಾತಿಯ ಶ್ರೀಮಂತ ವರನಿಗೆ 40 ರಿಂದ 45 ವರ್ಷದ ಪ್ರಾಯದ ವಧು ವಿಚ್ಛೇದಿತ ಮಕ್ಕಳಿಲ್ಲದ ಅದೇ ರೀತಿ ಒಕ್ಕಲಿಗ ಗೌಡ ಸಮಾಜ 40 ವರ್ಷ ಪ್ರಾಯದ ವರನಿಗೆ ವಿದ್ಯಾವಂತ ಕೃಷಿಕ ಮೈಸೂರಿನಲ್ಲಿ Real Estate ನಡೆಸುವ ವರನಿಗೆ ವಿಚ್ಛೇದಿತ ಮಕ್ಕಳಿಲ್ಲದ ವಧು ಬೇಕಾಗಿದೆ. ಮೇಲೆ ಹೇಳಿದ 2 ವರನಿಗೆ ಜಾತಿಯ ಅಭ್ಯಂತರವಿಲ್ಲ
8123559515

Sudarshan Saur SOLAR WATER HEATER
ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಪ್ರವೇಶ ತೆರೆದಿದೆ
DMLT, OT, IT, For SSLC/PUC Pass / Fail Students
B.voc (Bachelor of vocation)
all programs available
M. Voc Lab, B Pharm,
8073195952

airtel
WANTED
Sales promoter
Salary 18000/-
Incentive up to 5000/-
91085 81166

FORCE MOTORS — KSHATRIYA MOTORS
We are Hiring Job positions
Marketing Team Leaders / Sales Executives. **Location:** Mysore, Kodagu, Mandya, Chamarajanagar, Ramanagara.
Send your CV to:
kshatriyaforcesales@gmail.com
0821-2404555, 9632263202

SITE FOR SALE
NEW HOUSE READY FOR REGISTRATION
35X50, 30X50, 20X30, 30X40
9945321020

PROPERTIES FOR SALE
1) 30x40 East face site Srirampura 2nd Stage. Rs. 70 Lakhs.
2) 40x55 North face site, gated community, Ooty highway Nanjangud @ 36 Lakhs.
3) 3.5 acres developed coconut farm, 9 kms from Nanjangud temple @ 50 Lakhs / acre.
6366384851, 9113036910
Brokers Excuse

ಎಂಎಸ್ ನಾರಾಯಣ ಸ್ವೀಟ್ಸ್ ಗೆ ಕೆಲಸಕ್ಕೆ ಬೇಕಾಗಿದ್ದಾರೆ
ಅನುಭವವುಳ್ಳ ಸೇಲ್ಸ್ ಮ್ಯಾನ್‌ಗಳು. ಸೂಪರ್‌ವೈಸರ್‌ಗಳು ಮತ್ತು ಕ್ಯಾಷಿಯರ್‌ಗಳು ಅನುಭವವುಳ್ಳ ಅಸಿಸ್ಟೆಂಟ್ ಅಕೌಂಟೆಂಟ್ ಗಳು ಮತ್ತು ಟ್ಯಾಲಿ ಅಲ್ಲಿ ಅನುಭವ ಇರಬೇಕು..
ವಿಳಾಸ: ಕುವೆಂಪು ನಗರ ಉದಯರವಿ ರೋಡ್ ಅಪೋಸಿಟ್ ರಾಯಲ್ ಎನ್‌ಫೀಲ್ಡ್ ಶೋರೂಮ್..
ಈ ಕೂಡಲೇ ಕೆಳಕಂಡ ನಂಬರಿಗೆ ಕರೆ ಮಾಡಿ
7090700199, 7090700166

For Clearance Sale
ಪಾರ್ಲರ್ / ಚೇರ್ / ಸೋಫಾ / ಮಸಾಜ್ ಬೆಡ್ / Plywood / Rack, ಇತರ ವಸ್ತುಗಳು (For Sale) 2 Nos. / Cutting Chair / Massage bed / ಇತರೆ Electrical Items.
Call: 9972837203

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

Alpha School of Fashion Design Since 2020 Mysore
Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE
ADMISSION OPEN
*HOSTEL AND PG AVAILABLE
Alpha School of Fashion Design, No.65/2, Manandavadi Road, Near Ring Road Signal Junction, Srirampura, Mysore
782 993 7469

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನಿ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ಮಂತ್ರಾರುಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ವಿಶೇಷತೆ ಆರ್ಥೋಪೆಡಿಕ್ ಕ್ಲಿನಿಕ್
ಪಾದ ಮತ್ತು ಪಾದದ ಕೀಲಿನ ಸಮಸ್ಯೆಗಳಿಗೆ ಭೇಟಿ ಕೊಡಿ: ಮಹಾವೀರ್ ಪಾದ ಮತ್ತು ಪಾದದ ಕೀಲಿನ ಸೆಂಟರ್, ನಂ. 926, ವಿಶ್ವಧಾತ್ರಿ ರಸ್ತೆ, ವಿವೇಕಾನಂದನಗರ, ವಿವೇಕಾನಂದ ವೃತ್ತ, ಮೈಸೂರು-23. ಪ್ರತಿ ಮಂಗಳವಾರ ಬೆ: 9 ರಿಂದ ಮ: 12.
ಫಿಸಿಯೋಥೆರಪಿ ಪ್ರತಿದಿನ ಸಂಜೆ 5.30 PM - 8 PM. ಸಂದರ್ಶನಕ್ಕೆ ಕರೆ ಮಾಡಿ.
7204080539, 0821-4000961
Main Clinic ಬೆಂಗಳೂರಿನಲ್ಲಿ

R.S. Construction
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/- ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ.
9538575009, 7019151884

WANTED FOR FOOD MANUFACTURING INDUSTRY (HEBBAL)
a) Office Assistant
b) Door Delivery Executives
c) Sales Executives
d) Accountant / Admin.
Mysore, Mandya & Bengaluru
Mob: 8762851170

ಬೇಕಾಗಿದ್ದಾರೆ
ಮೈಸೂರಿನಲ್ಲಿ 32 ಅಡಿ ಕಂಟೈನರ್ ಮತ್ತು 11-10 ಅಡಿ ಕಂಟೈನರ್ ವಾಹನಗಳಿಗೆ ಟ್ರಕ್ ಡ್ರೈವರ್ಸ್ ಬೇಕಾಗಿದ್ದಾರೆ. ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ವಯಸ್ಸು 50 ವರ್ಷ ಮೇಲ್ಪಟ್ಟವರು ಅರ್ಜಿ ಹಾಕಬಹುದು. ಸಂಪರ್ಕಿಸಿ:
Mob: 9341623350

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್ : 9945911118
ಅನಿಲ್ : 7026996123
ARTHOR SERVICES PVT.LTD
No.L-89, 2nd Floor, M Block, Opp. Karuna Hospital, Kuvempunagar, Mysore-570023

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

JOBS VACANCIES
AT MYSORE (MARKETING)
Add: V2 Groups next to PSR Silks 2nd Floor Saraswatipuram 5th cross, Kantharaj Urs Road, Mysore
Email your biodata
v2groups.india@gmail.com
8880177778,9739973959

JOB JOB HIRING
GRAPHIC DESIGNER
Min 1 Year Experience
CorelDraw, Photoshop
Near : Shantala Theater, Mysore
Call : 6362422664

LIFE PARTNER ಆಗಲು ಶ್ರೀಮಂತ ವರನಿಗೆ ವಧು ಬೇಕಾಗಿದ್ದಾರೆ
ಲಿಂಗಾಯತ 49/5.6/ಡಾಕ್ಟರೇಟ್ ಪದವೀಧರ
Independent Well Settled
5 ಲಕ್ಷಕ್ಕಿಂತ ಅಧಿಕ ಆದಾಯ ಮತ್ತು ತೋಟ/ಮನೆ ಇರುವಂತಹ ವಿಚ್ಛೇದಿತ ವರನಿಗೆ ವಿದ್ಯಾವಂತೆ/ವಿಧವೆ/ವಿಚ್ಛೇದಿತೆ/ ನೌಕರಸ್ಥೆ/ಬಡವೆ/ವಧು ಬೇಕು ಯಾವುದೇ ಜಾತಿಯ ಅಭ್ಯಂತರವಿಲ್ಲ ಮಕ್ಕಳಿದ್ದರು ಪರವಾಗಿಲ್ಲ.
ಮೈಸೂರು 9480385742, 9742458242

ತಕ್ಷಣ ಬೇಕಾಗಿದ್ದಾರೆ
L&T ಮತ್ತು Rane Madras ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ & ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು. ಸಂಬಳ:
ಸೂಪರ್ ವೈಸರ್- 20,000+W/o (8hrs)
ಗಾರ್ಡ್- 19000+W/o (8hrs)
ಊಟ ತಿಂಡಿ ಸೌಲಭ್ಯ ಇರುತ್ತದೆ
9880727819
9620667819

WANTED
FEMALE - TELECALLERS
MALE - EXECUTIVE
Mob: 9845028614

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

REQUIRED
For a Reputed firm in Hebbal Industrial estate Mysore
Driver cum delivery Boy - 1 No.
Qualification SSLC / PUC / any Degree. Experience minimum 2-3 years.
Mob: 9972029007

REQUIRED
For a Reputed firm in Hebbal Industrial Estate, Mysore
Marketing Executive (Male) - 3 Nos.
Qualification : ITI / Diploma / Degree. Experience minimum : 1-2 years. Freshers can also apply. Excellent communication in Kannada / English / Hindi. Salary 20000-25000.
Mob: 9972029007

ತೋಟ ಮಾರಾಟಕ್ಕಿದೆ
ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಸಂಗಂ ರಸ್ತೆ
8722860011
Brokers Excuse

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಟಿವಿಎಸ್ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು
ಸಂಬಳ: 18000/- W/o 8 hours
ಊಟ ತಿಂಡಿ ವಸತಿ ಸೌಲಭ್ಯ ಇರುತ್ತದೆ.
ವಯೋಮಿತಿ: 50 ವರ್ಷದೊಳಗೆ
9620777819
9620667819

ಬೇಕಾಗಿದ್ದಾರೆ
ಟೈಲ್ಸ್ ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
SSLC ಮೇಲ್ಪಟ್ಟು
ಅನುಭವವುಳ್ಳವರು ದಟ್ಟಗಳ್ಳಿ ನೇತಾಜಿ ಸರ್ಕಲ್ ಮೈಸೂರು
9353756586

ಸೈಟುಗಳು ಮಾರಾಟಕ್ಕಿವೆ
30x40 ಅಳತೆಯ ಸೈಟುಗಳು ಹೆಚ್.ಡಿ. ಕೋಟೆ ರೋಡ್, ತಳೂರು ಹತ್ತಿರ ಮಾರಾಟಕ್ಕಿವೆ. ಸಂಪರ್ಕಿಸಿ:
7022718593, 8088702979

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ - 4
2) ಸೆಕ್ಯೂರಿಟಿ ಗಾರ್ಡುಗಳು - 10
3) ಸೆಕ್ಯೂರಿಟಿ ಫೀಲ್ಡ್ ಆಫೀಸರ್ - 2
ಉಚಿತ ವಸತಿ / ಊಟ.
9611236261, 9686422400

Wanted Teachers
Jnanajyothi Vidyalaya
Beerihundi (English Medium)
Montessori / NST Teachers.
Any Degree, D.Ed. Teacher are can contact immediately.
9845390377, 8197057626

ಸೈಟುಗಳು ಮಾರಾಟಕ್ಕಿದೆ
30x40, 30x50 ಅಳತೆಯ ಸೈಟುಗಳು, ಆದಿಲಿಂಗೇಶ್ವರ ಬಡಾವಣೆ, ಗುಂಡ್ಲುಪೇಟೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ:
8088176638, 9591429166

ಸೈಟುಗಳು ಮಾರಾಟಕ್ಕಿವೆ
ಭೋಗಾದಿ ಮುಖ್ಯ ರಸ್ತೆಗೆ ಹತ್ತಿರವಾದಂತೆ ಮನೆ ಕಟ್ಟಲು ಸಿದ್ಧವಿರುವ 30x40, 30x50 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
8660160225, 8088187466

WANTED HEALTHCARE SALES EXECUTIVE / OFFICE ASST/ MALE OR FEMALE
AT MYSORE / MANDYA / HASSAN / NEED BUSINESS DEVELOPMENT EXECUTIVE / OFFICE ASST/ MALE OR FEMALE FRESH OR HAVING SALES & SUPPLY EXPERIENCE IN DIAGNOSTIC / HEALTHCARE / PHARMA OR MEDICAL DEVICES/ PART TIME PERSON CAN ALSO APPLY. SEND CV TO
myfamilycustomercare@gmail.com
888-464-5218

DOCUMENT LOST
Janhavi C.Gowda W/o Raghu T.N # 625, 2nd Main, Giridarshini Layout, Alanahalli, Mysuru-28
We have lost original Sale deed of (from Champaka. R) Site No.417/ 360/9, SI No.110 Pg 32-35 Book 1 2583
7411146295

ಸೈಟುಗಳು ಮಾರಾಟಕ್ಕಿವೆ
ಬನ್ನೂರು ಮುಖ್ಯ ರಸ್ತೆಗೆ ಹತ್ತಿರವಾದಂತೆ ATME ಕಾಲೇಜ್ ಹಿಂಭಾಗ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9019562901, 8217596732

SITE FOR SALE
BVL Premio phase 2 East face 30*50
Attches to Sardar Vallbhai Patel Nagar
8884138884

FOR SALE
1. Properties at Kuvempu Nagar Starting @ 45L
2. 30x40 & 30x50 Near Varuna Lake
3. 30x50 Sites at Brahmins Layout
4. 30x30 New House at Vijaya Nagar
5. Properties For Sale at Vidyaranyapuram
6. 20x30 Site Near SBM Lyt, Bogadhi
7. 30x40 Site at Kandhaya Lyt, Srirampura
8. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

WANTED
We require Office Assistant with basic knowledge of Computer Operation, Qualification SSLC Pass. We Also require Assistant Accountant with knowledge of Computer Operation and Tally, Qualification B.Com graduate
Address: Mys Tech Machines @ Q113, 4th Cross, 8th Main, Hebbal Industrial Estate, Mysore-570016
E-mail:mystechmachines@gmail.com
0821-2582668,7204445679

ಸೈಟುಗಳು ಮಾರಾಟಕ್ಕಿವೆ
30x40, 30x50, E/N ದ್ವಾರಕನಗರ, ಶ್ರೀರಾಂಪುರ ಹಾಗೂ ಭೋಗಾದಿ ರಸ್ತೆ ರೈನ್ ಭೋ ಸ್ಕೂಲ್ ಹತ್ತಿರ ಸುವರ್ಣ ನಗರ
9611881632

ವಧು-ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಸುವರ್ಣಾವಕಾಶ
ಮೈಸೂರಿನಲ್ಲಿ ನೂತನವಾಗಿ ಶುರುವಾಗಿರುವ ಕಂಪನಿ & ಆಫೀಸ್‌ಗಳಿಗೆ Packing, Helper, Quality, Telephone attenders, Receptionist, Typing, Drivers etc ಮುಂತಾದ ಕೆಲಸಗಳಿಗೆ 7th, 10th, puc, Diploma, Any Degree, Pass / Fail ಆದ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ: 14500/- 39500/- (ESI+PF OT)
6364103418,9513829246

SITE FOR SALE
VIJAYANAGAR 4th Stage
30x40 West Facing,
MUDA Allotted Site
Near Marimallappa School
8660105902

SITES for SALE
JP Nagar Ring Road
30x40
33 Lakhs
Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

SITE FOR SALE
54/52 MUDA Allotment Site For Sale In Kuvempunagar Mysore
30/60 Site For Sale In Hootgalli Mysore
PH: 9900464111

SITE FOR SALE
Kuvempunagar M Block
30x45, West
South Corner, MUDA Site, 40 Feet Road Both Sides,
Price -1.49 Cr
8660105902

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ನಗರದ ಕೂರ್ಗಳ್ಳಿ, ಹೂಟಗಳ್ಳಿ, ಮೇಟಗಳ್ಳಿ, ಹಿನಕಲ್ ಕೈಗಾರಿಕಾ ಪ್ರದೇಶಗಳಲ್ಲಿ ಸೆಕ್ಯೂರಿಟಿ ಗಾರ್ಡ್, ಹೌಸ್‌ಕೀಪಿಂಗ್ ಲೇಬರ್ Helper, Computer Operator 7th, 10th, PUC & Any Degree Pass & Fail ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ದೂರದಿಂದ ಬಂದವರಿಗೆ ಉಚಿತ ವಸತಿ ಸೌಲಭ್ಯವಿದೆ. ESI & PF ಸೌಲಭ್ಯವಿದೆ. ಕೋ-ಆಪರೇಟಿವ್ ಸೊಸೈಟಿ ಹಿನಕಲ್ ಇಲ್ಲಿ ಕೆಲಸ ಮಾಡಲು ಬಿ.ಕಾಂ ವಿದ್ಯಾಭ್ಯಾಸವುಳ್ಳ ಪುರುಷರು/ಮಹಿಳೆಯರು Marketing Officer, Business Development Officer ಬೇಕಾಗಿದ್ದಾರೆ.
9611208553,9036461347
7760119820

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು
1) G.F-2BHK
2) F.F - 2BHK
ರೈಲ್ವೇ ಲೇಔಟ್ ಜೆ.ಪಿ.ನಗರ ಮೈಸೂರು
9538956060
8660108796

ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ, ಖರ್ಜೂರ, ಅಂಜೂರ ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ.
(5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
9845460211
7022293342

ಬಾಡಿಗೆಗೆ
1000 ಚ.ಅಡಿಯುಳ್ಳ 1st Floor ನಲ್ಲಿ ಕಛೇರಿ ಉಪಯೋಗಕ್ಕೆ ಬಾಡಿಗೆಗೆ ಇರುತ್ತದೆ. ರಾಮಕೃಷ್ಣನಗರ, ಅರ್ಕಿಡ್ಸ್ ಶಾಲೆ ಹತ್ತಿರ
9844775166

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್-10th /PUC (ಕುವೆಂಪುನಗರ, ಮೇಟಗಳ್ಳಿ, ವರುಣ, ದಂಡಿಕೆರೆ, ಸುತ್ತೂರು, ಕೆ.ಆರ್.ಎಸ್)
2) ಗಾರ್ಡನ್ ಕಟ್ಟರ್ (ಮೇಟಗಳ್ಳಿ)
ESI, PF + W/off ಸೌಲಭ್ಯವಿರುತ್ತದೆ.
9739166772
9880419847

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 15,000/-
7899754149

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಗ್ಯಾರಂಟಿಗೆ ಎಸ್‌ಸಿಪಿ, ಟಿಎಸ್‌ಪಿ ಅನುದಾನ ಬಳಕೆ ವಿರೋಧಿಸಿ
ನಂ.ಗೂಡಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ



ಸರ್ಕಾರದ ವಿರುದ್ಧ ದಲಿತ ಸಂಘಟನೆಗಳ ಸಮನ್ವಯ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಂಜನಗೂಡು, ಜು.26– ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಎಸ್‌ಸಿಪಿ ಹಾಗೂ ಟಿಎಸ್‌ಪಿ ಅನುದಾನ ಬಳಸಿಕೊಳ್ಳುವ ಮೂಲಕ ಪರಿಶಿಷ್ಟ ಸಮುದಾಯಕ್ಕೆ ವಂಚನೆ ಮಾಡಿದೆ ಎಂದು ಆರೋಪಿಸಿ ದಲಿತ ಸಂಘಟನೆಗಳ ಸಮನ್ವಯ ಸಮಿತಿ ಕಾರ್ಯಕರ್ತರು ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಮಿನಿವಿಧಾನಸೌಧ ಆವರಣದಲ್ಲಿರುವ ತಾಲೂಕು ಕಚೇರಿ ಮುಂಭಾಗ ಸಂಘಟಿತರಾದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆ ಅಧ್ಯಕ್ಷ ಮಂಜು ಶಂಕರಪುರ ಮತ್ತಿತರರು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ವರ್ಗದವರ ಬೆಂಬಲ ಪಡೆದು 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ನಂತರ ದಲಿತರಿಗಾಗಿ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡು ಸಮುದಾಯದ ಜನರನ್ನು ವಂಚಿಸಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಪರಿಶಿಷ್ಟ ಜಾತಿ, ವರ್ಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೆರವು ನೀಡಿಲ್ಲ ಹಾಗೂ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ಜಾರಿಗೊಳಿಸಿಲ್ಲ. ಆದ್ದರಿಂದ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರು ಅಸಮಾಧಾನಗೊಂಡಿದ್ದಾರೆ ಎಂದು ದೂರಿದರು. ಇದೇ ವೇಳೆ ಬೇಡಿಕೆ ಈಡೇರಿಸುವಂತೆ ಸಿಎಂ ಸಿದ್ದರಾಮಯ್ಯನವರಿಗೆ ಮನವಿ ಮಾಡಿರುವ ಪತ್ರವನ್ನು ತಹಸೀಲ್ದಾರ್‌ಗೆ ಹಸ್ತಾಂತರಿಸುವ ಮೂಲಕ ಪ್ರತಿಭಟನೆ ಅಂತ್ಯಗೊಳಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಗೌರವಾಧ್ಯಕ್ಷ ಗೀಕಳ್ಳಿ ಮಹದೇವಸ್ವಾಮಿ, ಕಂದೇಗಾಲ ಶಿವಣ್ಣ ಉಪಾಧ್ಯಕ್ಷ ಎಂ.ರಾಜಶೇಖರ್, ಕಾರ್ಯಾಧ್ಯಕ್ಷ ನಾಗೇಂದ್ರ ಬಸವಟ್ಟಿಗೆ, ಪ್ರಧಾನ ಕಾರ್ಯದರ್ಶಿ ಆಲತ್ತೂರು ಶಿವರಾಜು, ಜೆ.ಮಹದೇವಕುಮಾರ್, ರಾಜೇಶ್ ಹರದನಹಳ್ಳಿ, ಸಿದ್ದರಾಜು ಹುಸ್ಕೂರು, ಡಿ.ಪ್ರಭುಸ್ವಾಮಿ, ಶಿವಸ್ವಾಮಿ, ಬಿ.ಆರ್.ಮಹದೇವಸ್ವಾಮಿ, ದೇವರಸನಹಳ್ಳಿ ಮಹದೇವಸ್ವಾಮಿ, ಮೂಡಹಳ್ಳಿ ಮಹದೇವು, ಮಹದೇವಸ್ವಾಮಿ, ಗಟ್ಟವಾಡಿ ಮಹೇಶ್, ಮುಳ್ಳೂರು ಸ್ವಾಮಿ, ಪ್ರಕಾಶ್ ಮತ್ತಿತರರಿದ್ದರು.

ಸರಗೂರಲ್ಲಿ ಕಾರ್ಗಿಲ್ ವಿಜಯೋತ್ಸವ



ಸರಗೂರಲ್ಲಿ ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಪಂಜಿನ ಮೆರವಣಿಗೆ ನಡೆಯಿತು.

ಸರಗೂರು, ಜು.26– ಕಾರ್ಗಿಲ್ ವಿಜಯದ 25ನೇ ವಾರ್ಷಿಕೋತ್ಸವ ಅಂಗವಾಗಿ ಪಟ್ಟಣದಲ್ಲಿ ಬಿಜೆಪಿ ಯುವ ಮೋರ್ಚಾ ವತಿಯಿಂದ ಪಂಜಿನ ಮೆರವಣಿಗೆ ನಡೆಯಿತು.

ಭಜರಂಗದಳ ಮುಖಂಡ ಆನಂದ್ ವೈಲಾರಿ ಮಾತನಾಡಿ, 1999ರಲ್ಲಿ ದೇಶದ ಕಾರ್ಗಿಲ್ ಶಿಖರಗಳ ಮೇಲೆ ಪಾಕ್ ಸೈನಿಕರು ಆಕ್ರಮಣ ಮಾಡಿದರು. ಈ ವೇಳೆ ಅಧಿಕಾರದಲ್ಲಿದ್ದ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ಯುದ್ಧಕ್ಕೆ ಕರೆ ನೀಡಿತು. ಈ ವೇಳೆ ನಡೆದ ಯುದ್ಧದಲ್ಲಿ ಅಂತಿಮವಾಗಿ ಭಾರತ ಜು.26ರಂದು ಜಯ ಗಳಿಸಿತು. ಯುದ್ಧದಲ್ಲಿ ಭಾರತೀಯ ಸೈನ್ಯ 526 ಸೈನಿಕರನ್ನು ಕಳೆದುಕೊಂಡಿತು. ಹಲವು ಸೈನಿಕರು ಅಂಗಾಂಗಗಳನ್ನು ಕಳೆದುಕೊಂಡರು. ಪಾಕಿಸ್ತಾನದ ವಿರುದ್ಧದ ವಿಜಯದ ಸವಿನೆನಪಿಗಾಗಿ ಇಂದು ಕಾರ್ಗಿಲ್ ವಿಜಯೋತ್ಸವ ಆಚರಿಸುತ್ತಿದ್ದೇವೆ ಎಂದರು.

ಈ ವೇಳೆ ಸರಗೂರು ಮಂಡಲ ಅಧ್ಯಕ್ಷ ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿ ಲೋಕೇಶ್, ಪ್ರಕಾಶ್, ರಾಜ್ಯ ಕಾರ್ಯಕಾರಣಿ ಸದಸ್ಯೆ ಸುನಂದಾ, ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಲಕ್ಷ್ಮಣ್, ಕಾರ್ಯದರ್ಶಿ ಮಂಜುನಾಥ್, ಅನಿಲ್, ಜಿಲ್ಲಾ ಯುವ ಮೋರ್ಚಾ ಕಾರ್ಯದರ್ಶಿ ಕೃಷ್ಣಪ್ಪ, ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯ ನೂರಾಳಸ್ವಾಮಿ, ಮಂಡಲ ಉಪಾಧ್ಯಕ್ಷ ಬಸವಣ್ಣ, ರವಿಕುಮಾರ್ ಹೆಚ್.ಸಿ., ಸರಗೂರು ತಾಲೂಕು ಯುವ ಮೋರ್ಚಾ ಅಧ್ಯಕ್ಷ ಚೇತನ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಗೋವಿಂದನಾಯಕ, ರೈತ ಮೋರ್ಚಾ ಅಧ್ಯಕ್ಷ ಶಿವಶಂಕರ್, ಶ್ಯಾಮ್, ಸ್ವಾಮಿ, ಯುವ ಮುಖಂಡರಾದ ರಾಮ್, ಶ್ರೀನಾಥ್, ನೂರಾಳಸ್ವಾಮಿ, ಆನಂದ್, ಅಭಿ, ವಿರಾಜ್ ನಾಯಕ, ಕೃಷ್ಣ ನಾಯಕ, ಸಿದ್ದನಾಯಕ, ಗಣಪತಿ ಹಂಚೀಪುರ, ಹಿರಿಯ ಮುಖಂಡರು ಮತ್ತು ಕಾರ್ಯಕರ್ತರು ಇದ್ದರು.

ಆಷಾಢ ಶುಕ್ರವಾರ: ಶ್ರೀಮುತ್ತುಮಾರಮ್ಮನಿಗೆ ವಿಶೇಷ ಪೂಜೆ



ಸರತಿ ಸಾಲಿನಲ್ಲಿ ನಿಂತು ಭಕ್ತರು ದೇವರ ದರ್ಶನ ಪಡೆದರು.

ಹುಣಸೂರು, ಜು.26– ಆಷಾಢ ಮಾಸದ 3ನೇ ಶುಕ್ರವಾರ ಅಂಗವಾಗಿ ನಗರದ ಶ್ರೀಮುತ್ತುಮಾರಮ್ಮನಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಮುಂಜಾನೆಯೇ ದೇವಿಗೆ ಅಭಿಷೇಕ, ವಿಳ್ಯದೆಲೆ ಅಲಂಕಾರ ಮಾಡಿ ಪೂಜೆ ನೆರವೇರಿಸಿದ ಬಳಿಕ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವಿ ದರ್ಶನ ಪಡೆದರು. ಈ ವೇಳೆ ಸಂಗೊಳ್ಳಿ ರಾಯಣ್ಣ ಯುವಕರ ಸಂಘದಿಂದ ಭಕ್ತರಿಗೆ 5 ಸಾವಿರ ಲಾಡುಗಳನ್ನು ವಿತರಿಸಲಾಯಿತು. ಶ್ರೀನಿವಾಸ್ ಹಾಗೂ ತಂಡದಿಂದ ಭಕ್ತಿಗೀತೆಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅಲ್ಲದೇ ಸಾವಿರಾರು ಭಕ್ತರು ತುಪ್ಪದ ದೀಪ ಹಚ್ಚಿ, ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿ ದೇವಿ ಕೃಪೆಗೆ ಪಾತ್ರರಾದರು.

ಈ ವೇಳೆ ಶ್ರೀಮುತ್ತುಮಾರಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಹೆಚ್.ವೈ ಮಹದೇವ, ಪ್ರಧಾನ ಕಾರ್ಯದರ್ಶಿ ಅಶೋಕ್ ರಾಜಲಿಂಗಯ್ಯ, ಸಂಗೊಳ್ಳಿ ರಾಯಣ್ಣ ಯುವಕರ ಸಂಘದ ಪದಾಧಿಕಾರಿಗಳು, ದೇವಸ್ಥಾನ ಟ್ರಸ್ಟ್ ಪದಾಧಿಕಾರಿಗಳು ಹಾಜರಿದ್ದರು.

ಮೂಗೂರು ಶ್ರೀತ್ರಿಪುರ ಸುಂದರಿ ಅಮ್ಮನಿಗೆ ವಿಶೇಷ ಪೂಜೆ



ಮೂಗೂರು, ಜು.26– 3ನೇ ಆಷಾಢ ಶುಕ್ರವಾರ ಅಂಗವಾಗಿ ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಬೆಳಗ್ಗೆಯಿಂದಲೇ ಅಮ್ಮನವರಿಗೆ ಅಭಿಷೇಕ ನೆರವೇರಿಸಿ, ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಈ ವೇಳೆ ಸರತಿ ಸಾಲಿನಲ್ಲಿ ನಿಂತು ಸಾವಿರಾರು ಭಕ್ತರು ದೇವರ ದರ್ಶನ ಮಾಡಿದರು. ಈ ಸಂದರ್ಭ ಗ್ರಾಮದ ಎಂ.ಬಿ.ಶ್ರೀಕಂಠ ಸ್ವಾಮಿ, ಸುಶೀಲಮ್ಮ ಕುಟುಂಬ ವರ್ಗ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದರು.

ತಿ.ನರಸೀಪುರವನ್ನು ಮಾದರಿ ಕ್ಷೇತ್ರವಾಗಿಸಿ
ಸಚಿವ ಮಹದೇವಪ್ಪನವರಿಗೆ ಕಾಂಗ್ರೆಸ್ ಮುಖಂಡರ ಮನವಿ



ತಿ.ನರಸೀಪುರ ಅಭಿವೃದ್ಧಿಗೆ ಒತ್ತಾಯಿಸಿ ಸಚಿವ ಹೆಚ್.ಸಿ. ಮಹದೇವಪ್ಪ ಅವರಿಗೆ ಕಾಂಗ್ರೆಸ್ ಮುಖಂಡರು ಮನವಿ ಸಲ್ಲಿಸಿದರು.

ತಿ.ನರಸೀಪುರ, ಜು.26– ಕಳೆದೆರಡು ದಶಕಗಳಿಂದ ರಾಜಕೀಯವಾಗಿ ಬೆಳೆಸಿರುವ ತಿ.ನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ತಂದು ಮಾದರಿ ಕ್ಷೇತ್ರವಾಗಿ ಅಭಿವೃದ್ಧಿಪಡಿಸಬೇಕು ಎಂದು ಕ್ಷೇತ್ರದ ಕಾಂಗ್ರೆಸ್ ಮುಖಂಡರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿದರು.

ವಿಧಾನಸೌಧದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಸಚಿವರ ಕಚೇರಿಗೆ ಭೇಟಿ ನೀಡಿದ ಸೋಸಲೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ, ಕೆಪಿಸಿಸಿ ಸದಸ್ಯ ದೊಡ್ಡಬಾಗಿಲು ಎಂ.ಮಲ್ಲಿಕಾರ್ಜುನ ಸ್ವಾಮಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಮುಖಂಡರು, ಕಳೆದ 2 ದಶಕಗಳಿಂದ ನಿಮಗೆ ತಿ.ನರಸೀಪುರ ಮತದಾರರು ಆಶೀರ್ವಾದ ಮಾಡಿದ್ದಾರೆ. ಇದೀಗ ನಿಮ್ಮ ಪುತ್ರ ಸುನೀಲ್ ಬೋಸ್ ಅವರನ್ನು ಸಂಸದರನ್ನಾಗಿ ಮಾಡಲು ಸಹಕರಿಸಿದ್ದಾರೆ. ಹೀಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಪುರಸಭಾ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ವಾಟಾಳು ಗ್ರಾಪಂ ಮಾಜಿ ಅಧ್ಯಕ್ಷ ನಾಗೇಶ್ ಹಾಗೂ ಹೆಮ್ಮಿಗೆ ಗ್ರಾಪಂ ಮಾಜಿ ಅಧ್ಯಕ್ಷ ಅಕ್ಕೂರು ಗುರುಮೂರ್ತಿ, ಉಕ್ಕಲಗೆರೆ ಗ್ರಾಪಂ ಮಾಜಿ ಸದಸ್ಯ ರಾಜು ಹಾಗೂ ಕಾಂಗ್ರೆಸ್ ಯುವ ಮುಖಂಡ ಚೌಹಳ್ಳಿ ಮಲ್ಲೇಶ್ ಸೇರಿದಂತೆ ಇನ್ನಿತರರಿದ್ದರು.

ಇಂದು ಗುರುವಂದನಾ ಕಾರ್ಯಕ್ರಮ

ಚುಂಚನಕಟ್ಟೆ, ಜು.26– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಪ್ರೌಢಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಶಾಲೆಯಲ್ಲಿ ಜು.27 ರಂದು ಗುರುವಂದನಾ ಮತ್ತು ಸ್ನೇಹ ಬಂಧನ ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಳಗ್ಗೆ 11 ಗಂಟೆಗೆ ಶಾಲಾವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಕಾರಿಣಿ ಸಮಿತಿ ಸದಸ್ಯ ದೊಡ್ಡ ಸ್ವಾಮೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಡಿಡಿಪಿಐ ಎಸ್.ಟಿ.ಜವರೇಗೌಡ, ಬಿಇಓ ಆರ್. ಕೃಷ್ಣಪ್ಪ, ಕುಪ್ಪೆ ಗ್ರಾಪಂ ಅಧ್ಯಕ್ಷೆ ಸವಿತಾ, ಉಪಾಧ್ಯಕ್ಷೆ ಗೀತಾ ಮತ್ತಿತರರು ಭಾಗವಹಿಸುವರು. ಕಾರ್ಯಕ್ರಮದಲ್ಲಿ ಪ್ರೌಢಶಾಲಾ ನಿವೃತ್ತ ಶಿಕ್ಷಕರು ಮತ್ತು ಆದಿ ಚುಂಚನಗಿರಿ ಗುರುಕುಲ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕರನ್ನು ಅಭಿನಂದಿಸಲಾಗುವುದು. ಇದರೊಂದಿಗೆ ಶಾಲೆಯಲ್ಲಿ ಅಧ್ಯಯನ ಮಾಡಿರುವ ಜೀವಿತ ವಯೋವೃದ್ಧ ಸದಸ್ಯರು ಮತ್ತು ಸಾಧಕರನ್ನು ಗೌರವಿಸಲಾಗುತ್ತದೆ.

ಕಾರ್ಯಕ್ರಮಕ್ಕೆ ಚುಂಚನಕಟ್ಟೆ ಸರ್ಕಾರಿ ಪ್ರೌಢಶಾಲೆಯ ಎಲ್ಲಾ ಹಳೆಯ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಸಂಘದ ಅಧ್ಯಕ್ಷ ಕೆ.ಹೆಚ್.ಜಯರಾಮೇಗೌಡ ಮನವಿ ಮಾಡಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜು.26– ತಾಲೂಕು ಕುರುಬರ ಸಂಘದಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ತಾಲೂಕಿನ ಕುರುಬ ಸಮುದಾಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ಆ.15ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದ್ದು, ಆ.5 ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಮೊ.8458771223, 7760031209 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಹಿರೀಕ್ಯಾತನಹಳ್ಳಿ ಕೆರೆಗೆ ಟಿಪ್ಪರ್ ಪಲ್ಟಿ



ಕೆರೆಗೆ ಟಿಪ್ಪರ್ ಉರುಳಿರುವುದು.

ಹಿರೀಕ್ಯಾತನಹಳ್ಳಿ, ಜು.26– ಚಾಲಕನ ನಿಯಂತ್ರಣ ಕಳೆದುಕೊಂಡ ಟಿಪ್ಪರ್ ಕೆರೆಗೆ ಪಲ್ಟಿಯಾಗಿರುವ ಘಟನೆ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ. ಎಂ.ಸ್ಯಾಂಡ್ ತುಂಬಿಕೊಂಡು ಬರುತ್ತಿದ್ದ ಟಿಪ್ಪರ್ ಗ್ರಾಮದ ಕೆರೆ ಏರಿ ಮೇಲೆ ತೆರಳುತ್ತಿದ್ದ ವೇಳೆ ಎದುರಿನಿಂದ ಬಂದ ಕೆಎಸ್‌ಆರ್‌ಟಿಸಿ ಬಸ್‌ಗೆ ದಾರಿ ನೀಡುವ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಟಿಪ್ಪರ್ ಕೆರೆಗೆ ಪಲ್ಟಿಯಾಗಿದೆ. ಈ ವೇಳೆ ಟಿಪ್ಪರ್ ಚಾಲಕ ಹುಣಸೂರು ಕಲ್ಕುಣಿಕೆ ಬಡಾವಣೆ ನಿವಾಸಿ ಮುರಗೇಶ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಹುಣಸೂರಿನಿಂದ ಹರವೆ ರಾಮೇನಹಳ್ಳಿಗೆ ತೆರಳುವ ಈ ಮಾರ್ಗದಲ್ಲಿ ಕೆರೆ ಏರಿ ಮೇಲಿನ ರಸ್ತೆ ತುಂಬಾ ಚಿಕ್ಕದಾಗಿದ್ದು, ಒಂದು ವಾಹನ ಬಂದರೆ ಮತ್ತೊಂದು ವಾಹನ ಚಲಿಸುವುದು ಕಷ್ಟವಾಗಿದೆ. ಪದೇ ಪದೆ ಈ ರೀತಿಯ ಅವಘಡಗಳು ಸಂಭವಿಸುವುದರಿಂದ ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಸಮರ್ಪಕ ರಸ್ತೆ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಧಾರಾಕಾರ ಮಳೆಗೆ ಮನೆ ಜಲಾವೃತ



ಶ್ರೀನಿವಾಸ್ ಅವರ ಮನೆ ಜಲಾವೃತ್ತವಾಗಿರುವುದು.

ಹೆಚ್.ಡಿ.ಕೋಟೆ, ಜು.26– ಧಾರಾಕಾರ ಮಳೆಗೆ ಮನೆ ಜಲಾವೃತ್ತವಾಗಿರುವ ಘಟನೆ ತಾಲೂಕಿನ ಎನ್.ಬೇಗೂರು ಗ್ರಾಪಂ ವ್ಯಾಪ್ತಿಯ ಗೆಂಡತ್ತೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶ್ರೀನಿವಾಸ್ ಎಂಬುವರ ಮನೆ ಜಲಾವೃತ್ತವಾಗಿರುವುದು. ದಿನಬಳಕೆ ವಸ್ತುಗಳು ನೀರು ಪಾಲಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ.

ಮನೆ ಮಾಲೀಕ ಶ್ರೀನಿವಾಸ್ ಮಾತನಾಡಿ, ಧಾರಾಕಾರ ಮಳೆಗೆ ನೀರು ಮನೆಗೆ ನುಗ್ಗಿ ಮನೆಯಲ್ಲಿದ್ದ ಪದಾರ್ಥಗಳೆಲ್ಲಾ ಸಂಪೂರ್ಣ ಹಾಳಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಈ ಸಂಬಂಧ ಎನ್.ಬೇಗೂರು ಗ್ರಾಪಂ ಅಧಿಕಾರಿಗಳಿಗೆ ತಿಳಿಸಿದರೂ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಕಪ್ಪಸೋಗೆಯಲ್ಲಿ ಚಿರತೆ ಮರಿ ರಕ್ಷಣೆ



ನಂಜನಗೂಡು, ಜು.26– ಮರದ ಕೊಂಬೆಗೆ ಸಿಲುಕಿ ಒದ್ದಾಡುತ್ತಿದ್ದ 6 ತಿಂಗಳ ಚಿರತೆ ಮರಿಯನ್ನು ಶುಕ್ರವಾರ ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿದ್ದಾರೆ. ತಾಲೂಕಿನ ಕಪ್ಪಸೋಗೆ ಗ್ರಾಮದ ಪುಟ್ಟಯ್ಯ ಎಂಬುವರ ಜಮೀನಿನಲ್ಲಿ ಚಿರತೆ ಮರಿ ಮರದ ಕೊಂಬೆಗೆ ಸಿಲುಕಿ ಒದ್ದಾಡುತ್ತಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಮರಿ ರಕ್ಷಿಸಿದ್ದಾರೆ. ಡಿಆರ್‌ಎಫ್ ವಿನೋದ್ ಮಾತನಾಡಿ, ಚಿರತೆ ಮರಿ ಆರೋಗ್ಯವಾಗಿದ್ದು, ಕಾಲಿಗೆ ಗಾಯವಾಗಿದೆ. ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.

ಶಿಸ್ತು ರೂಢಿಸಿಕೊಂಡರೆ ಉನ್ನತ ಸಾಧನೆ ಸಾಧ್ಯ



ಶಾಲೆಯಲ್ಲಿ ವಿದ್ಯಾರ್ಥಿ ಸಂಘ ಉದ್ಘಾಟಿಸಲಾಯಿತು.

ನಂಜನಗೂಡು, ಜು.26– ವಿದ್ಯಾರ್ಥಿಗಳು ಜೀವನದಲ್ಲಿ ಸಂಯಮ, ಶಿಸ್ತು ರೂಢಿಸಿಕೊಂಡರೆ ಉನ್ನತ ಸಾಧನೆ ಸಾಧ್ಯ ಎಂದು ಕಾಂಗ್ರೆಸ್ ಮುಖಂಡ ನಂದಕುಮಾರ್ ತಿಳಿಸಿದರು.

ನಗರದ ಜೆಎಸ್‌ಎಸ್ ಬಾಲಕಿಯರ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಶುಕ್ರವಾರ ವಿದ್ಯಾರ್ಥಿ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಜೀವನದಲ್ಲಿ ಗುರಿ ಹೊಂದಿ ಸತತ ಪರಿಶ್ರಮದಿಂದ ಉನ್ನತ ಸ್ಥಾನ ಪಡೆಯಬಹುದು. ಶಾಲೆಯಲ್ಲಿ ಉತ್ತಮ ವಾತಾವರಣ ಹಾಗೂ ಶಿಕ್ಷಕರ ಬೆಂಬಲವಿದೆ. ವಿದ್ಯಾರ್ಥಿ ಜೀವನದಿಂದಲೇ ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಂಡು ಗುರಿ ಸಾಧನೆಯತ್ತ ಮನಸ್ಸನ್ನು ಕೇಂದ್ರಕರಿಸಿದರೆ ಉತ್ತಮ ಫಲಿತಾಂಶ ಲಭ್ಯವಾಗುತ್ತದೆ ಎಂದರು. ನಗರಸಭೆ ಆಯುಕ್ತ ನಂಜುಂಡಸ್ವಾಮಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಎ.ರಾಜಶೇಖರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಚನ್ನಬಸಪ್ಪ, ಕೆ.ಎಸ್. ನಾಗರಾಜು, ಮುಖ್ಯಶಿಕ್ಷಕಿ ಹಾಜೀರಾ ಬೇಗಂ, ಜಯಶೀಲ, ಗೌರಾಂಬಿಕೆ, ಪ್ರಕಾಶ್ ರಾಜ್, ಭೂಮಿಕ, ಭಾರ್ಗವಿ, ಮಧುಶ್ರೀ, ಅಹಲ್ಯ, ಪೂಜಾ, ಮೇಘನ ಉಪಸ್ಥಿತರಿದ್ದರು.

ಉದ್ಯಮಿ ಶಿವಣ್ಣ ಪುತ್ರಿ ರಮ್ಯಳ 2ನೇ ಪುಣ್ಯಸ್ಮರಣೆ
ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು–ಹಂಪಲು, ಬ್ರೆಡ್ ವಿತರಣೆ



ರಮ್ಯ ಅವರ 2ನೇ ಪುಣ್ಯಸ್ಮರಣೆ ಅಂಗವಾಗಿ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಲಾಯಿತು.

ತಿ.ನರಸೀಪುರ, ಜು.26– ಪಟ್ಟಣದ ಹೋಟೆಲ್ ಉದ್ಯಮಿ ಶಿವಣ್ಣ ಅವರ ಪುತ್ರಿ ರಮ್ಯ ಅವರ 2ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಬ್ರೆಡ್ ವಿತರಿಸಲಾಯಿತು.

ಹೋಟೆಲ್ ಉದ್ಯಮಿ ಶಿವಣ್ಣ ಅವರು ಕುಟುಂಬ ಸಮೇತರಾಗಿ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ 2 ವರ್ಷಗಳ ಹಿಂದೆ ಅಗಲಿದ ತಮ್ಮ ಮಗಳು ರಮ್ಯಳ ನೆನಪಿನಲ್ಲಿ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಿ ಮಗಳ ಅಗಲಿಕೆ ನೆನೆದು ಕಂಬನಿ ಮಿಡಿದರು.

ಉದ್ಯಮಿ ಶಿವಣ್ಣ ಮಾತನಾಡಿ, ಕಳೆದ ವರ್ಷ ಪಟ್ಟಣದ ಪೌರ ಕಾರ್ಮಿಕರಿಗೆ ಬಟ್ಟೆ ವಿತರಿಸಿ ಮಗಳ ಸ್ಮರಣೆ ಕಾರ್ಯಕ್ರಮ ಮಾಡಿದ್ದೆವು. ಈ ಬಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಿದ್ದೇವೆ. ಮಗಳ ನೆನಪು ನಮ್ಮ ಜೊತೆ ಅಜರಾಮರವಾಗಿ ಉಳಿಯಲೆಂದು ಪುಣ್ಯಸ್ಮರಣೆ ದಿನ ಪ್ರತಿವರ್ಷ ಏನಾದರೂ ಕೊಡುಗೆ ನೀಡಲು ತೀರ್ಮಾನಿಸಿದ್ದೇವೆ ಎಂದರು.

ಆಸ್ಪತ್ರೆ ಮೂಳೆ ಮತ್ತು ಕೀಲು ತಜ್ಞ ಡಾ.ದಯಾನಂದಬಾಬು ಮಾತನಾಡಿ, ಶಿವಣ್ಣ ಕುಟುಂಬದವರು ತಮ್ಮ ಮಗಳ ನೆನಪಿಗಾಗಿ ರೋಗಿಗಳಿಗೆ ಹಣ್ಣು, ಬ್ರೆಡ್ ನೀಡುವ ಮೂಲಕ ಉತ್ತಮ ಕೆಲಸ ಮಾಡಿದ್ದಾರೆ. ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ, ಪುಣ್ಯಸ್ಮರಣೆ ಮುಂತಾದ ಕಾರ್ಯಕ್ರಮಗಳಾದಾಗ ಕೆಲವರು ದುಂದು ವೆಚ್ಚಮಾಡಿ ಕೆಲಸಕ್ಕೆ ಬಾರದ ಆಚರಣೆ ಮಾಡಿಕೊಳ್ಳುವ ಬದಲು ಬಡವರು, ಅನಾಥರು, ರೋಗಿಗಳಿಗೆ ತಮ್ಮ ಕೈಲಾದ ಸಹಾಯ ಮಾಡಿ ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಲು ಮುಂದಾಗಬೇಕು ಎಂದರು.

ಈ ವೇಳೆ ಹರೀಶ್, ಮಹೇಶ್, ಎಲೆಕ್ಟ್ರಿಕ್ ಶಿವಣ್ಣ ಮತ್ತಿತರಿದ್ದರು.

ಪ್ರವಾಹ, ರೈತರ ಸಮಸ್ಯೆ ಬದಿಗಿಟ್ಟು, ಮುಡಾ, ವಾಲ್ಮೀಕಿ ನಿಗಮದ ಹಗರಣ ಮೂಲಕ
ವಿಧಾನಸಭೆಯಲ್ಲಿ ವಿಪಕ್ಷಗಳಿಂದ ಕ್ಷುಲ್ಲಕ ರಾಜಕಾರಣ
ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಕಿಡಿ



ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಮಾತನಾಡಿದರು.

ತಿ.ನರಸೀಪುರ, ಜು.26– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯ ಕ್ಷಮತೆ ಹಾಗೂ ದಕ್ಷತೆ ಕುಗ್ಗಿಸಲು ವಿಪಕ್ಷಗಳು ವಿಧಾನಸಭೆಯಲ್ಲಿ ಪ್ರವಾಹ ಮತ್ತು ರೈತರ ಸಮಸ್ಯೆಗಳನ್ನು ಬದಿಗಿಟ್ಟು ಮುಡಾ ನಿವೇಶನ ಮತ್ತು ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆಯನ್ನು ಮುಂದಿಟ್ಟುಕೊಂಡು ಕ್ಷುಲ್ಲಕ ರಾಜಕಾರಣ ಮಾಡುತ್ತಿವೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಕಿಡಿಕಾರಿದ್ದಾರೆ.

ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಸಂಬಂಧ ಸಚಿವರ ತಲೆದಂಡವಾಗಿದ್ದು, ತಪ್ಪಿತಸ್ಥರನ್ನು ಶಿಕ್ಷಿಸುವ ಕಾನೂನು ಕ್ರಮವನ್ನು ಕಾಂಗ್ರೆಸ್ ಸರ್ಕಾರ ತೆಗೆದುಕೊಂಡಿದೆ. ಸಿಎಂ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರ 3 ಎಕರೆ 16 ಗುಂಟೆ ಜಮೀನನ್ನು ಈ ಹಿಂದೆ ಸಿಎಂ ಆಗಿದ್ದ ಬಸವರಾಜ ಬೊಮ್ಮಾಯಿ ಅವರ ಸರ್ಕಾರದಲ್ಲಿ ಮುಡಾದವರೇ ಸ್ವಾಧೀನಪಡಿಸಿಕೊಂಡು ಪರ್ಯಾಯ ನಿವೇಶನ ಕೊಟ್ಟಿದ್ದಾರೆ. ಎರಡೂ ಪ್ರಕರಣದಲ್ಲೂ ಸ್ಪಷ್ಟತೆ ಇದ್ದರೂ ಜನಪರ ಆಡಳಿತಗಾರ ಸಿದ್ದರಾಮಯ್ಯ ಅವರನ್ನು ಹಣಿಯಲು ವಿಪಕ್ಷಗಳು ಅಹೋರಾತ್ರಿ ಧರಣಿ ಎಂಬ ನಾಟಕದ ಮೂಲಕ ದ್ವೇಷ, ಸುಳ್ಳಿನ ರಾಜಕಾರಣ ಮಾಡುತ್ತಿವೆ. ಜಾರಿ ನಿರ್ದೇಶನಾಲಯ ಮತ್ತು ಸಿಬಿಐನಂತಹ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಕೇಂದ್ರ ಸರ್ಕಾರದಿಂದ ಮುಖ್ಯಮಂತ್ರಿಗಳ ಸ್ಥೈರ್ಯವನ್ನೇ ಕುಸಿಯುವಂತೆ ಮಾಡಲು ಷಡ್ಯಂತ್ರ ರೂಪಿಸಲಾಗುತ್ತಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣಕ್ಕೆ ವಿಪಕ್ಷ ನಾಯಕರಾಗಿದ್ದಾಗಲೇ ವಿಶೇಷ ಘಟಕ (ಎಸ್‌ಸಿಪಿ/ಟಿಎಸ್ಪಿ) ಅನುದಾನಕ್ಕೆ ಹೋರಾಟ ಮಾಡಿದ್ದ ಸಿದ್ದರಾಮಯ್ಯ 2013ರಲ್ಲಿ ಮುಖ್ಯಮಂತ್ರಿಯಾಗುತ್ತಿದ್ದಂತೆ ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ 30,000 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಟ್ಟಿದ್ದರು. ಆದರೆ ಪ್ರಸ್ತುತ ಆ ಸಮುದಾಯಗಳಿಗೆ ಅನ್ಯಾಯ ಮಾಡುತ್ತಾರೆ ಎಂಬುದನ್ನು ನಂಬಲು ಸಾಧ್ಯವಿಲ್ಲ. ಗ್ಯಾರಂಟಿ ಯೋಜನೆಗಳನ್ನು ಬಡವರಿಗೆ ತಪ್ಪಿಸಲು ಈ ವಿಚಾರವನ್ನು ವಿಪಕ್ಷ ಬಿಜೆಪಿ ದೊಡ್ಡದು ಮಾಡಲು ಹೊರಟಿದೆ. ಇಂತಹ ರಾಜಕಾರಣಕ್ಕೆ ನಾಡಿನ ಜನರು ಸೊಪ್ಪು ಹಾಕಲ್ಲ, ಸಿದ್ದರಾಮಯ್ಯನವರಿಗೆ ಬೆಂಬಲವಾಗಿರಲಿದ್ದಾರೆ ಎಂದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಭಾವಿ ನಾಯಕರಾಗಿದ್ದರೆ ರಾಜ್ಯದ ಬಹು ನಿರೀಕ್ಷಿತ ಎತ್ತಿನಹೊಳೆ ಮತ್ತು ಮೇಕೆದಾಟು ಯೋಜನೆಗಳಿಗೆ ಕೇಂದ್ರದಿಂದ ಅನುಮೋದನೆ ಮತ್ತು ಅನುದಾನ ಎರಡನ್ನೂ ತರಲಿ. ಕೇಂದ್ರ ಸರ್ಕಾರದ ಪ್ರಸ್ತುತ ಆಯವ್ಯಯದಲ್ಲಿ ರಾಜ್ಯಕ್ಕೆ ಮತ್ತು ರೈತರಿಗೆ ಅನ್ಯಾಯವಾಗಿದ್ದರೂ, ಪ್ರಶ್ನಿಸಲಾಗದ ಪರಿಸ್ಥಿತಿಯಲ್ಲಿ ಅವರಿದ್ದಾರೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದ್ದರೂ ಬಿಜೆಪಿ ಸಂಸದರಿಗಾಗಲಿ ಅಥವಾ ಐವರು ಕೇಂದ್ರ ಸಚಿವರಿಗಾಗಲಿ ಪ್ರಶ್ನಿಸುವ ಧೈರ್ಯ ಇಲ್ಲವೇ ಇಲ್ಲ. ಮುಂದಿನ 4 ವರ್ಷಗಳ ಕಾಲ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಜನಾದೇಶ ಕಾಲ ಸನ್ನಿಹಿತವಾಗುವವರೆಗೂ ವಿಪಕ್ಷಗಳು ತಮ್ಮ ಜವಾಬ್ದಾರಿ ಅರಿಯಬೇಕು ಎಂದರು.

ಈ ವೇಳೆ ಕಾರ್ಮಿಕ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯೋಗೇಶ್, ಯುವ ಕಾಂಗ್ರೆಸ್ ಮುಖಂಡ ಮಹದೇವ್, ಜಯಶಂಕರ್, ಮಹದೇವಸ್ವಾಮಿ, ದಿವಾಕರ, ಪಾಪಣ್ಣಿ ಮತ್ತಿತರರಿದ್ದರು.

ಕೆ.ಸಿದ್ದಯ್ಯ ನಿಧನ



ಕೆ.ಆರ್.ನಗರ, ಜು.26– ಪಟ್ಟಣದ ಕೆಇಬಿ ಬಡಾವಣೆ ನಿವಾಸಿ, ನಿವೃತ್ತ ಭೂಮಾಪನ ಅಧಿಕಾರಿ ಕೆ.ಸಿದ್ದಯ್ಯ(92) ಶುಕ್ರವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಪಟ್ಟಣದ ಹೊರವಲಯದಲ್ಲಿರುವ ಕಂಠೇನಹಳ್ಳಿ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿಂಗಣ್ಣ



ಬೆಟ್ಟದಪುರ, ಜು.26– ಇಲ್ಲಿನ ಕೊಣಸೂರು ಗ್ರಾಮದ ನಿವಾಸಿ ನಿಂಗಣ್ಣ (85) ಶುಕ್ರವಾರ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವಮ್ಮ



ಬೆಟ್ಟದಪುರ, ಜು.26– ಗ್ರಾಮದ ನಿವಾಸಿ ಶಿವಮ್ಮ (75) ಶುಕ್ರವಾರ ಮುಂಜಾನೆ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಬೆಟ್ಟದಪುರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಆಷಾಢ ಶುಕ್ರವಾರ

ಚಾಮುಂಡಿಬೆಟ್ಟಕ್ಕೆ ಹರಿದು ಬಂದ ಭಕ್ತ ಸಾಗರ



ಆಷಾಢ ಮಾಸದ ಮೂರನೇ ಶುಕ್ರವಾರದ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಚಾಮುಂಡಿಬೆಟ್ಟಕ್ಕೆ ಆಗಮಿಸಿರುವ ಭಕ್ತ ಸಮೂಹ

ಮೈಸೂರು, ಜು.26(ಎಂಟಿವೈ)– ಆಷಾಢ ಮಾಸದ ಮೂರನೇ ಶುಕ್ರವಾರವಾದ ಇಂದು ಚಾಮುಂಡಿಬೆಟ್ಟದ ನಾಡದೇವಿ ಚಾಮುಂಡೇಶ್ವರಿ ದೇವಾಲಯದಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು ದೇವಿ ದರ್ಶನ ಪಡೆದು ಪುನೀತರಾದರು.




ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತುತ್ತಿರುವ ಭಕ್ತರು

ಶಕ್ತಿದೇವತೆಯ ಆರಾಧನೆಯ ಆಷಾಡ ಮಾಸದಲ್ಲಿ ನಾಡದೇವಿ ದರ್ಶನ ಪಡೆಯಲು ರಾಜ್ಯದ ವಿವಿಧ ಜಿಲ್ಲೆ ಹಾಗೂ ವಿವಿಧ ರಾಜ್ಯಗಳಿಂದಲೂ ಭಕ್ತರ ದಂಡು ಆಗಮಿಸಿತ್ತು. ಮುಂಜಾನೆಯಿಂದಲೇ ತಂಡೋಪ ತಂಡವಾಗಿ ಬೆಟ್ಟದತ್ತ ಆಗಮಿಸಿದ ಭಕ್ತರು ದೇವಿ ದರ್ಶನ ಪಡೆಯಲು ಸಾಲುಗಟ್ಟಿ ನಿಂತಿದ್ದರು. ಕೆಲವರು ಗುರುವಾರ ರಾತ್ರಿಯೇ ಬೆಟ್ಟಕ್ಕೆ ಆಗಮಿಸಿ, ದೇವಾಲಯದ ಮುಂದೆಯೇ ವಾಸ್ತವ್ಯ ಹೂಡಿದ್ದರು. ಬೆಳಗ್ಗೆ 6 ಗಂಟೆಗೆ ದೇವಾಲಯದ ದ್ವಾರ ತೆಗೆಯುತ್ತಿದ್ದಂತೆಯೇ ದರ್ಶನ ಪಡೆದು ಇಷ್ಟಾರ್ಥಕ್ಕಾಗಿ ಪ್ರಾರ್ಥಿಸಿದರು. ವಿಶೇಷ ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ವಿವಿಧ ಬಗೆಯ ಬಣ್ಣ ಬಣ್ಣದ ಹೂವುಗಳಿಂದ ಅಲಂಕರಿಸಲಾಗಿತ್ತು.

ವಿಶೇಷ ಪೂಜೆ: ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ಅರ್ಚಕರು ಶಕ್ತಿದೇವತೆ ತಾಯಿ ಚಾಮುಂಡೇಶ್ವರಿಗೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಿದರು. ಮುಂಜಾನೆ 3 ಗಂಟೆಗೆ ದೇವಿ ಕೆರೆಯಿಂದ ಪವಿತ್ರ ಜಲ ತಂದು ಚಾಮುಂಡೇಶ್ವರಿ ದೇವಿಗೆ ಮಹನ್ಯಾಸಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಸಹಸ್ರನಾಮಾರ್ಚನೆಯೊಂದಿಗೆ ನೇರಳೆ ಬಣ್ಣದ ಸೀರೆ ಹಾಗೂ ಆಭರಣಗಳಿಂದ ದೇವಿಗೆ ಅಲಂಕಾರ ನೆರವೇರಿಸಲಾಯಿತು. ಬಳಿಕ ಷೋಡಶೋಪಚಾರ ಪೂಜೆ ಹಾಗೂ ಮಂಗಳಾರತಿ ಜರುಗಿತು. ಬೆಳಗ್ಗೆ 6 ಗಂಟೆಗೆ ದೇವಾಲಯದ ಬಾಗಿಲು ತೆರೆದು ಭಕ್ತರ ದರ್ಶನಕ್ಕೆ ಮುಕ್ತಗೊಳಿಸಲಾಯಿತು. ಬೆಳಗ್ಗೆ 9.30ಕ್ಕೆ ದೇವಿಗೆ ಮಹಾ ಮಂಗಳಾರತಿ ಮತ್ತು ಸಂಜೆ 6 ರಿಂದ 7.30ರವರೆಗೆ ಅಭಿಷೇಕ ನೆರವೇರಿಸಲಾಯಿತು. ಬೆಳಗ್ಗೆ 6ರಿಂದ ರಾತ್ರಿ 10ರವರೆಗೂ ಸಹಸ್ರಾರು ಭಕ್ತರು ತಾಯಿಯ ದರ್ಶನ ಪಡೆದು ಧನ್ಯರಾದರು.

ಮೆಟ್ಟಿಲು ಮಾರ್ಗದಲ್ಲಿ: ಮೂರನೆ ಶುಕ್ರವಾರದ ಇಂದು ಹರಕೆ ಹೊತ್ತು ಮೆಟ್ಟಿಲು ಮೂಲಕ ಬೆಟ್ಟ ಹತ್ತುವ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ನೂಕು ನುಗ್ಗಲು ತಪ್ಪಿಸುವ ನಿಟ್ಟಿನಲ್ಲಿ ಪಾದದಿಂದ ಬೆಟ್ಟದವರೆಗೂ ಮೆಟ್ಟಿಲು ಮಾರ್ಗದಲ್ಲಿ ಬ್ಯಾರಿಕೇಡ್ ಅಳವಡಿಸಿ, ಬೆಟ್ಟ ಹತ್ತುವ ಮತ್ತು ಇಳಿಯುವವರು ಪ್ರತ್ಯೇಕವಾಗಿ ಸಂಚರಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಸಂಕಲ್ಪ ಮಾಡಿಕೊಂಡಿದ್ದ ಮಹಿಳೆಯರು, ಯುವತಿಯರು, ನವವಿವಾಹಿತೆಯರು ಪ್ರತಿಯೊಂದು ಮೆಟ್ಟಿಲುಗಳಿಗೆ ಹರಿಶಿನ–ಕುಂಕುಮ ಹಚ್ಚಿ, ಆರತಿ ಬೆಳಗುತ್ತಾ ಬೆಟ್ಟ ಹತ್ತುತ್ತಿದ್ದ ದೃಶ್ಯ ಕಂಡು ಬಂದಿತು.

ಇಂದು ಚಾಮುಂಡಿಬೆಟ್ಟಕ್ಕೆ ಸಾಲು ಮರದ ತಿಮ್ಮಕ್ಕ, ಸಂಸದ ಸುನೀಲ್ ಬೋಸ್, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಸೇರಿದಂತೆ ಇನ್ನಿತರರು ಆಗಮಿಸಿದ ದರ್ಶನ ಪಡೆದರು.



ಇಂದು ನಾಡದೇವಿಯ ವರ್ಧಂತಿ ಮಹೋತ್ಸವ: ಬೆಳಗ್ಗೆ 8 ಗಂಟೆಯಿಂದ ದರ್ಶನಕ್ಕೆ ಅವಕಾಶ

ಆಷಾಢ ಮಾಸದಲ್ಲಿ ಆಚರಿಸುವ ನಾಡದೇವಿ ಚಾಮುಂಡೇಶ್ವರಿ ವರ್ಧಂತಿ (ಜನ್ಮೋತ್ಸವ) ಮಹೋತ್ಸವ ನಾಳೆ(ಜು.27)ಬೆಳಗ್ಗೆ ವಿಜೃಂಭಣೆಯಿಂದ ನೆರವೇರಲಿದೆ. ತಾಯಿಯ ಜನ್ಮ ದಿನದ ಅಂಗವಾಗಿ ಎಣ್ಣೆ ಮಜ್ಜನ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ಜರುಗಿದ ಬಳಿಕ ಬೆಳಗ್ಗೆ 8 ಗಂಟೆಗೆ ದೇವಾಲಯದ ಬಾಗಿಲು ತೆರೆಯಲಾಗುತ್ತದೆ. ಈ ಹಿನ್ನೆಲೆಯಲ್ಲಿ ಬೆಟ್ಟಕ್ಕೆ ಬೆಳಗ್ಗೆ 6 ಗಂಟೆ ನಂತರ ಬಸ್ ವ್ಯವಸ್ಥೆ ಆರಂಭಿಸಲು ನಿರ್ಧರಿಸಲಾಗಿದೆ. ಶನಿವಾರ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದ್ದು, ಲಲಿತ ಮಹಲ್ ಪ್ಯಾಲೇಸ್ ಮೈದಾನದಿಂದ ದೇವಾಲಯದ ಆಡಳಿತ ಮಂಡಳಿ ಮಾಡಿರುವ ಬಸ್‌ಗಳಲ್ಲಿ ಭಕ್ತರು ಪ್ರಯಾಣಿಸಬಹುದಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಶಾಸ್ತ್ರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆಡ್‌ಪೂಲ್ & ವೊಲ್ವೆರಿನ್ (ಇಂ)	4 ಪ್ರದರ್ಶನಗಳು
ಸಂಗಂ	
ಕಾಟನ್‌ಪೇಟೆ ಗೇಟ್ (ಕ)	4 ಪ್ರದರ್ಶನಗಳು
ಲಿಡೋ	
ರಾಜಹುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನರಬಲಿ (ತೆ)	4 ಪ್ರದರ್ಶನಗಳು
ಪ್ರಭಾ	
ರಕ್ತಾಕ್ಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.8ಕ್ಕೆ, ಬೆ.10.40ಕ್ಕೆ, ರಾಯನ್ (ತ): ಮ.1.20ಕ್ಕೆ, ಸಂ.410ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ರಕ್ತಾಕ್ಷ (ಕ): ಬೆ.10.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಮ.12.50ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಲೆವೆಲ್ ಕ್ರಾಸ್ (ಮ): ಬೆ.10.25ಕ್ಕೆ.
ಸ್ಕ್ರೀನ್ 3	ಬ್ಯಾಡ್ ನ್ಯೂಸ್ (ಹಿಂ): ಬೆ10.30ಕ್ಕೆ, ಸಂ.4.15ಕ್ಕೆ, ರೂಪಾಂತರ (ಕ): ಮ.1.15ಕ್ಕೆ, ಫ್ಯಾಮಿಲಿ ಡ್ರಾಮಾ (ಕ): ರಾ.7.10ಕ್ಕೆ, ರುದ್ರವೀಣಾ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.35ಕ್ಕೆ, ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತೆ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀ ಚಾಮುಂಡೇಶ್ವರಿ ತಾಯಿ ಪ್ರಸಾದ ವಿನಿಯೋಗ



ಮೂರನೇ ಆಷಾಢ ಶುಕ್ರವಾರದ ಪ್ರಯುಕ್ತ ಮೈಸೂರಿನ ದಾಸಪ್ಪ ಸರ್ಕಲ್‌ನಲ್ಲಿ ಟಾಟಾ ಮ್ಯಾಜಿಕ್ ಮಾಲೀಕರು ಹಾಗೂ ಚಾಲಕರು ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿ ಪ್ರಸಾದ ವಿನಿಯೋಗ ಮಾಡಿದರು.

ಶ್ರೀ ಚಾಮುಂಡೇಶ್ವರಿ ಪೂಜೆ



ಮೂರನೇ ಆಷಾಢ ಶುಕ್ರವಾರ ಪ್ರಯುಕ್ತ ಮೈಸೂರು ನಗರ ಬಸ್ ನಿಲ್ದಾಣದ ಆಟೋ ಸ್ಟ್ಯಾಂಡ್‌ನ ಮಾಲೀಕರು ಮತ್ತು ಚಾಲಕರು ಚಾಮುಂಡೇಶ್ವರಿ ತಾಯಿಯ ಪೂಜೆ ಸಲ್ಲಿಸಿ, ಪ್ರಸಾದ ವಿನಿಯೋಗಿಸಿದರು.

ಜೈಲಿಂದ ರಿಲೀಸ್ ಆಗಿ ವಿಜಯೋತ್ಸವ ಆಚರಿಸಿದ ಗ್ಯಾಂಗ್‌ಸ್ಟರ್‌ಗೆ ಪೊಲೀಸರಿಂದ ತಕ್ಕ ಶಾಸ್ತಿ

ಮುಂಬೈ: ಜೈಲಿನಿಂದ ರಿಲೀಸ್ ಆದ ಗ್ಯಾಂಗ್‌ಸ್ಟರ್, ತೆರೆದ ಕಾರಿನಲ್ಲಿ ನಿಂತು, ಬೆಂಬಲಿಗರು ಬೈಕ್‌ನಲ್ಲಿ ಬರುವ ಮೂಲಕ ವಿಜಯೋತ್ಸವ ಆಚರಿಸಿದ್ದಾರೆ. ಇದನ್ನು ಕಂಡ ಪೊಲೀಸರು ರೌಡಿಗೆ ತಕ್ಕ ಶಾಸ್ತಿ ಮಾಡಿದ್ದಾರೆ.

ಮಹಾರಾಷ್ಟ್ರದ ಗ್ಯಾಂಗ್‌ಸ್ಟರ್ ಪಾಟಂಕರ್‌ನನ್ನು ಇತ್ತೀಚೆಗೆ ಜೈಲಿನಿಂದ ಬಿಡುಗಡೆ ಮಾಡಲಾಯಿತು. ಜೈಲಿಂದ ಬಿಡುಗಡೆಯಾದೊಡನೆ ರ್‍ಯಾಲಿ ಮೂಲಕ ವಿಜಯೋತ್ಸವ ಆಚರಿಸಿರುವ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ಇದನ್ನು ಕಂಡ ಪೊಲೀಸರು ಅವನನ್ನು ಮತ್ತೆ ಜೈಲಿಗೆ ಕಳುಹಿಸಿದ್ದಾರೆ. ಬೆತೆಲ್ ನಗರದಿಂದ ಅಂಬೇಡ್ಕರ್ ಚೌಕ್‌ವರೆಗೆ ನಡೆದ ರ್‍ಯಾಲಿಯಲ್ಲಿ ಸುಮಾರು 15 ದ್ವಿಚಕ್ರ ವಾಹನಗಳು ಪಾಲ್ಗೊಂಡಿದ್ದವು. ವೈರಲ್ ವೀಡಿಯೊಗಳಲ್ಲಿ, ಕಾರಿನ ಸನ್‌ರೂಫ್‌ನಿಂದ ಹೊರ ಬಂದಿದ್ದ ಪಾಟಂಕರ್ ತನ್ನ ಬೆಂಬಲಿಗರತ್ತ ಕೈ ಬೀಸುತ್ತಿದ್ದ. ಆತನ ಬೆಂಬಲಿಗರು 'ಕಮ್‌ಬ್ಯಾಕ್' ಶೀರ್ಷಿಕೆಯೊಂದಿಗೆ ಸಾಮಾಜಿಕ ಮಾಧ್ಯಮದಲ್ಲಿ ರ್‍ಯಾಲಿಯ ರೀಲ್‌ಗಳನ್ನು ಹಂಚಿಕೊಂಡಿದ್ದಾರೆ.

ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮನೋಭಾವ ಬೆಳೆಸಿಕೊಳ್ಳಬೇಕು

ಅಹಿಂದ ಜವರಪ್ಪ ಸಲಹೆ

ಮೈಸೂರು,ಜು.26(ಎಂಟಿವೈ)– ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಸಲಹೆ ನೀಡಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯ ದಲಿತ ವಿದ್ಯಾರ್ಥಿ ಒಕ್ಕೂಟವು ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಆಯೋಜಿಸಿತ್ತು.


ಮೈಸೂರು ವಿಶ್ವವಿದ್ಯಾನಿಲಯ ದಲಿತ ವಿದ್ಯಾರ್ಥಿ ಒಕ್ಕೂಟವು ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಆಯೋಜಿಸಿದ್ದ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, ಕೇಂದ್ರ, ರಾಜ್ಯ ಸರ್ಕಾರಗಳು ದಲಿತ, ಕಾರ್ಮಿಕ ಹಾಗೂ ವಿದ್ಯಾರ್ಥಿ ವಿರೋಧಿ ಕಾನೂನು ಜಾರಿಗೆ ತಂದರೂ ವಿದ್ಯಾರ್ಥಿಗಳು ಮೌನವಾಗಿದ್ದಾರೆ. ಯುವಜನರ ಮೌನವೂ ಆರೋಗ್ಯಕರ ಸಮಾಜದ ಲಕ್ಷಣವಲ್ಲ. ಶತಮಾನೋತ್ಸವ ಪೂರೈಸಿರುವ ಮೈಸೂರು ವಿಶ್ವವಿದ್ಯಾನಿಲಯ ಸ್ವಾತಂತ್ರ್ಯ ಪೂರ್ವದಿಂದಲೂ ರೈತ ಪರ ಪ್ರಗತಿಪರ ಚಿಂತನೆಗಳ ಹೋರಾಟಕ್ಕೆ ಪ್ರೇರಣೆಯಾಗಿದೆ ಅನ್ಯಾಯದ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಇಲ್ಲದೇ ಚಳವಳಿ ಸ್ಥಗಿತಗೊಂಡಿದೆ ಎಂದು ವಿಷಾದಿಸಿದರು.

ವಿದ್ಯಾರ್ಥಿಗಳು ಸೂಕ್ಷ್ಮ ಸಂವೇದನೆ ಮತ್ತು ಕ್ರಿಯಾಶೀಲರಾಗಬೇಕು. ವಿದ್ಯಾರ್ಥಿ ದೆಸೆಯಲ್ಲಿ ಸಂಘಟಿತರಾಗಿ ಅನ್ಯಾಯವನ್ನು ಪ್ರಶ್ನಿಸಬೇಕು. ಶೋಷಿತರು, ಅವಕಾಶ ವಂಚಿತ ಜನರ ಪರವಾಗಿ ಹೋರಾಟ ಮಾಡಿ ನ್ಯಾಯ ದೊರಕಿಸಿಕೊಡಬೇಕು. ವಿದ್ಯಾರ್ಥಿಗಳು ಬುದ್ಧ, ಬಸವ, ಡಾ.ಅಂಬೇಡ್ಕರ್ ಸೇರಿದಂತೆ ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಂಡು ಜಾತ್ಯಾತೀತರಾಗಿ ಉನ್ನತ ಶಿಕ್ಷಣ, ಉನ್ನತ ಉದ್ಯೋಗ ಪಡೆದು ಗ್ರಾಮೀಣ ಭಾಗದ ರೈತರು, ದಲಿತರು, ದುರ್ಬಲ ವರ್ಗದ ಏಳ್ಗೆಗಾಗಿ ದುಡಿಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್. ನಾಗರಾಜ್ ಬುದ್ಧ, ಬಸವ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಭೂ ವಿಜ್ಞಾನ ವಿಭಾಗದ ಪ್ರೊ.ಡಿ.ನಾಗರಾಜು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಡಾ. ಎಸ್.ಎನ್.ಸುಷ್ಮಾ, ವಕೀಲ ಉಮೇಶ್ ಎಸ್, ಪತ್ರಕರ್ತ ರಾ.ಚಿಂತನ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ, ಕರಾಮುವಿ ಆಡಳಿತ ಮಂಡಲಿ ಸದಸ್ಯ ಮಹೇಶ್ ಸೋಸಲೆ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಟರಾಜು ಶಿವಣ್ಣ, ಮಹಾರಾಜ ವಿದ್ಯಾರ್ಥಿ ನಿಲಯದ ಪ್ರಥಮ ದರ್ಜೆ ನೌಕರ ವಿನೋದ್ ಎಸ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸಚಿನ್ ಕೆಸ್ತೂರು ಇದ್ದರು.

ಮೆಲ್ಲಹಳ್ಳಿಯಲ್ಲಿ ಡಿಸಿ ನೇತೃತ್ವದಲ್ಲಿ ಡೆಂಗ್ಯೂ ಜಾಗೃತಿ ಕಾರ್ಯಕ್ರಮ

ಮೈಸೂರು, ಜು. 26 (ಆರ್‌ಕೆ)– ಜಿಲ್ಲೆಯಾದ್ಯಂತ ಡೆಂಗ್ಯೂ ಪ್ರಕರಣಗಳು ಕಂಡು ಬರುತ್ತಿರುವುದರಿಂದ ನಿಯಂತ್ರಣ ಸಂಬಂಧ ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.



ಮೈಸೂರು ತಾಲೂಕು ಮೆಲ್ಲಹಳ್ಳಿ ಪ್ರಾಥಮಿಕ ಕೇಂದ್ರದಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ ಅವರು ಡೆಂಗ್ಯೂ ಹರಡದಂತೆ ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳು, ಡೆಂಗ್ಯೂ ಪಾಸಿಟಿವ್ ಬಂದರೆ ಪಡೆದುಕೊಳ್ಳಬೇಕಾದ ಚಿಕಿತ್ಸೆ, ಮುಂಜಾಗ್ರತಾ ಕ್ರಮದ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸಿದರು. ಜ್ವರದ ಲಕ್ಷಣಗಳು ಕಂಡು ಬಂದ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ತೆರಳಿ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆಯುವ ಮೂಲಕ ಗುಣಪಡಿಸಿಕೊಂಡು ಡೆಂಗ್ಯೂ ಇತರರಿಗೆ ಹರಡದಂತೆ ಎಚ್ಚರಿಕೆ ವಹಿಸಬೇಕೆಂದೂ ಜಿಲ್ಲಾಧಿಕಾರಿಗಳು ಸಲಹೆ ನೀಡಿದರು.

ಅದೇ ವೇಳೆ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೆಲ್ಲಹಳ್ಳಿ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಡೆಂಗ್ಯೂ ರೋಗ ಲಕ್ಷಣದ ಸಮೀಕ್ಷೆ ನಡೆಸಿದರು. ಜಿ ಪಂ ಸಿಇಒ ಕೆ.ಎಂ. ಗಾಯತ್ರಿ, ಡಿಹೆಚ್‌ಓ ಡಾ. ಸಿ.ಪಿ. ಕುಮಾರಸ್ವಾಮಿ ಸೇರಿದಂತೆ ಹಲವು ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜು.29ಕ್ಕೆ ಬೆಂಗಳೂರಿಗೆ ಪಾದಯಾತ್ರೆ; ಬಿಜೆಪಿ ಕಚೇರಿಗೆ ಮುತ್ತಿಗೆ

ಹಿಂದುಳಿದ ವರ್ಗದ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಘೋಷಣೆ

ಮೈಸೂರು, ಜು.26(ಎಂಟಿವೈ)– ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವ ಬಿಜೆಪಿ ನಾಯಕರ ವರ್ತನೆ ಖಂಡಿಸಿ, ಜು.29ರಂದು ಮುಡಾ ಮುಂಭಾಗದಿಂದ ಬೆಂಗಳೂರಿಗೆ ಪಾದಯಾತ್ರೆಯಲ್ಲಿ ತೆರಳಿ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ನಡೆದಿರುವ 50:50ರ ಅನುಪಾತದ ನಿವೇಶನ ಹಂಚಿಕೆಯಲ್ಲಾಗಿರುವ ಹಗರಣಕ್ಕೂ ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ನೀಡಿರುವ ನಿವೇಶನಗಳಿಗೂ ಸಂಬಂಧವಿಲ್ಲ. ಆದರೂ, ಮುಡಾ ಹಗರಣ ಮುಂದಿಟ್ಟುಕೊಂಡು ಸಿಎಂ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಬಿಜೆಪಿ ನಾಯಕರು ಸಂಚು ನಡೆಸುತ್ತಿದ್ದಾರೆ. ಇದನ್ನು ಖಂಡಿಸಿ ಜು.29(ಸೋಮವಾರ) ಮುಡಾ ಕಚೇರಿ ಮುಂಭಾಗದಿಂದ ಪಾದಯಾತ್ರೆ ಆರಂಭಿಸಿ, ಬೆಂಗಳೂರಿನ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭ್ರಷ್ಟಾಚಾರದ ಪಿತಾಮಹರಾಗಿದ್ದಾರೆ. ಚೆಕ್ ಮೂಲಕವೇ ಲಂಚ ಸ್ವೀಕರಿಸಿ, ತಂದೆಯನ್ನು ಜೈಲಿಗಟ್ಟಿದ ಕೀರ್ತಿ ವಿಜಯೇಂದ್ರ ಅವರಿಗೆ ಸಲ್ಲುತ್ತದೆ. ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ವೇಳೆ, ವಿಜಯೇಂದ್ರ ಅಂದು ಮುಡಾ ಆಯುಕ್ತ ನಟೇಶ್ ಅವರೊಡನೆ ಸೇರಿಕೊಂಡು ಸುಮಾರು 1500 ಕೋಟಿ ಅವ್ಯವಹಾರ ನಡೆಸಿದ್ದಾರೆ. ಆ ಸಮಯದಲ್ಲೇ ಈ ಕುರಿತು ಸಿಬಿಐ ತನಿಖೆಗೆ ಒತ್ತಾಯಿಸಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಈ ಹಿಂದೆಯೇ ಪ್ರತಿಭಟನೆ ನಡೆಸಲಾಗಿತ್ತು. ಆಗ ಸುಮ್ಮನಿದ್ದ ಬಿಜೆಪಿ ನಾಯಕರು ಈಗ ಅದೇ ಪ್ರಕರಣ ಮುಂದಿಟ್ಟುಕೊಂಡು ಹೋರಾಟ ಮಾಡುತ್ತಿರುವುದು ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ಆರೋಪಿಸಿದರು.

ಬೆಂಗಳೂರಿಗೆ ಪಾದಯಾತ್ರೆ ಮೂಲಕ ತೆರಳಿ ಬಿಜೆಪಿ ಕಚೇರಿ ಮುತ್ತಿಗೆ ಹಾಕುವ ಹೋರಾಟಕ್ಕೆ ಪ್ರಗತಿಪರ ಸಂಘಟನೆಗಳು ಹಾಗೂ ಕಾಂಗ್ರೆಸ್ ಕೈಜೋಡಿಸಲಿವೆ. ತಮ್ಮ ಅವಧಿಯಲ್ಲಿಯೇ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆಸಿರುವ ಬಿಜೆಪಿ, ಇದೀಗ ಸುಳ್ಳು ಆರೋಪ ಮಾಡುವ ಮೂಲಕ ಜನರಲ್ಲಿ ತಪ್ಪು ಸಂದೇಶ ರವಾನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಜನರಿಗೆ ಸತ್ಯ ಸಂಗತಿ ತಿಳಿಸುವುದರೊಂದಿಗೆ ಬಿಜೆಪಿ ಆರೋಪ ಖಂಡಿಸಲು ಪಾದಯಾತ್ರೆ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಸರ್ಕಾರ ಮುಡಾ ಹಗರಣ ಕುರಿತಂತೆ ತನಿಖಾ ಆಯೋಗ ರಚಿಸಿದೆ. ಹಿರಿಯ ಅಧಿಕಾರಿಗಳ ಸಮಿತಿ ಕೆಲಸ ಮಾಡುತ್ತಿದೆ. ವರದಿ ಬಂದ ಬಳಿಕ ಸತ್ಯಾಂಶ ಹೊರ ಬೀಳಲಿದೆ. ಹೀಗಿದ್ದರೂ ಬಿಜೆಪಿ ವಿಷಯ ಎತ್ತಿಕೊಂಡು ಬೂಟಾಟಿಕೆಯ ಹೋರಾಟ ನಡೆಸುತ್ತಿದೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರಿ ನೌಕರರು ಆರ್‌ಎಸ್‌ಎಸ್ ಸದಸ್ಯರಾಗಬಹುದಾಗಿದೆ ಎಂಬ ಸುತ್ತೋಲೆ ಹೊರಡಿಸಿರುವುದು ಬಿಜೆಪಿ ಅಜೆಂಡಾ ಆಗಿದೆ. ಅದು ಕೋಮುವಾದಿ ಸಂಘಟನೆಯಾಗಿದ್ದು, ಈಗ ತಮಗೆ ಸ್ಪಷ್ಟ ಬಹುಮತವಿಲ್ಲ ಎಂಬ ಕಾರಣದಿಂದಾಗಿ ಬಿಜೆಪಿ ಈ ಕೆಲಸಕ್ಕೆ ಮುಂದಾಗಿದೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ವಿವಿಧ ಸಮುದಾಯಗಳ ಮುಖಂಡರಾದ ಹೆಚ್.ಎಸ್. ಪ್ರಕಾಶ್, ರವಿನಂದನ್, ಯೋಗೇಶ್ ಉಪ್ಪಾರ್, ಶಿವಶಂಕರ ಮೂರ್ತಿ, ಲೋಕೇಶ್ ಕುಮಾರ್ ಮಾದಾಪುರ, ರವಿ ನಜರ್‌ಬಾದ್ ಇದ್ದರು.

ನಾಳೆ ಡ್ರಮ್ಸ್ ವಿಭಾಗದ ಪರೀಕ್ಷೆ

ಮೈಸೂರು,ಜು.26(ಎಂಟಿವೈ)– ಮೈಸೂರಿನ ವಿಶ್ವೇಶ್ವರ ನಗರ ಎರಡನೇ ಹಂತದಲ್ಲಿನ ಮಹರ್ಷಿ ವಿದ್ಯಾ ಸಂಸ್ಥೆ ಆವರಣದಲ್ಲಿ ಜು.28ರಂದು ಬೆಳಗ್ಗೆ 10ರಿಂದ ಟ್ರಿನಿಟಿ ಸ್ಕೂಲ್ ಆಫ್ ಲಂಡನ್ ಡ್ರಮ್ಸ್ ವತಿಯಿಂದ ಡ್ರಮ್ಸ್ ವಿಭಾಗದ ಪರೀಕ್ಷೆಗಳು ನಡೆಯುತ್ತಿವೆ. ಇದರಲ್ಲಿ ಸುಮಾರು 24 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಪ್ರಸಾದ್ ಸ್ಕೂಲ್ ಆಫ್ ರಿದಂಸ್ ತಾಳವಾದ್ಯ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ಸಿ.ಆರ್. ರಾಘವೇಂದ್ರ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರಂಭಿಕ ಗ್ರೇಡ್‌ನಿಂದ ಎಂಟನೇ ಗ್ರೇಡ್‌ವರೆಗೆ ಪರೀಕ್ಷೆ ನಡೆಲಿದೆ. ಈ ಬಾರಿ ಆನ್‌ಲೈನ್ ಮೂಲಕ ಪರೀಕ್ಷೆ ನಡೆಸುತ್ತಿದ್ದು, ಉತ್ತೀರ್ಣರಾದವರಿಗೆ ಲಂಡನ್‌ನಲ್ಲಿರುವ ಸಂಸ್ಥೆ ಪ್ರಮಾಣಪತ್ರ ನೀಡುತ್ತದೆ. ಹಲವರಿಗೆ ಡ್ರಮ್ಸ್ ಬಗ್ಗೆ ಆಸಕ್ತಿ ಇದ್ದರೂ ಎಲ್ಲಿ ತರಬೇತಿ ದೊರೆಯುತ್ತದೆ ಎಂಬ ಮಾಹಿತಿ ಇಲ್ಲ. ಆದರೆ ತಮ್ಮ ಸಂಸ್ಥೆ ಕಳೆದ 18 ವರ್ಷಗಳಿಂದ ಈ ತರಬೇತಿ ನೀಡುತ್ತಿದೆ. ಈಗಾಗಲೇ ಸಾವಿರಾರು ಮಂದಿ ಇದರ ಪ್ರಯೋಜನ ಪಡೆದಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಿರೂಪಕ ಅಜಯ್‌ಶಾಸ್ತ್ರಿ, ಸಂಜೀವ್, ಜಗದೀಶ್, ಕುಮಾರಸ್ವಾಮಿ ಇದ್ದರು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	124.38 ಅಡಿ
ಒಳಹರಿವು	103327 ಕ್ಯೂಸೆಕ್
ಹೊರಹರಿವು	102200 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಶುಕ್ರವಾರ	2282.27 ಅಡಿ
ಒಳಹರಿವು	27500 ಕ್ಯೂಸೆಕ್
ಹೊರಹರಿವು	30000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2855.88 ಅಡಿ
ಒಳಹರಿವು	20000 ಕ್ಯೂಸೆಕ್
ಹೊರಹರಿವು	20000 ಕ್ಯೂಸೆಕ್

ಹಸಿರು ನಮ್ಮ ಉಸಿರು

ಪದವಿ ಪೂರ್ವ ಕಾಲೇಜು ಬೋಧಕ ಹಾಗೂ ಬೋಧಕೇತರ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಅಶೋಕ ರಸ್ತೆ, ಮೈಸೂರು – 570001

ನಿವೇಶನಾಕಾಂಕ್ಷಿಗಳ ವಿಶೇಷ ಸಭೆ

ದಿನಾಂಕ 28.07.2024ನೇ ಭಾನುವಾರ ವೇಳೆ ಬೆಳಗ್ಗೆ 10.30 ಗಂಟೆಗೆ ಸ್ಥಳ: ಗುರುರೆಸಿಡೆನ್ಸಿ ಹೋಟೆಲ್, ಮೆಟ್ರೋಪೋಲ್ ಹೋಟೆಲ್ ಪಕ್ಕ, ಜೆ.ಎಲ್.ಬಿ ರಸ್ತೆ ಮೈಸೂರು. **ಶಾಂತಿನಿಕೇತನ ಪದವಿ ಪೂರ್ವ ನಗರ ನಾಗವಾಲ 3** ಮೈಸೂರು ಇಲ್ಲಿ ನಿರ್ಮಿಸುತ್ತಿರುವ **MUDA Approved** ನಿವೇಶನಗಳನ್ನು ಪಡೆಯಲು ಸುವರ್ಣಾವಕಾಶ ನಿವೇಶನ ಬುಕ್ಕಿಂಗ್ ಇರುತ್ತದೆ. ಬೋಧಕರು ಹಾಗೂ ಬೋಧಕೇತರರು ಎಲ್ಲಾ ಇಲಾಖೆ ಸಿಬ್ಬಂದಿಗಳು ಮತ್ತು ಇತರರಿಗೂ ನಿವೇಶನ ಪಡೆಯಲು ಅವಕಾಶವಿರುತ್ತದೆ.ಸಂಪರ್ಕಿಸಿ:

9845173557, 9449082111, 8904867833

CHANGE OF NAME

I **UMESH DODDAMANE PRABHAKAR** S/o D T Prabhakar Residing at No.1137, Gange road , 3rd cross, G and H Block Kuvempunagara, Mysore-570023, Karnataka, India. Have changed My name As **UMESHA DODDAMANE PRABHAKAR**, sworn before Notary Geetha R , Mysuru city. Dated 25-07-2024.

Sd/- UMESHA DODDAMANE PRABHAKAR

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಮುಖ್ಯ ವೈದ್ಯಾಧಿಕಾರಿಗಳ ಕಛೇರಿ, ತಾಲ್ಲೂಕು ಆಸ್ಪತ್ರೆ, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ.

ದೂರವಾಣಿ ಸಂಖ್ಯೆ : 08223–274560, Email ID: cmoppatna@gmail.com

ಸಂಖ್ಯೆ:ತಾಆಪಿಪ/ಟೆಂಡರ್/ಗ್ರೂಪ್‌ಡಿ/01/2024–25 ದಿನಾಂಕ:23.07.2024

ಸಂಖ್ಯೆ:ತಾಆಪಿಪ/ಟೆಂಡರ್/ನಾನ್–ಕ್ಲಿನಿಕಲ್/02/2024–25,

ಸಂಖ್ಯೆ:ತಾಲಿಪಿಪ/ಟೆಂಡರ್/ಸಿ.ಪಥ್ಯಹಾರ/03/2024–25

ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ ಇಲ್ಲಿಗೆ 2024–25 ನೇ ಸಾಲಿನಲ್ಲಿ ಹೊರ ಗುತ್ತಿಗೆ ಆಧಾರದ ಮೇರೆ ಗ್ರೂಪ್ ಡಿ ಮತ್ತು ನಾನ್ ಕ್ಲಿನಿಕಲ್ ಸೇವೆ ಹಾಗೂ ಒಳ ರೋಗಿಗಳಿಗೆ ಸಿದ್ದ ಪಡಿಸಿದ ಪಥ್ಯಹಾರ ಸರಬರಾಜು ಮಾಡಲು ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ. ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು

1 ಗ್ರೂಪ್ ಡಿ ಟೆಂಡನ್ನು ಇ–ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ DHFWS/2024-25/SE0884 : **05.08.2024 ರ ಸಂಜೆ 04:00 ಗಂಟೆ ರವರೆಗೆ**

2. ನಾನ್ ಕ್ಲಿನಿಕಲ್ ಸೇವೆ ಟೆಂಡನ್ನು ಇ–ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ DHFWS/2024-25/SE0397 : **05.08.2024 ರ ಸಂಜೆ 04:00 ಗಂಟೆ ರವರೆಗೆ**

3. ಒಳ ರೋಗಿಗಳಿಗೆ ಸಿದ್ದ ಪಡಿಸಿದ ಪಥ್ಯಹಾರ ಮತ್ತು ಪ್ರಥಮ ದರ್ಜೆ ಬ್ರೆಡ್ ಟೆಂಡರ್ ಅನ್ನು ಇ–ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ DHFWS/2024-25/SE0935 : **16.08.2024 ಅಪರಾಹ್ನ 04:30 ಗಂಟೆ.**

DIPR/DDMYS-320/KSMCA-228/2024-25 ಸಹಿ/– ಮುಖ್ಯ ವೈದ್ಯಾಧಿಕಾರಿಗಳು, ತಾಲ್ಲೂಕು ಆಸ್ಪತ್ರೆ, ಪಿರಿಯಾಪಟ್ಟಣ, ಮೈಸೂರು

ಕರ್ನಾಟಕ ಸರ್ಕಾರ

ಪುರಸಭಾ ಕಾರ್ಯಾಲಯ, ಕೃಷ್ಣರಾಜಪೇಟೆ – 571426, ಮಂಡ್ಯ ಜಿಲ್ಲೆ

ದೂರವಾಣಿ: 08230–262224, E-Mail: ka.krishnarajapete.tmc@gmail.com, Web:www.krishnarajapetetown.mrc.gov.in

ನಂ:ಪುಸಕೆ/ತಾಂ.ಶಾ/ಟೆಂ.ಪ್ರ–50/2024–25 ದಿ:25.07.2024

ಟೆಂಡರ್ ಪ್ರಕಟಣೆ

ವಿಷಯ: ವಿವಿಧ ಅನುದಾನಗಳ ಅಡಿ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ.

ವಿಷಯಕ್ಕೆ ಸಂಬಂಧಿಸಿದಂತೆ, ಕೃಷ್ಣರಾಜಪೇಟೆ, ಪುರಸಭೆಯ ತಾಂತ್ರಿಕ ಶಾಖೆಗೆ ಸಂಬಂಧಿಸಿದಂತೆ, 2019–20 ಮತ್ತು 2022–23 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನಗಳ ಅಡಿ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಅರ್ಹ ಗುತ್ತಿಗೆದಾರರು ಭಾಗವಹಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಯನ್ನು, ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ, ಕೃಷ್ಣರಾಜಪೇಟೆ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ http://www.krishnarajapetetown.gov.in ನಲ್ಲಿ ಮತ್ತು https://kppp.karnataka.gov.in/ ನಲ್ಲಿ ವೀಕ್ಷಿಸಬಹುದು. ಆನ್‌ಲೈನ್ ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17.08.2024 ಸಂಜೆ 5.30 ರೊಳಗೆ.** ಆನ್‌ಲೈನ್ ನಲ್ಲಿ ಟೆಂಡರ್ ತೆರೆಯುವ ದಿನಾಂಕ: (ತಾಂತ್ರಿಕ ಲಕೋಟೆ) : **20.08.2024 ಬೆಳಿಗ್ಗೆ 11.00 ಗಂಟೆಗೆ.** ಆನ್‌ಲೈನ್ ನಲ್ಲಿ ಟೆಂಡರ್ ತೆರೆಯುವ ದಿನಾಂಕ: (ಆರ್ಥಿಕ ಲಕೋಟೆ) :**22.08.2024 ಬೆಳಿಗ್ಗೆ 11.00 ಗಂಟೆಗೆ.**

ಕ್ರ ಸಂ	ಕಾಮಗಾರಿ ಇಂಡೆಂಟ್ ವಿವರ	ಮೀಸಲಾತಿ	ಅನುದಾನ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	DMA/2024-25/RD/WORK_INDENT21762	ಎಸ್.ಟಿ	2022–23 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	18750.00
2	DMA/2024-25/RD/WORK_INDENT21773	ಎಸ್.ಟಿ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	18750.00
3	DMA/2024-25/RD/WORK_INDENT21783	ಎಸ್.ಸಿ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	18750.00
4	DMA/2024-25/RD/WORK_INDENT21785	ಎಸ್.ಸಿ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	18750.00
5	DMA/2024-25/RD/WORK_INDENT21780	ಎಸ್.ಸಿ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	10.00	12500.00
6	DMA/2024-25/RD/WORK_INDENT21781	ಎಸ್.ಸಿ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	10.00	12500.00
7	DMA/2024-25/RD/WORK_INDENT21763	ಸಾಮಾನ್ಯ	2022–23 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	10.00	25000.00
8	DMA/2024-25/RD/WORK_INDENT21764	ಸಾಮಾನ್ಯ	2022–23 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
9	DMA/2024-25/RD/WORK_INDENT21765	ಸಾಮಾನ್ಯ	2022–23 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	20.00	50000.00
10	DMA/2024-25/RD/WORK_INDENT21767	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
11	DMA/2024-25/RD/WORK_INDENT21768	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	20.00	50000.00
12	DMA/2024-25/RD/WORK_INDENT21769	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
13	DMA/2024-25/RD/WORK_INDENT21770	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
14	DMA/2024-25/RD/WORK_INDENT21771	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	05.00	12500.00
15	DMA/2024-25/RD/WORK_INDENT21784	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
16	DMA/2024-25/RD/WORK_INDENT21786	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
17	DMA/2024-25/RD/WORK_INDENT21788	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	45.00	90000.00
18	DMA/2024-25/RD/WORK_INDENT21772	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	20.00	50000.00
19	DMA/2024-25/RD/WORK_INDENT21774	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	5.00	12500.00
20	DMA/2024-25/RD/WORK_INDENT21775	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
21	DMA/2024-25/RD/WORK_INDENT21776	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
22	DMA/2024-25/BD/WORK_INDENT21777	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	15.00	37500.00
23	DMA/2024-25/RD/WORK_INDENT21779	ಸಾಮಾನ್ಯ	2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ	20.00	50000.00

ವಾಪಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/200/2024–25 ಸಹಿ/–ಮುಖ್ಯಾಧಿಕಾರಿ, ಪುರಸಭೆ, ಕೃಷ್ಣರಾಜಪೇಟೆ

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.

ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ

ಸನ್ಮಾನ್ಯ ಸಹಕಾರಿ ಬಂಧುಗಳೇ ಮೇಲ್ಕಂಡ ಸಂಘದ 2023–24ನೇ ಸಾಲಿನ **ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು** ದಿನಾಂಕ: 30–07–2024ನೇ ಮಂಗಳವಾರ ಬೆಳಗ್ಗೆ 11–00 ಗಂಟೆಗೆ, ಸ್ಥಳ: ಸಂಘದ ಆವರಣ, ತಿ.ನರಸೀಪುರದಲ್ಲಿ ಏರ್ಪಡಿಸಿರುತ್ತದೆ.

ಸಂಘದ ಅಧ್ಯಕ್ಷರಾದ **ಶ್ರೀಯುತ ಮಲ್ಲಣ್ಣರವರ** ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಸಂಘದ ಮಾನ್ಯ ಸದಸ್ಯರುಗಳು ಹಾಗೂ ಆಹ್ವಾನಿತರು ಸಕಾಲಕ್ಕೆ ಆಗಮಿಸಿ ಮಹಾಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ಈ ಮೂಲಕ ಕೋರಲಾಗಿದೆ. ಆಹ್ವಾನ ಪತ್ರಿಕೆ ತಲುಪದೇ ಇರುವ ರೈತರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕೆಂದು ಮನವಿ

ಕಾರ್ಯಕಾರಿ ಮಂಡಳ ಅಪ್ಪಣೆ ಮೇರೆಗೆ, ಸಹಿ/– ಡಿ.ಎಂ.ಶಿವಕುಮಾರ್,

ಪ್ರಭಾರ ಮುಖ್ಯಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ತಿ.ನರಸೀಪುರ

ಸ್ಥಳ: ತಿ.ನರಸೀಪುರ, ದಿನಾಂಕ: 26–07–2024